ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಆಗಸ್ಟ್ 30 ಶನಿವಾರ 2025

₹4

ಸಂಪುಟ: 46 | ಸಂಚಿಕೆ: 133 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ಮೈಸೂರು ಮಿತ್ರ

ಕನ್ನಡ ಪರ ಸಂಘಟನೆಗಳು ಹುಟ್ಟಿಕೊಂಡಷ್ಟೇ ವೇಗವಾಗಿ ಮರೆಯಾಗುತ್ತಿವೆ: ಜಿಟಿಡಿ ವಿಷಾದ

ಮೈಸೂರು, ಆ.29(ಜಿಎ)–ಕನ್ನಡಪರ ಸಂಘಟನೆಗಳು ಹುಟ್ಟಿಕೊಂಡಷ್ಟೇ ವೇಗವಾಗಿ ಮರೆಯಾಗುತ್ತಿರುವುದನ್ನು ಕಾಣುತ್ತಿದ್ದೇವೆ ಎಂದು ವಿಷಾದ ವ್ಯಕ್ತಪಡಿಸಿದ ಶಾಸಕ ಜಿ.ಟಿ.ದೇವೇಗೌಡ, ಈ ಪರಿಸ್ಥಿತಿ ಬರಬಾರದು. ಹೋರಾಟ ಸಂಘಟಿಸುವ ಮೊದಲು ಅದರಲ್ಲಿನ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ಮಾಡಬೇಕು ಎಂದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನ ಬಳಗ ರಾಜ್ಯ ಘಟಕವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿ, ಮಾತನಾಡಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನ ಬಳಗ ರಾಜ್ಯ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಹೋರಾಟಗಳು ಯಶಸ್ವಿಯಾದರೆ ಸಂಘಟನೆಗಳು ಬಲಿಷ್ಠವಾಗುತ್ತದೆ ಎಂದರು. ಡಾ.ರಾಜಕುಮಾರ್, ವಾಟಾಳ್ ನಾಗರಾಜ್ ಮುಂತಾದವರು ಕನ್ನಡ ಉಳಿವಿಗಾಗಿ ಹೋರಾಟ ಮಾಡಿದ್ದಾರೆ. ಅವರು ಉಳಿಸಿರುವ ಕನ್ನಡದ ಕಂಪನ್ನು ಸಂಘಟನೆಗಳು ಮುಂದುವರೆಸಬೇಕು' ಎಂದು ಸಲಹೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಕನ್ನಡ ಪರ ಹೋರಾಟದಲ್ಲಿ ಭಾಗವಹಿಸಿ ಪ್ರಕರಣ ದಾಖಲಿಸಿಕೊಂಡು ನ್ಯಾಯಾಲಯಕ್ಕೆ ಅಲೆಯುತ್ತಿರುವ ಹೋರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ವಾಪಸ್ ಪಡೆಯುವಂತೆ ಸದನದಲ್ಲಿ ಹೋರಾಟ ನಡೆಸುತ್ತೇನೆ ಎಂದರು.

ಕರ್ನಾಟಕ ನೆಲ, ಜಲ, ಭಾಷೆ ಉಳಿಸಲು ಸಹಕಾರ ಕಡಿಮೆಯಿದೆ. ಕನ್ನಡ ಮಾತನಾಡುವವರು ಮೈಸೂರಿನಲ್ಲೂ ಕಡಿಮೆಯಾಗಿದ್ದಾರೆ. ಸರ್ಕಾರ ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯುತ್ತಿದೆ. ಆದರೆ ಕನ್ನಡದ ಹೋರಾಟಗಾರರ ವಿರುದ್ಧದ ಪ್ರಕರಣ ಹಿಂಪಡೆಯಲು ಮನಸ್ಸು ಮಾಡುತ್ತಿಲ್ಲ. ಸ.ರ. ಸುದರ್ಶನ್ ನಿಧನರಾದಾಗ ಅವರ ವಿರುದ್ಧ 18 ಪ್ರಕರಣಗಳಿದ್ದವು. ರಾಜಕೀಯ ಕಟ್ಟಿಕೊಂಡು ಹೋದರೆ ಕನ್ನಡ ತಾಯಿ ರಕ್ಷಣೆ ಕಷ್ಟ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ರಾಜ್ಯಾಧ್ಯಕ್ಷ ಎಂ.ಲಿಂಗರಾಜು, ರಾಜ್ಯ ಕಾರ್ಯದರ್ಶಿ ಕೆ.ಆರ್. ಚರಣ್ ರಾಜ್, ಉಪಾಧ್ಯಕ್ಷ ಎಂ. ಮಲ್ಲೇಶ್, ಆನಂದ್ ಕುಮಾರ್ ಗೌಡ, ಖಜಾಂಚಿ ಮಹದೇವ ಸ್ವಾಮಿ, ಮಾನವ ಹಕ್ಕು ಸಮಿತಿಯ ರಾಜ್ಯಾಧ್ಯಕ್ಷೆ ಬಿ.ಪಿ.ಸುಶೀಲ ಉಪಸ್ಥಿತರಿದ್ದರು.

ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಸೆ.28, 29ರಂದು ಡ್ರೋನ್ ಶೋ ಪ್ರಾಯೋಗಿಕ ಪ್ರದರ್ಶನ

● ಅ.1 ಮತ್ತು 2ರಂದು ಮುಖ್ಯ ಪ್ರದರ್ಶನ ● ಈ ಬಾರಿ ನಾಲ್ಕು ದಿನ ಡ್ರೋನ್ ಶೋ ನೋಡುವ ಅವಕಾಶ

ಮೈಸೂರು, ಆ.29(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅ.1 ಮತ್ತು 2ರಂದು ನಡೆಸಲು ಉದ್ದೇಶಿಸಿರುವ ಡ್ರೋನ್ ಪ್ರದರ್ಶನದ ತಾಲೀಮನ್ನು ಸೆ.28 ಮತ್ತು 29ರಂದು ನಡೆಸಲು ತೀರ್ಮಾನಿಸಲಾಗಿದೆ.



ಮೈಸೂರಿನ ವಿಜಯನಗರದಲ್ಲಿರುವ ಸೆಸ್ಕ್ ಮುಖ್ಯ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ದೀಪಾಲಂಕಾರ ಹಾಗೂ ಡ್ರೋನ್ ಶೋ ಕುರಿತ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ನಾಡಹಬ್ಬ ದಸರಾ ಮಹೋತ್ಸವದಲ್ಲಿ ಈ ಬಾರಿ ದೀಪಾಲಂಕಾರವನ್ನು ಅತ್ಯಂತ ಆಕರ್ಷಕವಾಗಿ ಆಯೋಜಿಸಲು ನಿರ್ಧರಿಸಲಾಗಿದ್ದು, ಅದಕ್ಕಾಗಿ ಸಿದ್ಧತಾ ಕಾರ್ಯ ಬಿರುಸಾಗಿ ನಡೆಯುತ್ತಿದೆ. ಈ ಬಾರಿ ಪಂಜಿನ ಕವಾಯತು ಮೈದಾನದಲ್ಲಿ ನಡೆಯುವ ಡ್ರೋನ್ ಶೋ ಪ್ರಮುಖ ಆಕರ್ಷಣೀಯ ಕೇಂದ್ರ ಬಿಂದುವಾಗಲಿದ್ದು, ಎರಡು ದಿನ ತಾಲೀಮು ಹಾಗೂ ಎರಡು ದಿನ ಮುಖ್ಯ ಪ್ರದರ್ಶನ ಆಯೋಜಿಸಲು ತೀರ್ಮಾನಿಸಲಾಗಿದೆ.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ಶುಕ್ರವಾರ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ದಸರಾ ದೀಪಾಲಂಕಾರ ಹಾಗೂ ಡ್ರೋನ್ ಶೋ ಕುರಿತ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಕೈಗೊಂಡಿರುವ ಕ್ರಮ ಕುರಿತಂತೆ ಮಾಹಿತಿ ಪಡೆದ ಬಳಿಕ ಮಾತನಾಡಿ, ದಸರಾ ಸಮೀಪಿಸುತ್ತಿದ್ದು, ದೀಪಾಲಂಕಾರ ಕುರಿತಂತೆ ತ್ವರಿತಗತಿಯಲ್ಲಿ ಸಿದ್ದತಾ ಕಾರ್ಯ ಪೂರ್ಣಗೊಳಿಸಬೇಕು. ಈ ಬಾರಿ ದೀಪಾಲಂಕಾರದ ವ್ಯವಸ್ಥೆ ನೋಡುಗರ ಕಣ್ಮನ ಸೆಳೆಯುವಂತೆ ಮಾಡಬೇಕು. ಎಲ್ಲಿಯೂ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಅಲ್ಲದೆ, ಬನ್ನಿಮಂಟಪದ ಕವಾಯತು ಮೈದಾನದಲ್ಲಿ ನಡೆಸುವ ಡ್ರೋನ್ ಶೋಗೆ ತಯಾರಿ ಮಾಡಿಕೊಳ್ಳಬೇಕು. ಸೆ.28 ಮತ್ತು 29ರಂದು ಡ್ರೋನ್ ಶೋ ಪ್ರಾಯೋಗಿಕ ಪ್ರದರ್ಶನ ಏರ್ಪಡಿಸಬೇಕು. ಆಯುಧ ಪೂಜೆ ದಿನ ಅ.1ರಂದು ಸಂಜೆ ನಡೆಯುವ ಪಂಜಿನ ಕವಾಯತು ಪ್ರದರ್ಶನ ತಾಲೀಮಿನ ವೇಳೆ ಹಾಗೂ ಜಂಬೂಸವಾರಿ ದಿನ(ಅ.2) ಸಂಜೆ ನಡೆಯುವ ಪಂಜಿನ ಕವಾಯತು ಪ್ರದರ್ಶನದಲ್ಲಿ ಡ್ರೋನ್ ಶೋ ನಡೆಸಲು ಸಿದ್ಧತೆ ಮಾಡಿಕೊಳ್ಳುವಂತೆ ಸೂಚನೆ ನೀಡಿದರು.

ಈ ಬಾರಿ ದಸರಾ ಸಂದರ್ಭದಲ್ಲಿ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಏರ್ ಶೋ ನಡೆಯಲಿದೆ. ಇದರ ನಡುವೆ ಡ್ರೋನ್ ಶೋ ನಡೆಸಬೇಕಿದೆ. ಪಂಜಿನ ಕವಾಯತು ತಾಲೀಮಿಗೆ ಅಡಚಣೆ ಆಗದಂತೆ ಡ್ರೋನ್ ಶೋ ಪ್ರಾಯೋಗಿಕ ಪ್ರದರ್ಶನ ನಡೆಸಲು ಗಮನ ಹರಿಸಬೇಕು. ಡ್ರೋನ್ ಶೋ ಹಾಗೂ ಇನ್ನಿತರ ಕಾರ್ಯಕ್ರಮಗಳಿಗೆ ಅಗತ್ಯವಿರುವ ಧ್ವನಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ)ದ ವತಿಯಿಂದ ಮಾಡಬೇಕು. ಸಂಗೀತ ಸಂಜೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವನ್ನು ಎಂಡಿಎ ವತಿಯಿಂದಲೇ ಆಯೋಜಿಸಬೇಕು ಎಂದು ಸೂಚನೆ ನೀಡಿದರು.

ಇದಕ್ಕೂ ಮುನ್ನ ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಮಾತನಾಡಿ, ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಪ್ರಮುಖ ವೃತ್ತ, ರಸ್ತೆಗಳು ಹಾಗೂ ಇನ್ನಿತರ ಸ್ಥಳಗಳಲ್ಲಿ ಮಾಡಲಾಗುವ ದಸರಾ ದೀಪಾಲಂಕಾರದ ವಿನ್ಯಾಸ, ವಿವಿಧ ಬಗೆಯ ಕಲಾಕೃತಿಗಳನ್ನು ನಿರ್ಮಿಸಿರುವ ಕುರಿತಂತೆ ಮಾಹಿತಿ ನೀಡಿದರಲ್ಲದೆ, ಸೆ.28 ಮತ್ತು 29ರಂದು ನಡೆಯುವ ಡ್ರೋನ್ ಶೋ ಪ್ರಾಯೋಗಿಕ ಪ್ರದರ್ಶನ ಹಾಗೂ ಅ.1 ಮತ್ತು 2ರಂದು ಡ್ರೋನ್ ಶೋ ಪ್ರಮುಖ ಪ್ರದರ್ಶನ ನಡೆಯಲಿದೆ. ಡ್ರೋನ್ ಶೋ ಜೊತೆಗೆ ಖ್ಯಾತ ಗಾಯಕರಿಂದ ಸಂಗೀತ ಸಂಜೆ ನಡೆಸಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು. ಸಭೆಯಲ್ಲಿ ಎಂಡಿಎ ಆಯುಕ್ತ ರಕ್ಷಿತ್, ನಿಗಮದ ತಾಂತ್ರಿಕ ನಿರ್ದೇಶಕ ಡಿ.ಜೆ. ದಿವಾಕರ್, ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್, ಪ್ರಧಾನ ವ್ಯವಸ್ಥಾಪಕ ಎಲ್.ಲೋಕೇಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಬೈಕ್ ರ್‍ಯಾಲಿ ಮೂಲಕ ಹೆಚ್‌ಐವಿ ಏಡ್ಸ್ ಕುರಿತು ಜಿಲ್ಲಾಡಳಿತದಿಂದ ಜಾಗೃತಿ



ಶುಕ್ರವಾರ ಬೈಕ್ ರ್‍ಯಾಲಿ ನಡೆಸುವ ಮೂಲಕ ಹೆಚ್‌ಐವಿ ಏಡ್ಸ್ ಕುರಿತು ಜಾಗೃತಿ ಮೂಡಿಸಲಾಯಿತು.

ಮೈಸೂರು, ಆ.29(ಎಂಕೆ)– ಸ್ವಚ್ಛಂದ ಲೈಂಗಿಕತೆಯಿಂದ ದೂರವಿರಿ... ಹೆಚ್‌ಐವಿ ಏಡ್ಸ್‌ನಿಂದ ರಕ್ಷಣೆ ಪಡೆಯಿರಿ... ಎಂಬಿತ್ಯಾದಿ ಜಾಗೃತಿ ಫಲಕಗಳ ಪ್ರದರ್ಶನದೊಂದಿಗೆ ಬೈಕ್ ರ್‍ಯಾಲಿ ನಡೆಸುವ ಮೂಲಕ ಹೆಚ್‌ಐವಿ ಏಡ್ಸ್ ಕುರಿತು ಶುಕ್ರವಾರ ಜಾಗೃತಿ ಮೂಡಿಸಲಾಯಿತು.

ಜಿಲ್ಲಾಡಳಿತ, ಜಿಪಂ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ ಬೆಂಗಳೂರು ಹಾಗೂ ಜಿಲ್ಲಾ ಏಡ್ಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಘಟಕದ ವತಿಯಿಂದ ಬೈಕ್ ರ್‍ಯಾಲಿ ನಡೆಸಿ ಏಡ್ಸ್ ಬಗ್ಗೆ ಎಚ್ಚರ ವಹಿಸುವಂತೆ ತಿಳಿಸಲಾಯಿತು.

ನಗರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಅಮರನಾಥ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ ರ್‍ಯಾಲಿಗೆ ಚಾಲನೆ ನೀಡಿದರು. ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ದಿಂದ ಆರಂಭವಾದ ಬೈಕ್ ರ್‍ಯಾಲಿ, ಜೆಎಲ್‌ಬಿ ರಸ್ತೆ, ರೈಲ್ವೆ ನಿಲ್ದಾಣ, ಇರ್ವಿನ್ ರಸ್ತೆ, ಬಸ್ ನಿಲ್ದಾಣ, ಥಿಯೋಬಾಲ್ಡ್ ರಸ್ತೆ ಮತ್ತು ಎಸ್‌ಪಿ ವೃತ್ತದ ಮೂಲಕ ಸಾಗಿ ಡಿಎಚ್‌ಓ ಕಚೇರಿ ಆವರಣದಲ್ಲಿ ಮುಕ್ತಾಯಗೊಂಡಿತು. ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಸಿರಾಜ್ ಅಹಮದ್ ಉಪಸ್ಥಿತರಿದ್ದರು.

ಮೈಸೂರಲ್ಲಿ 826 ಮಂದಿಗೆ ಸೋಂಕು: ಮೈಸೂರು ಜಿಲ್ಲೆಯಲ್ಲಿ 2024–25ನೇ ಸಾಲಿನಲ್ಲಿ ಇದುವರೆಗೆ 1,77,187 ಜನರಿಗೆ ಹೆಚ್‌ಐವಿ ಏಡ್ಸ್ ಪರೀಕ್ಷೆ ನಡೆಸಿದ್ದು, ಅವರಲ್ಲಿ 803 ಮಂದಿ(ಶೇ.0.40 ರಷ್ಟು)ಯಲ್ಲಿ ಪಾಸಿಟಿವ್ ವರದಿಯಾದರೆ, ಪರೀಕ್ಷೆಗೊಳಪಟ್ಟ 40,036 ಮಂದಿ ಗರ್ಭಿಣಿ ಸ್ತ್ರೀಯರಲ್ಲಿ 23 ಮಂದಿ(ಶೇ.0.05 ರಷ್ಟು)ಯಲ್ಲಿ ಹೆಚ್‌ಐವಿ ಪಾಸಿಟಿವ್ ವರದಿಯಾಗಿದೆ.

ಅಭಿನಂದನೆ...



ಮೈಸೂರು, ಚಾಮರಾಜನಗರ ಜಿಲ್ಲಾ ಸಗಟು ಸಹಕಾರ ಸಂಘ (ನಿಯಮಿತ–ಜನತಾ ಬಜಾರ್) ಅಧ್ಯಕ್ಷರಾಗಿ ಆಯ್ಕೆಗೊಂಡ ರಮೇಶ್ ರಾಯಪ್ಪ ಅವರನ್ನು ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು ಅಭಿನಂದಿಸಿದರು. ಈ ವೇಳೆ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ನಾಗರಾಜ್, ನಂದಕುಮಾರ್, ಸುನಂದಕುಮಾರ್, ಆಶ್ರಯ ಸಮಿತಿ ಸದಸ್ಯ ಮಂಜುನಾಥ್, ಇಬ್ರಾಹಿಂ, ನಿರ್ದೇಶಕರಾದ ಎನ್.ಮಂಜುನಾಥ್, ಜಿ.ರಬ್ಬಾನಿ, ಆನಂದ್, ಮುಖಂಡರಾದ ವಿ.ವೆಂಕಟೇಶ್, ಸೂರ್ಯಕುಮಾರ್ ನಾಯ್ಡು, ರಾಮಚಂದ್ರ, ಆರ್‌ಎಂಸಿ ರಮೇಶ್ ಉಪಸ್ಥಿತರಿದ್ದರು.

ವಿದ್ಯಾರ್ಥಿಗಳಿಗೆ ಸನ್ಮಾನ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಸಂತನಗರ (ಮುಡಾ) ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅವರ ಪೋಷಕರೊಂದಿಗೆ ಶಾಸಕ ಜಿ.ಟಿ.ದೇವೇಗೌಡ ಸನ್ಮಾನಿಸಿದರು. ಈ ವೇಳೆ ಸಂಘದ ಅಧ್ಯಕ್ಷ ವಾಸುದೇವು, ಪ್ರದೀಪ್, ನಿವಾಸಿಗಳಿದ್ದರು.

ನಿಧನ

ಎಸ್.ಜಿ.ಶೇಖರ್



ಮೈಸೂರು, ಆ.29– ಪಿರಿಯಾಪಟ್ಟಣ ತಾಲೂಕು ಸುಂಡುವಾಳು ಗ್ರಾಮದ ನಿವಾಸಿ, ನಿವೃತ್ತ ಫುಡ್ ಇನ್ಸ್‌ಪೆಕ್ಟರ್ ಎಸ್.ಜಿ.ಶೇಖರ್ (79) ಗುರುವಾರ ರಾತ್ರಿ ಬೆಂಗಳೂರಿನ ಬಸವೇಶ್ವರ ನಗರದ ತಮ್ಮ ಪುತ್ರನ ನಿವಾಸದಲ್ಲಿ ಹೃದಯಾಘಾತದಿಂದ ನಿಧನರಾದರು.

ದಿವಂಗತರು ಪತ್ನಿ ಮುತ್ತುಮಣಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ ಮತ್ತು ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ(ಆ.29) ಸಂಜೆ ಸುಂಡುವಾಳು ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಪ್ಯಾರಿಜಾನ್



ಹುಣಸೂರು ತಾಲೂಕಿನ ಕಾಳೇನಹಳ್ಳಿ ಡೇರಿ ನಿರ್ದೇಶಕ ಬಾಬು ಅವರ ತಾಯಿ ಶತಾಯುಷಿ ಪ್ಯಾರಿಜಾನ್(112) ಶುಕ್ರವಾರ ನಿಧನರಾದರು. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬಲ್ಲೇನಹಳ್ಳಿ ಗ್ರಾಮದ ಖಬರಸ್ಥಾನದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ದೇವಿರಮ್ಮ



ಹುಣಸೂರು ತಾಲೂಕಿನ ಕರಿಮುದ್ದನಹಳ್ಳಿ ಗ್ರಾಮದ ನಿವಾಸಿ ಚಿಕ್ಕಯ್ಯ ಅವರ ಪತ್ನಿ ದೇವಿರಮ್ಮ(70) ಶುಕ್ರವಾರ ಸಂಜೆ ನಿಧನರಾದರು. ಮೃತರು ಪತಿ, ಪುತ್ರರಾದ ಮಹದೇವ, ಶಿವರಾಜು, ಡಾ.ಮರಯ್ಯ ಸಿ, ಸ್ವಾಮಿ.ಸಿ, ಶ್ರೀನಿವಾಸ, ಪುತ್ರಿ ಪ್ರೇಮ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 2 ಗಂಟೆಗೆ ಬಸವನಹಳ್ಳಿಯ ಮೃತರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚಿಕ್ಕಣ್ಣ



ಮೈಸೂರು, ಆ.28– ಮೈಸೂರು ತೊಣಚಿಕೊಪ್ಪಲಿನ ಕಪನಿ ಬೀರೇಗೌಡರ ಪುತ್ರ ಚಿಕ್ಕಣ್ಣ(69) ಅವರು ಶುಕ್ರವಾರ ನಿಧನರಾದರು. ಇವರು ನಗರ ಪಾಲಿಕೆ ಮಾಜಿ ಸದಸ್ಯ ಜೆ.ಗೋಪಿ ಅವರ ಚಿಕ್ಕಪ್ಪ.

ಮೃತರು ಪತ್ನಿ ಭಾಗ್ಯಮ್ಮ, ಮಕ್ಕಳಾದ ಪುನೀತ್, ದನುಷ್, ಪೂರ್ಣಿಮಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ತೊಣಚಿಕೊಪ್ಪಲು ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 12 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ತತ್ವ ದರ್ಪಣ ಕೊರಡು ಕೊನರಿಸಿದ ಪಾಶ್ಚಾತ್ಯ ತತ್ವಜ್ಞಾನಿಗಳು, ಪ್ರಸ್ತುತಿ: ಪ್ರೊ.ವಿ.ಎನ್. ಶೇಷಗಿರಿರಾವ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಸಿ. ವಿಶ್ವನಾಥ್ ಹಾಗೂ ಕೆ.ಪಿ. ರೇವತಿ, ವ್ಯಾಖ್ಯಾನ –ಡಾ.ಎನ್.ಎಸ್. ತಾರಾನಾಥ್, 6.50 ರೈತರಿಗೆ ಸಲಹೆ, 7.15 ಮನೆಮನೆಯ ಹಣತೆ –ಪ್ರಾಯೋಜಿತ ಸರಣಿ ಕಾರ್ಯಕ್ರಮ, ಪ್ರಾಯೋಜಕರು–ಡಾ. ಬಿ.ಆರ್.ಅಂಬೇಡ್ಕರ್ ಸಂಶೋಧನಾ ಸಂಸ್ಥೆ, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, 8.30 ಪಂಪನ ಪೆಂಪು–ಪಂಪ ಭಾರತದಿಂದಾಯ್ದ ನಾಟಕೀಯ ಪ್ರಸಂಗಗಳ ಬಾನುಲಿ ಸರಣಿ, ರಚನೆ ಹಾಗೂ ಪ್ರಸ್ತುತಿ–ಜಿ. ಶಾಂತಕುಮಾರ್, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಅರುಣಾ ಸಾಯಿರಾಂ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಹಳ್ಳಿಹಾಡು, 3.30 ಮಕ್ಕಳ ಮಂಟಪ–ಮಕ್ಕಳ ಸಾಹಿತ್ಯರಂಗ–ಮಕ್ಕಳ ಪತ್ರಗಳನ್ನಾಧರಿಸಿದ ಕಾರ್ಯಕ್ರಮ, ಪ್ರಸ್ತುತಿ–ಕವಿತಾ ಬಿ.ಜಿ. ಮತ್ತು ಚಿನ್ಮಯಿ, 4.00 ನಾಟಕ– ಅಮೋಘವರ್ಷ ನೃಪತುಂಗ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 6.50 ಕೃಷಿರಂಗ :ಕಿಸಾನ್ ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ – ಅರಿಸಿಣ ಬೆಳೆಯ ಸುಧಾರಿತ ತಳಿಗಳ ಬೀಜೋತ್ಪಾದನೆ ಕುರಿತ ಸಂವಾದ, ಭಾಗವಹಿಸುತ್ತಾರೆ –ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿ ಡಾ. ಎ.ಬಿ. ಮೋಹನ್ ಕುಮಾರ್ ಮತ್ತು ಚಾಮರಾಜನಗರ ತಾಲೂಕು ನಾಗವಳ್ಳಿಯ ಸಯ್ಯದ್ ನಾಸಿರ್ ಅಹಮದ್, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಸವಿನೆನಪು, 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಸುಧಾಂಶು ಕುಲಕರ್ಣಿ ಮತ್ತು ಸಾರಂಗ್ ಕುಲಕರ್ಣಿ–ದ್ವಂದ್ವ, ಹಾರ್ಮೋನಿಯಂ ವಾದನ

ಇಂದಿನ ಪಂಚಾಂಗ

30.08.2025 ಶನಿವಾರ, ಮಳೆ ನಕ್ಷತ್ರ: ಮಖ 17.08.2025 ರಿಂದ 30.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ವಯಾ ವಿಕಾಸ್ :** ಸೀನಿಯರ್ ಸ್ಟ್ರೋಲ್ ಎ–ಥಾನ್, ಉಪಸ್ಥಿತರು : ಮಹಾರಾಣಿ ಪ್ರಮೋದಾದೇವಿ ಒಡೆಯರ್, ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸ್ಯಾಮ್ ಚೆರಿಯನ್, ರಾಮ್, ಎಸ್. ರಾಜಶೇಖರ್, ಡಾ. ಶಿಲ್ಪಾ, ಡಾ. ಜಮುನಾ ರವಿ, ಪವಿತ್ರಾ ರೆಡ್ಡಿ, ಸ್ಥಳ: ಮೈಸೂರು ವಿವಿ ಓವಲ್ ಮೈದಾನ, ಬೆಳಗ್ಗೆ 6ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವರ್ಷಾ ಬಸ್ತಿ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಹೈಪೋಥೈರಾಯ್ಡಿಸಮ್‌ಗೆ ಚಿಕಿತ್ಸಾ ಶಿಬಿರ, ಮೈಗ್ರೇನ್‌ಗೆ ಪರಿಹಾರ ಹಾಗೂ ಆಕ್ಯುಪಂಕ್ಚರ್ ಚಿಕಿತ್ಸೆ, ಮಧು ಮೇಹದ ಗಾಯಗಳಿಗೆ ಚಿಕಿತ್ಸೆ, ಅರ್ಥರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಮತ್ತು ಭುಜದ ನೋವು, ಸಯಾಟೀಕ್/ಗೃದ್ರಸಿ ರೋಗಕ್ಕೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ರಿಂದ.

■ **ಸಂತ ಫಿಲೋಮಿನಾ ಪದವಿ ಕಾಲೇಜು:** ಎರಡು ದಿನಗಳ ಟೆಕ್ನೋ ಎಕ್ಸ್ಪೋ ತಂತ್ರಜ್ಞಾನಗಳ ಪ್ರದರ್ಶನ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ :** ಉದ್ಯೋಗ ಮೇಳ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ.ನವೀನ್ ಕುಮಾರ್ ಎಸ್.ಕೆ., ಡಾ. ಸಿ.ಎಸ್. ಆನಂದ ಕುಮಾರ್, ಪ್ರೊ. ರಾಮನಾಥಂ ನಾಯ್ಡು, ಡಾ. ಎನ್.ಆರ್. ಚಂದ್ರೇಗೌಡ, ಸ್ಥಳ: ಕರಾಮುವಿವಿ ಘಟಿಕೋತ್ಸವ ಭವನ, ಬೆಳಗ್ಗೆ 10ಕ್ಕೆ.

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** 13 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ, 01/4 ಕರ್ನಾಟಕ ಏರ್ ಸ್ಕ್ವಾಡ್ರನ್ ಎನ್‌ಸಿಸಿ ಮೈಸೂರು ಜಂಟಿಯಾಗಿ ಯುಪಿಎಸ್‌ಸಿ ಸಿಡಿಎಸ್, ಎನ್‌ಡಿಎ, ಆಫ್‌ಕ್ಯಾಟ್ ಪರೀಕ್ಷಾ ಆಕಾಂಕ್ಷಿಗಳಿಗೆ ಹಾಗೂ ಎಸ್‌ಎಸ್‌ಬಿ ಸಂದರ್ಶನದ ಪ್ರಕ್ರಿಯೆಗಳ ಕುರಿತು ಸಂವಾದ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಆಲ್ಫಾ ಲೀಡ್ ಅಕಾಡೆಮಿಯ ಸಂಸ್ಥಾಪಕರು, ಮುಖ್ಯಸ್ಥ ನಿವೃತ ಗ್ರೂಪ್ ಕ್ಯಾಪ್ಟನ್ ಅಭಿನವ್ ಚತುರ್ವೇದಿ, ಉಪಸ್ಥಿತರು : 13 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿಯ ಕಮಾಂಡಿಂಗ್ ಅಧಿಕಾರಿ ಕರ್ನಲ್ ಎಸ್‌ಜೆಎಸ್ ಸಾಂದರ್, ಮೈಸೂರು ಮೂಡಾ ಮಾಜಿ ಅಧ್ಯಕ್ಷ ಎಚ್ ವಿ ರಾಜೀವ್, ಒಕ್ಕಲಿಗ ಯೂತ್ ಬ್ರಿಗೇಡ್‌ನ ಅಧ್ಯಕ್ಷ ನಂಜೇಗೌಡ ನಂಜುಂಡ, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ ಆರ್ ಜಯಕುಮಾರಿ, ಎಸ್.ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಸಿಇಓ ಡಾ. ಎಸ್.ಆರ್.ರಮೇಶ್, 01/4 ಕರ್ನಾಟಕ ಏರ್ ಸ್ಕ್ವಾಡ್ರನ್ ಎನ್‌ಸಿಸಿ ಅಧಿಕಾರಿ ಫ್ಲೈಯಿಂಗ್ ಆಫೀಸರ್ ಡಾ. ಪುಷ್ಪರಾಣಿ ಪಿಜಿ, 04ಬಿ ಕಂಪನಿ 13 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿ ಅಧಿಕಾರಿ ಲೆಫ್ಟಿನೆಂಟ್ ಗಾಯತ್ರಿ ವಿ, ಸ್ಥಳ: ಕಾಲೇಜು ಆವರಣ, ಜಯಲಕ್ಷ್ಮಿಪುರಂ, ಬೆಳಗ್ಗೆ 10.30ಕ್ಕೆ.

■ **ಫೋನಿಕ್ಸ್ ಇಂಟರ್‌ನ್ಯಾಷನಲ್ ಅಕಾಡೆಮಿ :** ಬಾಂಜೋರ್ ಇಂಡಿಯಾ–ಫ್ರೆಂಚ್ ಕಾರ್ನಿವಲ್, ಸ್ಥಳ: ಅಕಾಡೆಮಿ ಆವರಣ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 10.30 ರಿಂದ.

■ **ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ :** ಬೆಳಗ್ಗೆ 10.30ಕ್ಕೆ ಅಂತರರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಮಕ್ಕಳು ಮತ್ತು ಮಹಿಳೆಯರ ಮೇಲಿನ ಶೋಷಣೆ ತಡೆಗಟ್ಟುವ ಕುರಿತು ಜಾಗೃತಿ ಜಾಥಾ, ಉದ್ಘಾಟನೆ : ಹಿರಿಯ ಪ್ರಾಧ್ಯಾಪಕ ಪ್ರೊ. ಆರ್. ಇಂದಿರಾ ರಾಮರಾವ್, ಬೆಳಗ್ಗೆ 11.30ಕ್ಕೆ ಸಭಾ ಕಾರ್ಯಕ್ರಮ, ಉದ್ಘಾಟನೆ : ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ವೈ.ಎಸ್. ಸಿದ್ದೇಗೌಡ, ಅಧ್ಯಕ್ಷತೆ : ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ನಿವೃತ್ತ ಪ್ರಾದೇಶಿಕ ನಿರ್ದೇಶಕ ಎಂ.ಎನ್. ನಟರಾಜ್, ಸ್ಥಳ: ರೈಲ್ವೆ ಗ್ರೌಂಡ್, ಅಶೋಕಪುರಂ.

■ **ವಿಕ್ರಾಂತ್ ಟೈರ್ಸ್ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಸ್.ಪಿ. ನಿಂಗೇಗೌಡ, ಸ್ಥಳ: ಅನ್ನಪೂರ್ಣೇಶ್ವರಿ ದೇವಸ್ಥಾನದ ಆವರಣ, ಹೆಬ್ಬಾಳು, ಬೆಳಗ್ಗೆ 11ಕ್ಕೆ.

■ **ಆದ್ಯ ಸೌಹಾರ್ದ ಸಹಕಾರಿ ಸಂಘ ನಿಯಮಿತ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಜೆ.ಜಿ. ವಿಶ್ವನಾಥಯ್ಯ, ಮುಖ್ಯ ಅತಿಥಿಗಳು : ಸಹಕಾರಿ ಸಂಘದ ವಿಭಾಗೀಯ ವ್ಯವಸ್ಥಾಪಕ ಗುರುಪ್ರಸಾದ್ ಬಂಗೇರ, ಒಕ್ಕೂಟದ ಉಪಾಧ್ಯಕ್ಷ ಇ.ಕೆ. ರಾಜನ್ ಬಾಬು, ನಿಕಟಪೂರ್ವ ಉಪಾಧ್ಯಕ್ಷ ವಿ. ವೆಂಕಟೇಶ್, ಸ್ಥಳ: ಶ್ರೀ ಗಣಪತಿ ದೇವಸ್ಥಾನದ ಸಭಾ ಮಂಟಪ, ರಾಮಕೃಷ್ಣನಗರ, ಬೆಳಗ್ಗೆ 11ಕ್ಕೆ.

■ **ದೀಪ್ತಿ ಸಾಂಸ್ಕೃತಿಕ ವೇದಿಕೆ :** ಲೇಖಕ, ವಿಮರ್ಶಕ ಕಾಳೀಹುಂಡಿ ಶಿವಕುಮಾರ್ ಅವರು ವಿವಿಧ ಭಾಷೆಗಳ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಗಣಪತಿ ಚಿತ್ರ–ಲೇಖನಗಳ ಪ್ರದರ್ಶನ, ಸ್ಥಳ: ಹಿರಿಯ ನಾಗರೀಕರ ಹಗಲು ಯೋಗ ಕ್ಷೇಮ ಕೇಂದ್ರ, ನಿಮಿಷಾಂಬನಗರ ಬಡಾವಣೆ, ಬೆಳಗ್ಗೆ 11.30ಕ್ಕೆ.

■ **ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ :** ವಿಶೇಷ ಪರೀಕ್ಷೆಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ಪ್ರದಾನ ಸಮಾರಂಭ, ಅಧ್ಯಕ್ಷತೆ : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಮುಖ್ಯ ಅತಿಥಿಗಳು : ಅಂತರರಾಷ್ಟ್ರೀಯ ವಯೋಲಿನ್ ವಾದಕ ಡಾ. ಮೈಸೂರು ಮಂಜುನಾಥ್, ಹಣಕಾಸು ಅಧಿಕಾರಿ ಶ್ರೀಮತಿ ಕೆ.ಎಸ್. ರೇಖಾ, ಕುಲಸಚಿವ ಪ್ರೊ. ಎಂ.ಬಿ. ಮಂಜುನಾಥ, ಸ್ಥಳ: ವಿಶ್ವವಿದ್ಯಾನಿಲಯದ ಸಭಾಂಗಣ, ಬೆಳಗ್ಗೆ 11.30ಕ್ಕೆ

■ **ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ಆರ್‌ಕೆವಿಕೆ ಹತ್ತನೇ ವರುಷ ಬತ್ತದ ಹರುಷ ವಿಶೇಷ ಉಪನ್ಯಾಸ ಮಾಲಿಕೆ, ಅಧ್ಯಕ್ಷತೆ : ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ಬಿ. ಪ್ರತಿಮಾ, ಉಪಸ್ಥಿತರು: ಪ್ರೊ. ಜಿ. ಚಂದ್ರಶೇಖರ್, ಸಿ. ಶಿವಪ್ಪ, ಶ್ರೀಮತಿ ವಿ.ಪಿ. ಸವಿತಾ, ಸ್ಥಳ: ಕಾಲೇಜು ಆವರಣ, ರಾಮಕೃಷ್ಣನಗರ, ಮಧ್ಯಾಹ್ನ 12ಕ್ಕೆ.

■ **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ–895, ಕಥೆ ಹೇಳುವವರು: ಶ್ರೀಮತಿ ಸೌದಾಮಿನಿ ಹೆಗಡೆ, ಇತಿಹಾಸ ಉಪನ್ಯಾಸಕಿ, ಬಾಲಕಿಯರ ಸ್ವತಂತ್ರ ಪದವಿ ಪೂರ್ವ ಕಾಲೇಜು, ಚಾಮರಾಜ ಜೋಡಿ ರಸ್ತೆ, ಸ್ಥಳ:ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 64ನೇ ಪಾರಂಪರಿಕ ಸಂಗೀತೋತ್ಸವ ಕಾರ್ಯಕ್ರಮ, ಸಂಜೆ 5.30 ರಿಂದ ಶ್ರೀ ಚಂದ್ರಶೇಖರ ಆಚಾರ್ ಅವರಿಂದ ರಂಗಗೀತೆಗಳು, ಸಂಜೆ 6.45 ರಿಂದ ವಿದುಷಿ ಅಕ್ಕರೈ ಸಹೋದರಿಯರು (ಅಕ್ಕರೈ ಶುಭಲಕ್ಷ್ಮಿ, ಅಕ್ಕರೈ ಸ್ವರ್ಣಲತಾ) ಅವರಿಂದ ದ್ವಂದ್ವ ಗಾಯನ, ವಿದ್ವಾನ್ ವಿ.ಎಸ್. ಗೋಕುಲ್–ಪಿಟೀಲು, ವಿದ್ವಾನ್ ಜಯಚಂದ್ರರಾವ್–ಮೃದಂಗ, ವಿದ್ವಾನ್ ಗುರುಪ್ರಸನ್ನ– ಖಂಜೀರ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್ :** ವೇಲುಕ್ಕುಡಿ ಶ್ರೀ ರಂಗನಾಥನ್ ಸ್ವಾಮಿಯವರಿಂದ ವೆಂಕಟೇಶ ಸ್ತೋತ್ರ ಕುರಿತು ಉಪನ್ಯಾಸ, ಸ್ಥಳ: ಶ್ರೀ ಅಂಡಾಲ್ ಮಂದಿರಂ ಟ್ರಸ್ಟ್, ವಾಣಿವಿಲಾಸಪುರಂ, ಸಂಜೆ 6 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಾಬಲ್ಸ್ ಆಫ್ ಶ್ರೀ ರಾಮಕೃಷ್ಣ–8 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠ :** ವಿದ್ವಾನ್ ಭರತ್ ರಾಜಗೋಪಾಲ್ ಅವರಿಂದ ಪಿಟೀಲು ವಾದನ, ವಿದ್ವಾನ್ ವಿಷ್ಣು–ಮೃದಂಗ, ವಿದ್ವಾನ್ ಶ್ರೀನಿವಾಸನ್ ಶ್ರೀರಂಗಂ, ಸ್ಥಳ: ಶ್ರೀ ಪರಕಾಲ ಮಠ, ಜಗನ್ಮೋಹನ ಅರಮನೆ ಹತ್ತಿರ, ಸಂಜೆ 6ಕ್ಕೆ.

■ **ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 70ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಮಹೋತ್ಸವ, ಕುಮಾರಿ ಆರ್. ಶ್ರೀಪದ (ವಿದ್ವಾನ್ ಮೈಸೂರು ವಿ. ಅಂಬಾಪ್ರಸಾದ್ ಅವರ ಶಿಷ್ಯೆ) ಅವರಿಂದ ವೀಣಾವಾದನ, ಸ್ಥಳ: ಗಣಪತಿ ದೇವಸ್ಥಾನ, ತ್ಯಾಗರಾಜ ವೃತ್ತ, ಕೆ.ಆರ್. ಮೊಹಲ್ಲಾ, ಸಂಜೆ 7 ರಿಂದ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 46 | ಆಗಸ್ಟ್ 30 ಶನಿವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 133 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಸ್ಲಿಮರು ದಸರಾ ಅವಿಭಾಜ್ಯ ಅಂಗ

ಮೈಸೂರು ದಸರಾ

ಮೊದಲ ಬಾರಿಗೆ ದಸರಾ ಬಗ್ಗೆ ಬರೆದಿದ್ದು ಮುಸ್ಲಿಮರು; ಇವತ್ತಿಗೂ ಆನೆಗಳಿಗೆ ಅಂಬಾರಿ ಕಟ್ಟೋದು ಮುಸ್ಲಿಂ; ಸಮುದಾಯ ಮುಖಂಡ ಅಬ್ದುಲ್ ರಜಾಕ್ ಸಮರ್ಥನೆ



ಬೆಂಗಳೂರು, ಆ.29– ಈ ಬಾರಿಯ ಮೈಸೂರು ದಸರಾವನ್ನು ಉದ್ಘಾಟಿಸಲು ಲೇಖಕಿ ಬಾನು ಮುಷ್ತಾಕ್ ಆಯ್ಕೆಗೆ ಹಿಂದೂಪರರು ಹಾಗೂ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ್ದು, ಹಿಂದೂ ವ್ಯಕ್ತಿಯೋರ್ವರಿಂದ ಉದ್ಘಾಟಿಸಬೇಕೆಂದು ಆಗ್ರಹಿಸಿವೆ. ಆದರೆ ಮುಸ್ಲಿಂ ಮುಖಂಡರು ಬಾನು ಮುಷ್ತಾಕ್ ಆಯ್ಕೆಯನ್ನು ಸಮರ್ಥಿಸಿಕೊಂಡಿದ್ದಾರೆ. 1442ರಲ್ಲಿ ಮೊದಲ ಬಾರಿಗೆ ದಸರಾ ಬಗ್ಗೆ ಬರೆದಿದ್ದು ಮುಸ್ಲಿಮರು. ಆನೆಗಳಿಗೆ ಅಂಬಾರಿ ಕಟ್ಟೋದು ಇವತ್ತಿಗೂ ಮುಸ್ಲಿಮರು ಎಂದು ಬೆಂಗಳೂರಿನಲ್ಲಿ ಮುಸ್ಲಿಂ ಮುಖಂಡ ಅಬ್ದುಲ್ ರಜಾಕ್ ಸಮರ್ಥಿಸಿಕೊಂಡಿದ್ದಾರೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಬಾನು ಮುಷ್ತಾಕ್ ಕನ್ನಡಕ್ಕೆ ಬೂಕರ್ ಪ್ರಶಸ್ತಿ ತಂದ ಹೆಮ್ಮೆಯ ಕನ್ನಡತಿ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವ ತಂದು ಕೊಟ್ಟ ಮಹಿಳೆಗೆ ಆಹ್ವಾನ ಕೊಟ್ಟಿದ್ದಾರೆ. ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್‌ರನ್ನು ಸಿಎಂ ಆಹ್ವಾನಿಸಿದ್ದಾರೆ. ದಸರಾ ಉದ್ಘಾಟನೆ ವಿಚಾರದಲ್ಲಿ ಬಾನುಗೆ ಫತ್ವಾ ಹೊರಡಿಸಲು ಬರಲ್ಲ ಎಂದರು.



ಅಬ್ದುಲ್ ರಜಾಕ್

ಇದು ನಾಡಹಬ್ಬ: ಮಿರ್ಜಾ ಇಸ್ಮಾಯಿಲ್ ಬೆಂಗಳೂರಿಗೆ ಅನೇಕ ಕೊಡುಗೆ ನೀಡಿದ್ದಾರೆ. ಆಗ ಮೈಸೂರು ಒಡೆಯರ್ ಅವರನ್ನೇ ಕರೆದು ದಸರಾ ಮಾಡಲಿಲ್ವಾ? ಇಮಾಮ್ ದರ್ಗಾಗೆ ಆನೆಗಳು ಬಂದು ಹೋದ ಬಳಿಕ ದಸರಾ ನಡೆಯುವುದು. ಆನೆಗಳಿಗೆ ಅಂಬಾರಿ ಕಟ್ಟೋದು ಇವತ್ತಿಗೂ ಮುಸ್ಲಿಮರು. ಕವಿ ಕೆ.ಎಸ್.ನಿಸಾರ್ ಅಹ್ಮದ್ ದಸರಾ ಉದ್ಘಾಟನೆ ವೇಳೆ ಆಗ ಪ್ರಸ್ತಾಪವಿಲ್ಲ. ಸುದ್ದಿಯಲ್ಲಿ ಇರಬೇಕೆಂದು ಪ್ರತಾಪ್ ಸಿಂಹ ಈ ರೀತಿ ಹೇಳಿಕೆ ನೀಡುತ್ತಿದ್ದಾರೆ. ■ 10ನೇ ಪುಟಕ್ಕೆ

ಬಾನು ಮುಷ್ತಾಕ್ ದೇವಿ ಪೂಜೆ ಮಾಡಿದ್ರೆ ಫತ್ವಾ ಇನ್‌ಸ್ಟಿಟ್ಯೂಷನ್ ಅನುಮತಿ ಪಡೆಯಬೇಕು

ಬೆಂಗಳೂರು: ಬೂಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ದಸರಾದಲ್ಲಿ ಭಾಗವಹಿಸಲು ನಮ್ಮ ಅಡ್ಡಿಯಿಲ್ಲ. ಆದರೆ ದೇವಿಗೆ ಪೂಜೆ ಮಾಡಿದರೆ ಫತ್ವಾ ಇನ್‌ಸ್ಟಿಟ್ಯೂಷನ್‌ನಿಂದ ಅನುಮತಿ ತೆಗೆದುಕೊಳ್ಳಬೇಕು ಎಂದು ಜಾಮೀಯಾ ಮಸೀದಿ ಮೌಲನಾ ಡಾ.ಮಕ್ಸೂದ್ ಇಮ್ರಾನ್ ತಿಳಿಸಿದ್ದಾರೆ.



ಸುದ್ದಿ ವಾಹಿನಿಯೊಂದಿಗೆ ಮಾತನಾಡಿದ ಜಾಮೀಯಾ ಮಸೀದಿ ಮೌಲನಾ ಡಾ ಮಕ್ಸೂದ್ ಇಮ್ರಾನ್, ಪೂಜೆಯಲ್ಲಿ ನಿಂತರೆ ತಪ್ಪಿಲ್ಲ. ಅರ್ಚಕ ಅಥವಾ ಬೇರೆಯವರು ಪೂಜೆ ಮಾಡುತ್ತಿದ್ದರೆ ಇವರು ಭಾಗವಹಿಸಬಹುದು,

ಚಾಮುಂಡಿಗೆ ಪೂಜಾ ವಿಧಿ ವಿಧಾನ ಅಥವಾ ಆರತಿ ಬೆಳಗೋದು, ಹೀಗೆ ಪೂಜಾ ■ 10ನೇ ಪುಟಕ್ಕೆ

ಬಾನು ಮುಷ್ತಾಕ್ ಕನ್ನಡಾಂಬೆ ಕುರಿತ ಹೇಳಿಕೆಗೆ ಸ್ಪಷ್ಟನೆ ಕೊಡಲಿ; ಇಲ್ಲದಿದ್ದರೆ ದಸರಾ ಉದ್ಘಾಟನೆಗೆ ನನ್ನ ವಿರೋಧವಿದೆ

ಮೈಸೂರು, ಆ.29– ಬಾನು ಮುಷ್ತಾಕ್ ಭುವನೇಶ್ವರಿ ಕುರಿತ ಹೇಳಿಕೆ ಮತ್ತು ಅವರು ದಸರಾ ಉದ್ಘಾಟಿಸುವ ಬಗ್ಗೆ ಬಿಜೆಪಿ ನಾಯಕರಿಗಿರುವ ವಿರೋಧ ಭಾವ ಇನ್ನು ತಣ್ಣಗಾಗಿಲ್ಲ. ಇಂದು ಮೈಸೂರಿನಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕನ್ನಡಾಂಬೆ ಕುರಿತ ಹೇಳಿಕೆಗೆ ಮೊದಲು ಸ್ಪಷ್ಟನೆಯನ್ನು ಕೊಡಲಿ, ಕೊಡದಿದ್ದರೆ ದಸರಾ ಉದ್ಘಾಟನೆಗೆ ನನ್ನ ವಿರೋಧ ಇದೆ ಎಂದು ಹೇಳುವ ಮೂಲಕ ಯು ಟರ್ನ್ ಹೊಡೆದಿದ್ದಾರೆ.



ಈ ಹಿಂದೆ ಬಾನು ಮುಷ್ತಾಕ್ ಬಗ್ಗೆ ಪ್ರತಾಪ್‌ಸಿಂಹ ಹಾಗೂ ಯತ್ನಾಳ್ ವಿರೋಧ ವ್ಯಕ್ತಪಡಿಸಿದ್ದಾಗ ಮಾತನಾಡಿದ್ದ ಯದುವೀರ್, ಬೂಕರ್ ವಿಜೇತೆ ಬಾನು ಮುಷ್ತಾಕ್ ದಸರಾ ಉದ್ಘಾಟಿಸುವುದಕ್ಕೆ ನಮ್ಮ ತಕರಾರಿಲ್ಲ. ■ 10ನೇ ಪುಟಕ್ಕೆ

ಹಣೆಗೆ ಅರಿಶಿಣ, ಕುಂಕುಮವಿಟ್ಟು, ಹೂ ಮುಡಿದು ದಸರಾ ಉದ್ಘಾಟನೆ ಮಾಡೋದಾದ್ರೆ ಬನ್ನಿ...

ಹುಬ್ಬಳ್ಳಿ, ಆ.29– ಬಾನು ಮುಷ್ತಾಕ್ ಅವರೇ ನಿಮ್ಮನ್ನ ಅಲ್ಲಾನೇ ಮಸೀದಿ ಒಳಗೆ ಬಿಟ್ಟಿಲ್ಲ. ಇನ್ನು ಅರಿಶಿಣ ಕುಂಕುಮ ವಿಟ್ಟ ತಾಯಿ ಚಾಮುಂಡೇಶ್ವರಿ ನಿಮ್ಮನ್ನು ಕರೆಸಿಕೊಳ್ತಾಳಾ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಟಾಂಗ್ ಕೊಟ್ಟಿದ್ದಾರೆ.



ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ನಡೆದ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್‌ರಿಗೆ ಆಹ್ವಾನ ನೀಡಲಾಗಿದೆ. ಅವರ ಮೇಲೆ ನಮಗೆಲ್ಲ ಗೌರವ ಇದೆ. ಆದರೆ ಹಿಂದೂ ಧಾರ್ಮಿಕ ಶ್ರೇಷ್ಠ ಭಾವನೆಯ ಮುಕುಟವಾಗಿರುವ ದಸರಾ ಉದ್ಘಾಟನೆಯನ್ನು ಅವರ ಕೈಯ್ಯಲ್ಲಿ ಮಾಡಿಸುವ ಅವಶ್ಯಕತೆ ಇತ್ತಾ ಎಂದು ಪ್ರಶ್ನಿಸಿದ್ದಾರೆ.

ಅರಿಶಿಣ, ಕುಂಕುಮ, ಹೂ ವಿಟ್ಟು ದಸರಾ ಉದ್ಘಾಟನೆ ಮಾಡಿ: ಸಿದ್ದರಾಮಯ್ಯ, ಡಿ.ಕೆ ಶಿವಕುಮಾರ್ ಇದರಲ್ಲಿ ರಾಜಕೀಯ ಮಾಡುತ್ತಿದ್ದಾರೆ. ಆದರೆ ಬಾನು ಮುಷ್ತಾಕ್ ಅವರೇ ■ 10ನೇ ಪುಟಕ್ಕೆ

ಅಚ್ಚರಿ ಮೂಡಿಸಿದ ಡಿಕೆಶಿ ದಿಢೀರ್ ಸಿಂಗಪೂರ್ ಭೇಟಿ!!

ಬೆಂಗಳೂರು, ಆ. 29(ಕೆಎಂಶಿ)– ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದಿಢೀರ್‌ನೆ ಸಿಂಗಪೂರ್‌ಗೆ ಒಂದು ದಿನದ ಖಾಸಗಿ ಪ್ರವಾಸ ಕೈಗೊಂಡು ಹಿಂತಿರುಗಿರುವುದು ಪಕ್ಷದ ವಲಯದಲ್ಲಿ ಭಾರೀ ಚರ್ಚೆಗೆ ಗ್ರಾಸವಾಗಿದೆ.



ವಿಶೇಷ ವಿಮಾನದಲ್ಲಿ ಗುರುವಾರ ಸಿಂಗಪೂರ್‌ಗೆ ತೆರಳಿದ ಶಿವಕುಮಾರ್ ಕೆಲವೇ ತಾಸುಗಳು ಅಲ್ಲಿ ತಂಗಿದ್ದು, ಇಂದು ಮುಂಜಾನೆ ನಗರಕ್ಕೆ ಹಿಂತಿರುಗಿದ್ದಾರೆ.

ನಿನ್ನೆ ಬೆಳಗ್ಗೆ ಮಾಧ್ಯಮದೊಂದಿಗೆ ಮಾತನಾಡಿದ ನಂತರ ವಿದೇಶ ಪ್ರವಾಸ ಕೈಗೊಂಡ ಉಪಮುಖ್ಯಮಂತ್ರಿ, ಶುಕ್ರವಾರ ಬೆಳಗ್ಗೆ ಆಗಮಿಸಿ, ಮೊದಲೇ ನಿಗದಿಪಡಿಸಿದ ಮಾಗಡಿ ಕಾರ್ಯಕ್ರಮಕ್ಕೆ ತೆರಳಿದರು.

ಉನ್ನತ ಮೂಲಗಳ ಪ್ರಕಾರ, ಕುಟುಂಬದ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಂಗಪೂರ್‌ಗೆ ತೆರಳಿದ್ದಾರೆ ಎಂದು ಒಂದು ಆಪ್ತ ವರ್ಗ ಹೇಳಿದರೆ, ಮತ್ತೊಂದು ಆಪ್ತ ವರ್ಗ ಇಂದಿನ ರಾಜಕೀಯ ಬೆಳವಣಿಗೆಯೊಂದಿಗೆ ಥಳಕು ಹಾಕುತ್ತಿದೆ.

ಆದರೆ, ಉಪಮುಖ್ಯಮಂತ್ರಿ ವಿದೇಶ ಪ್ರವಾಸ ಕುರಿತು ಯಾವುದೇ ಮಾಹಿತಿ ನೀಡದೆ ಗೌಪ್ಯತೆ ಕಾಪಾಡಿಕೊಂಡಿದ್ದಾರೆ. ನವೆಂಬರ್‌ನಲ್ಲಿ ರಾಜ್ಯದ ಅಧಿಕಾರ ಚುಕ್ಕಾಣಿ ದಕ್ಕುವುದು ಖಚಿತ ಎಂಬ ವಿಶ್ವಾಸದಲ್ಲಿರುವ ಶಿವಕುಮಾರ್, ತಮ್ಮ ವಿರೋಧಿಗಳು ಹೆಣೆಯುತ್ತಿರುವ ರಾಜಕೀಯ ಮೇಲಾಟಗಳಿಗೆ ಪ್ರತಿಯಾಗಿ ತಂತ್ರ ರೂಪಿಸುತ್ತಿದ್ದಾರೆ.

ಇದರ ನಡುವೆ, ವಿಧಾನಸಭೆಯಲ್ಲಿ ಆರ್‌ಎಸ್‌ಎಸ್ ಪ್ರಾರ್ಥನಾ ಗೀತೆ ಹಾಡಿದ್ದು, ಚಾಮುಂಡಿಬೆಟ್ಟ ಕೇವಲ ಹಿಂದೂಗಳ ಆಸ್ತಿಯಲ್ಲ ಎಂಬ ಹೇಳಿಕೆ ಭಾರೀ ವಿವಾದವನ್ನು ಹುಟ್ಟುಹಾಕಿದೆ.

ಆರ್‌ಎಸ್‌ಎಸ್ ಗೀತೆ ಬಗ್ಗೆ ವರಿಷ್ಠರು ಗರಂ ಆದ ನಂತರ ಬಹಿರಂಗವಾಗಿ ಶಿವಕುಮಾರ್ ಕ್ಷಮೆಯಾಚಿಸಿದರು. ಇದಾದ ನಂತರ ಚಾಮುಂಡಿ ಬೆಟ್ಟದ ಬಗ್ಗೆ ನೀಡಿರುವ ಹೇಳಿಕೆಯನ್ನು ಪ್ರತಿಪಕ್ಷ ಬಿಜೆಪಿ ರಾಜಕೀಯ ಅಸ್ತ್ರವಾಗಿ ಬಳಸಿಕೊಂಡಿದೆ.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟರ್ ನನಗೆ ಬಸ್ಸಿನಲ್ಲಿ ಕುಳಿತ ತಕ್ಷಣ ನಿದ್ರೆ ಬರುತ್ತೆ...

ಡಾಕ್ಟರ್ : ಒಳ್ಳೇದಾಯಿತು!

ರೋಗಿ : ಅರ್ಥ ಮಾಡಿಕೊಳ್ಳದೆ ಮಾತಾಡ್ಬೇಡಿ ಸಾರ್... ನಾನೇ ಡ್ರೈವರ್...!

ಮೈಸೂರು ಮಿತ್ರ

ಶನಿವಾರ, 30 ಆಗಸ್ಟ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ......

ವಿದೇಶಕ್ಕೆ ದುಡ್ಡು ಮಾಡಲು ಹೋಗಿ ಜಡ್ಡು ತರುವುದಕ್ಕಿಂತ, ಸ್ವದೇಶಕ್ಕೆ ದುಡಿದು ವಿದೇಶಕ್ಕೆ ಸೆಡ್ಡು ಹೊಡಿ ಎಂದ ಸರ್ವಜ್ಞ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊಟ ಬಲ್ಲವನಿಗೆ ರೋಗವಿಲ್ಲ
ಮಾತು ಬಲ್ಲವನಿಗೆ ಜಗಳವಿಲ್ಲ.

ನಿಮ್ಮ ಪತ್ರಗಳು

ಬೇಕಿತ್ತೇ ಈ ವಿವಾದ?

ಮಾನ್ಯರೆ,

ದಸರಾ ಸಾಂಸ್ಕೃತಿಕ ಹಬ್ಬ ಉದ್ಘಾಟಿಸಲು ಕನ್ನಡ ಸಾಹಿತಿ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವ ಸರ್ಕಾರದ ನಿರ್ಧಾರಕ್ಕೆ ನಿರೀಕ್ಷೆಯಂತೆ ವಿರೋಧ ಪಕ್ಷ ಪ್ರತಿಕ್ರಿಯಿಸಿದೆ. ಉದ್ವೇಗದಿಂದ ಭಾಜಪದ ನಾಯಕಿಯೊಬ್ಬರು ಬಾನು ಮುಷ್ತಾಕ್ ಅವರು ಚಾಮುಂಡಿ ಬೆಟ್ಟದ ಮೆಟ್ಟಿಲುಗಳನ್ನೂ ಹತ್ತಲು ಬಿಡಬಾರದು ಎಂಬ ನಾಗರಿಕತೆಯ ಗೆರೆಯನ್ನು ದಾಟಿದ ಅಪ್ಪಣೆ ಕೊಟ್ಟಿದ್ದಾರೆ! ಚಾಮುಂಡೇಶ್ವರಿ ಹಿಂದೂಗಳ ದೇವತೆಯಾದ್ದರಿಂದ, ಚಾಮುಂಡಿ ಬೆಟ್ಟ ಹಿಂದೂಗಳ, ಹಿಂದೂ ಧರ್ಮಕ್ಕೆ ಸೀಮಿತವಾದ ಬೆಟ್ಟವೆಂದು ವಿರೋಧ ಪಕ್ಷದ ನಾಯಕರು, ಶಾಸಕರು, ಸಂಸದರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ನಿಲುವಿಗೆ ಬಹುಪಾಲು ಹೊರತಾಗಿ ಸಂಸದರಾದ ಮಾನ್ಯ ಯದುವೀರ ಒಡೆಯರ್ ಅವರು ಮಾತ್ರ ಸಮತೂಕದ ಮಾತುಗಳನ್ನಾಡಿರುವುದು ಗಮನಾರ್ಹ. ಉಳಿದವರು ಹಿಂದೂ ಧರ್ಮ ಹಾಗೂ ಹಿಂದೂ–ಮುಸ್ಲಿಂ ಮತಗಳ ಬಗ್ಗೆ ಮಾತನಾಡಿದ್ದಾರೆ.

ಸುಧಾರಿಸಿದ ಹಿಂದೂ ಧರ್ಮದ (ಬಡತನ, ಅಸಮಾನತೆ ಮತ್ತು ಅನ್ಯಾಯ, ಮಹಿಳೆಯರ ಅಹಿತವಾದ ಸಂದರ್ಭ ಕುರಿತದ್ದು) ಉತ್ತಮೋತ್ತಮ ಪ್ರತಿಪಾದಕರಾದ ಭಾಜಪವೂ ಗೌರವಿಸುವ – ಸ್ವಾಮಿ ವಿವೇಕಾನಂದ ಅವರ ಘೋಷ ಮೌಲ್ಯಗಳ ಬರಹವನ್ನು ಭಾಜಪ ನಾಯಕರು ಗಮನಿಸಿಲ್ಲವೆಂದು ಹೇಳಬಹುದಲ್ಲವೇ? ಸ್ವಾಮಿ ವಿವೇಕಾನಂದರ ಸಂದೇಶ ನೋಡಿ: ಹಿಂದೆ ಇದ್ದ ಧರ್ಮಗಳನೆಲ್ಲಾ ನಾನು ಸ್ವೀಕರಿಸುತ್ತೇನೆ. ನಾನು ಮಹಮ್ಮದೀಯರ ಮಸೀದಿಗೆ ಹೋಗುತ್ತೇನೆ. ಕ್ರೈಸ್ತರ ಚರ್ಚಿನಲ್ಲಿ ಶಿಲುಬೆಯ ಎದುರಿಗೆ ಬಾಗುತ್ತೇನೆ. ಬೌದ್ಧರ ವಿಹಾರದಲ್ಲಿ ಬುದ್ಧನಲ್ಲಿ ಮತ್ತು ಅವರ ಧರ್ಮದಲ್ಲಿ ಶರಣಾಗುತ್ತೇನೆ. ಹಿಂದುಗಳೊಂದಿಗೆ ಆ ಪರಂಜ್ಯೋತಿಯ ದರ್ಶನಕ್ಕಾಗಿ ಧ್ಯಾನ ಮಾಡುವವರೊಂದಿಗೆ ನಾನೂ ಧ್ಯಾನಮಗ್ನನಾಗುತ್ತೇನೆ ಎಂದರು. ಇದು ಸಾಲದೆಂಬಂತೆ ಮುಂದುವರೆದು, ಭಾರತಕ್ಕೆ ಭವಿಷ್ಯದ ಮಾರ್ಗವನ್ನು ತೋರಿಸುವಂತಹ ಧ್ವನಿಯಲ್ಲಿ ಹೇಳಿದ್ದು ನಮ್ಮ ಮಾತೃಭೂಮಿಯಲ್ಲಿ ಹಿಂದೂ ಮತ್ತು ಮುಸಲ್ಮಾನ ಧರ್ಮಗಳೆರಡೂ ಮಿಲನವಾಗಬೇಕು. ಇದೊಂದೇ ನಮ್ಮ ಪುರೋಗಮನಕ್ಕೆ ಹಾದಿ ಎಂಬ ವಿಶ್ವಾಸಪೂರ್ವಕ ಅನುಭವದ ಹಿನ್ನೆಲೆಯಲ್ಲಿ ಹೇಳಿದರು.

ಚರಿತ್ರೆಯಲ್ಲಿ ಮತ್ತೊಂದು ಪ್ರಮುಖ ಪ್ರಸಂಗ: ಉಪನಿಷತ್ತುಗಳ ಮೊದಲ ಭಾಷಾಂತರವೇ (17ನೇ ಶತಮಾನ), ಭಾರತದ ಉತ್ಕೃಷ್ಟ ಸಂಸ್ಕೃತಿಯನ್ನು ತಿಳಿದುಕೊಳ್ಳಲು ಪರ್ಷಿಯನ್ ಭಾಷೆಗೆ ಮಾಡಿಸಿದ್ದು ಚಕ್ರವರ್ತಿ ಶಾಜಹಾನ್ ಮತ್ತು ಮುಮ್ತಾಜ್ ಮಹಲ್ (ಪ್ರಖ್ಯಾತ ತಾಜ್ ಮಹಲ್ ಮುಮ್ತಾಜ್ ಅವರ ಸಮಾಧಿಯ ಮೇಲೆ ನಿರ್ಮಿಸಿರುವ ಭವ್ಯ ಕಟ್ಟಡ) ಅವರ ಹಿರಿಯ ಪುತ್ರ ದಾರಾ ಶಿಖೋ ಭಾಷಾಂತರವೇ ಸಂಸ್ಕೃತಿಯ ದೃಷ್ಟಿಯಿಂದ ಯೂರೋಪ್ ದೇಶಗಳ ವಿದ್ವಾಂಸರ ಗಮನ ಸೆಳೆದದ್ದು! ಅದರಲ್ಲಿ ಧಾರ್ಮಿಕ ಮತಾಂತರ ನೆರಳೂ ಇರಲಿಲ್ಲವೆಂಬ ಅಂಶ ಮುಖ್ಯವಾಗಿದೆ.

ಭಾನು ಮುಷ್ತಾಕ್ ಅವರ ನೆಪದಲ್ಲಿ ಹರಿತವಾದ ಮತ–ಆಧಾರಿತ ರಾಜಕೀಯಕ್ಕೆ ನಿರಂತರವಾಗಿ ಚಾಲನೆ ಕೊಟ್ಟಿರುವುದು ಸ್ವಾಮಿ ವಿವೇಕಾನಂದರ ಆಕಾಂಕ್ಷೆಯಿಂದ ಹೊರಬಂದು, ರಾಜ್ಯದ ಬಹುಪಾಲು ಜನ ಬಯಸುವ ಶಾಂತಿ, ಸಹಬಾಳ್ವೆಗೆ ತೊಂದರೆಯಾಗದಿರಲಿ ಎಂದು ಆಶಿಸಿ, ಕುವೆಂಪು ಅವರ ಕಳಕಳಿಯ ಎಚ್ಚರಿಕೆಯೊಂದಿಗೆ ಈ ಬರಹವನ್ನು ಮುಗಿಸುತ್ತಿದ್ದೇನೆ:

ಮತಮೌಢ್ಯ ಎಂಬ ನಿತ್ಯರೋಗವು ಅದರ ನಾಡಿನಾಡಿಗಳಲ್ಲಿ ಮಾತ್ರವಲ್ಲದೆ ಎಲುಬಿನಲ್ಲಿಯೂ ಐದುಸಾವಿರ ವರ್ಷಗಳಿಂದ ಸರ್ವವ್ಯಾಪಿಯಾಗಿದ್ದು ವರ್ಗ ವರ್ಣ ಮತ್ತು ಜಾತಿ ಪಂಥ ಪಂಗಡ ಎಂಬ ನೂರಾರು ಭೇದಗಳಿಂದ ನರಳುತ್ತಿರುವ ದೇಶ! ಈ ಮತಭ್ರಾಂತಿಯಿಂದ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ. ಇನ್ನು ಮುಂದೆಯಾದರೂ ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ, ಸಮಾಜವಾದವಾಗಲಿ, ಸಮಾನತಾಭಾವ ಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

–ಪ್ರೊ ಬಿ.ಕೆ.ಚಂದ್ರಶೇಖರ್, ಮಾಜಿ ಸಭಾಪತಿ, ಕವಿಪ.

ರಿಯಲ್ ಎಸ್ಟೇಟ್ ಕುತಂತ್ರಗಳಿಗೆ ಜನ ಸಾಮಾನ್ಯರು ಬಲಿ

ಮಾನ್ಯರೆ,

ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಹೆಸರು ಬದಲಾದರೂ ಗುಣ ಬದಲಾಗುತ್ತಿಲ್ಲವಲ್ಲ. ರಿಯಲ್ ಎಸ್ಟೇಟ್‌ನವರು ಉದ್ಯಮಕ್ಕೆ ಬೂಸ್ಟ್ ನೀಡಲು ಮಾಡುವ ತಂತ್ರಗಳಿಂದ ಬಲಿಯಾಗುತ್ತಿರುವವರು ಮಧ್ಯಮ ವರ್ಗದ ಜನರು. ತಮ್ಮ ಜೀವಿತಾವಧಿಯ ಉಳಿತಾಯದಲ್ಲಿ ಆರಡಿ ಮೂರಡಿ ಜಾಗವನ್ನೂ ಕೊಳ್ಳದಂತೆ ಮಾಡುತ್ತಿರುವರಲ್ಲ. ಇದಕ್ಕೆ ಕಡಿವಾಣ ಹಾಕುವವರು ಏನು ಮಾಡುತ್ತಿದ್ದಾರೆ? ಏನೂ ಮಾಡುವುದಿಲ್ಲ ಅನ್ನುವುದನ್ನು ನಮ್ಮ ಜನ ಬಲ್ಲರು. ಕಾರಣ ಅಧಿಕಾರದಲ್ಲಿ ಇರುವವರ ನಿವೇಶನಗಳು ಒಂದೇ.. ಎರಡೇ.. 20X30 ಸೈಟ್‌ಗೆ 2 ಕೋಟಿ, 50X80 ಸೈಟ್‌ಗೆ 9 ಕೋಟಿ ರೂ.ಗೆ ಬಿಡ್ ಮಾಡಿರುವ ಮಹಾಶಯರು ಯಾರೂ ಎಂಬುದನ್ನು ಸಾರ್ವಜನಿಕರಿಗೆ ಪರಿಚಯ ಮಾಡಿಕೊಡಬೇಕು ಹಾಗೂ ಸಂಬಂಧಿಸಿದ ಇಲಾಖೆಯವರು ಇವರ ಹಿನ್ನೆಲೆಯನ್ನು ಪರಿಶೀಲಿಸಿ ಮಾರುಕಟ್ಟೆಯ ಬೆಲೆಗಿಂತ ಅಜಗಜಾಂತರ ವ್ಯತ್ಯಾಸದಲ್ಲಿ ಸೈಟ್‌ಗಳನ್ನು ಕೊಳ್ಳುತ್ತಿರುವ ಕಾರಣಗಳನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಬೇಕಾಗಿದೆ.

ಎಲ್ಲದಕ್ಕೂ ಒಂದು ಮಿತಿ ಇದೆ. ಮಿತಿಮೀರಿ ಹೊರಟರೆ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತದೆ. ಒಬ್ಬ ಸರ್ಕಾರಿ ನೌಕರ ವಯೋನಿವೃತ್ತಿ ಆದಾಗ ಸಿಗುವ ಅಂದಾಜು ಮೊತ್ತ 50 ಲಕ್ಷಗಳಿಗಿಂತ ಹೆಚ್ಚಿರುವುದಿಲ್ಲ. ಆ ಮೊತ್ತದಲ್ಲಿ ಒಂದು ಸಣ್ಣ ನಿವೇಶನವನ್ನು ಕೊಳ್ಳಲಾಗದು. ಇನ್ನು ಜನಸಾಮಾನ್ಯರು, ಬೀದಿ ಬದಿ ವ್ಯಾಪಾರಿಗಳು, ಕೂಲಿಕಾರ್ಮಿಕರು ಕುಟುಂಬದ ರಕ್ಷಣೆಗೆಂದು ಮನೆ ಮಾಡುವ ಕನಸು ನನಸಾಗುವುದೇ ಇಲ್ಲ!.

ಮೈಸೂರಿನಲ್ಲಿ ಒಂದು ವರ್ಷದ ಅಂತರದಲ್ಲಿ ಚದರಡಿಗೆ ರೂ.1500 ಇದ್ದದ್ದು ರೂ.3000ಕ್ಕೆ ಏರಿಕೆ ಆಗುವುದನ್ನು ನೋಡಿದರೆ ಇಲ್ಲಿ ವ್ಯವಸ್ಥಿತ ಜಾಲದ ಕೈವಾಡ ಇರುವುದನ್ನು ಅಲ್ಲಗಳೆಯುವಂತಿಲ್ಲ. ನಿಯಂತ್ರಿಸಲು ಸರ್ಕಾರಕ್ಕೂ ಮನಸ್ಸಿಲ್ಲ. ಕಾರಣ ಬಾರಿ ಮೊತ್ತದಲ್ಲಿ ನೋಂದಣಿ ಫೀಸು ಸರ್ಕಾರಕ್ಕೆ ಪಾವತಿ ಆಗುತ್ತದಲ್ಲ. ರಿಯಲ್ ಎಸ್ಟೇಟ್ ಎಂಬ ಸೊಕ್ಕಿನ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಕಡಲೂ ನಿನ್ನದೆ... ಹಡಗೂ ನಿನ್ನದೆ... ಮುಳುಗದಿರಲಿ ಬದುಕು





ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ಕಳೆದ ವರ್ಷದಂತೆ ಈ ಬಾರಿಯೂ ಭರ್ಜರಿ ಮಳೆ, ಜೂನ್ ತಿಂಗಳಲ್ಲೇ ರಾಜ್ಯದ ಎಲ್ಲಾ ಜಲಾಶಯಗಳು ತುಂಬಿತುಳುಕುತ್ತಿವೆ, ಹೀಗೆಯೇ ಮಳೆಗಾಲ ಮುಗಿಯುವವರೆಗೂ ಮಳೆ ಸುರಿದರೆ ಅತಿವೃಷ್ಟಿಗೆ ಬಲಿಯಾಗುತ್ತೇವೆ. ಈಗಾಗಲೇ ಕೆಲವು ಕಡೆಗಳಲ್ಲಿ ಪ್ರವಾಹಕ್ಕೆ ಸಿಲುಕಿ ಪ್ರಾಣಹಾನಿಯನ್ನೂ ಒಳಗೊಂಡಂತೆ ಅಪಾರ ನಷ್ಟವಾಗಿದೆ. ಪ್ರವಾಹಕ್ಕೆ ಸಿಲುಕಿ ಈಜಲು ಬಾರದಿದ್ದವರು ನೀರೊಳಗೆ ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ಕೈಕಾಲು ಬಡಿಯುತ್ತಿದ್ದಾರೆ. ಮಕ್ಕಳೋ ರಸ್ತೆ ಹಾಗೂ ಹಳ್ಳಕೊಳ್ಳಗಳಲ್ಲಿ ಹರಿಯುವ ನೀರಿನಲ್ಲಿ ಮುಳುಗೇಳುತ್ತಾ.. ಮಳೆಯಲ್ಲಿ ನೆನೆಯುತ್ತಾ ಸಂಭ್ರಮಿಸುತ್ತಿವೆ. ಶಾಲೆಯ ಚಿಂತೆ ಇಲ್ಲ, ಸಂದರ್ಭಕ್ಕೆ ಅನುಗುಣವಾಗಿ ಶಾಲೆಗಳಿಗೆ ರಜೆಯನ್ನು ಆಯಾ ಜಿಲ್ಲಾಡಳಿತವೇ ಘೋಷಿಸುತ್ತಿದೆ. ಸೂರ್ಯನೂ ಸಹ ಆಗಾಗ್ಗೆ ಸ್ವಯಂ ಘೋಷಿತ ರಜೆ ಪಡೆಯುತ್ತಾ ಮೋಡಗಳಿಗೆ ಮಳೆ ಸುರಿಸುವ ಕೆಲಸ ಕೊಟ್ಟಿದ್ದಾನೆ.

ಅವಕಾಶಕ್ಕೆ ಕಾಯುತ್ತಿದ್ದವರಂತೆ ನದಿತೊರೆ, ರಾಜಕಾಲುವೆಗಳು ಮನೆಬಾಗಿಲಿಗೆ ಬಂದಿವೆ! ಬೆಂಗಳೂರಿನಲ್ಲಿ ಕೆಲವರ ಮನೆಯೊಳಕ್ಕೂ ನುಗ್ಗಿ ಒಳಗಿದ್ದವರನ್ನು ಹೊರದೂಡಿವೆ. ಜನನಾಯಕರು ಮತ್ತು ಅಧಿಕಾರಿಗಳಿಂದ ಬೀದಿಗೆ ಬಿದ್ದವರನ್ನು ಸಂತೈಸುವ ಕಾರ್ಯ ನಡೆದಿದೆ. ನೆಲೆ ಸಿಗಬಹುದೆಂಬ ಆಸೆಯಿಂದ ಸುತ್ತವರಿಯುವ ನಿರಾಶ್ರಿತರ ವಿಡಿಯೋ, ಫೋಟೋಗಳು ಜಾಲತಾಣದಲ್ಲಿ ಪತ್ರಿಕೆಗಳಲ್ಲಿ ರಾರಾಜಿಸುತ್ತಿವೆ. ಕುಸಿಯುವ ಬೆಟ್ಟಗುಡ್ಡಗಳು, ಬೀಳುತ್ತಿರುವ ಮನೆಗಳ ನೇರ ದೃಶ್ಯಗಳನ್ನು ಟಿವಿಗಳಲ್ಲಿ ಹಬೆಯಾಡುವ ಘಮಘಮ ಕಾಫಿ ಹೀರುತ್ತಾ.... ಕುರುಕಲ ತಿಂಡಿ ತಿನ್ನುತ್ತಾ ನೋಡಿ ಕರುಣೆಯಿಂದ ಲೊಚಗುಡುತ್ತಿದ್ದಾರೆ. ಎತ್ತರ ಪ್ರದೇಶದಲ್ಲಿನ ನಿವಾಸಿಗಳು. ಜೋರು ಮಳೆ ಬಿದ್ದ ಸಂದರ್ಭಗಳಲ್ಲಿ ರಾಜ್ಯದ ಕೆಲವೆಡೆ ಇದು ಮಾಮೂಲಿ ದೃಶ್ಯಗಳಾಗಿವೆ.

ಸಂಘ–ಸಂಸ್ಥೆಗಳು ಕೊಡುವ ಬ್ರೆಡ್ಡುಬಿಸ್ಕತ್ತುಗಳನ್ನು ತಿನ್ನುತ್ತಾ ಅನಾಹುತದ ತೀವ್ರತೆಯನ್ನು ಅರಿಯದೆ ನಲಿದಾಡುತ್ತಿವೆ ಮುಗ್ದಮಕ್ಕಳು, ಅವುಗಳಿಗೆ ಭವಿಷ್ಯದ ಚಿಂತೆ ಇಲ್ಲ, ಮನೆಯ ಮುಂದಿನ ನೀರಿನಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ಆಟವಾಡುವುದೇ ಅವುಗಳಿಗೆ ಪರಮಾನಂದ. ಬ್ಯಾಗುಗಳಲ್ಲಿ ಇದ್ದ ಪುಸ್ತಕಗಳು ತೊಯ್ದು ತೊಪ್ಪೆಯಾಗಿವೆ. ಅಬ್ಬಾ.. ಓದುಬರೆಯುವ ಗೋಜಿಲ್ಲವೆನ್ನುವುದು ಅವುಗಳ ಖುಷಿಗೆ ಮತ್ತೊಂದು ಕಾರಣವೂ ಇರಬಹುದು.

ಗಾಳಿ–ಮಳೆ ಬಂತೆಂದರೆ ವಿದ್ಯುತ್‌ಕಂಬಗಳು ತಮ್ಮ ಸೊಂಟ ಮುರಿದುಕೊಂಡು ಬೀಳುವುದು, ತಂತಿಗಳು ನೆಲಮುಟ್ಟುವುದು, ಕರೆಂಟ್ ತಗುಲಿ ಮರಣಹೊಂದುವುದು ಸಾಮಾನ್ಯ. ವಿದ್ಯುತ್ ಇಲಾಖೆಯ ಸಿಬ್ಬಂದಿಗೆ ಎಲ್ಲಿ, ಏನು ಸಂಭವಿಸುತ್ತದೋ ಎಂಬ ಚಿಂತೆ.

ಕೊಡುವುದು ಊಟವೇ ಆದರೂ ಗಂಜೀ ಕೇಂದ್ರವೆಂದು ಕರೆಯುವ ತಾಣಗಳಲ್ಲಿ ಬೀಡು ಬಿಟ್ಟ ನಿರಾಶ್ರಿತರು, ಅವರನ್ನು ಗುರುತಿಸಿಕೊಳ್ಳಲು ಇದ್ದ ಆಧಾರ್ ಕಾರ್ಡುಗಳನ್ನು ಸಹ ಬಿಡದೆ ಕ್ರೂರ ಪ್ರವಾಹ ಎಲ್ಲವನ್ನೂ ಬಾಚಿಕೊಂಡು ಹೋಗಿದೆ. ಯುದ್ಧ ಮುಗಿದ ರಣರಂಗಕ್ಕಿಂತಲೂ ಭಯಾನಕವಾಗಿದೆ ಕೆಲವು ನದಿತೀರದ ಗ್ರಾಮಗಳ ದೃಶ್ಯಾವಳಿಗಳು. ತಾತ–ಮುತ್ತಾತರ ಕಾಲದಿಂದಲೂ ಬದುಕಿ–ಬಾಳಿದ ಮನೆಗಳು ನಿರ್ನಾಮವಾಗಿವೆ, ಅಲ್ಲಲ್ಲಿ ಅಳಿದುಳಿದ ಮನೆಗಳು ಇಂದೋ ನಾಳೆಯೋ ಬೀಳುವ ಸ್ಥಿತಿಯಲ್ಲಿವೆ. ಬೀಳುವುದು ಗೊತ್ತಿದ್ದರೂ ಮನೆ ತೊರೆಯಲು ಮನಸ್ಸು ಮಾಡದೆ ಇರುವ ಅಜ್ಜಅಜ್ಜಿಯರು ಬಿರುಕುಬಿಟ್ಟ ಗೋಡೆಯ ಸಂದಿಯಿಂದ ಮಳೆಯ ಆರ್ಭಟವನ್ನು ಇಣುಕಿ ನೋಡುತ್ತಿರುತ್ತಾರೆ.

ತಿ.ನರಸೀಪುರ ತಾಲೂಕಿನ ತಡಿಮಾಲಂಗಿ ಗ್ರಾಮವು ಕಾವೇರಿ ನದಿಗೆ ಹೊಂದಿಕೊಂಡಂತೆ ಇದೆ, ಪ್ರವಾಹದ ಸಮಯದಲ್ಲಿ ಬಹಳಷ್ಟು ಮನೆಗಳ ಹೊಸಿಲು ಮುಟ್ಟಿ ಮನೆಯೊಳಕ್ಕೆ ನೀರು ನುಗ್ಗುವ ಹಂತಕ್ಕೆ ಬಂದರೂ, ಅಲ್ಲಿನ ಗ್ರಾಮದವರು ಮನೆಗಳನ್ನು ಬಿಟ್ಟು ಹೋಗುವುದಿಲ್ಲ, ಕೇಳಿದರೆ ಸಾವಿರಾರು ವರ್ಷಗಳಿಂದ ಪೂರ್ವಿಕರು ಬಾಳಿಬದುಕಿದ ಊರು ಇದು, ಇದನ್ನು ಬಿಟ್ಟು ಹೋಗುವುದೇಗೆ?, ಎಂದು ಹೇಳುತ್ತಾರೆ. ಇಂತಹ ಹಳ್ಳಿಗಳು ರಾಜ್ಯದಲ್ಲಿ ಸಾವಿರಾರಿವೆ.

ರಾತ್ರಿ ಚಳಿಗೆ ಮಕ್ಕಳು ತೊಯ್ದ ಕಂಬಳಿ ಹೊದ್ದು ನಡುಗುತ್ತವೆ, ದೊಡ್ಡವರಿಗೆ ಕಣ್ಣು ಮುಚ್ಚಲು ಆಗುತ್ತಿಲ್ಲ. ಕಣ್ಣೆದುರಿಗೆ ಕುರಿ–ಕೋಳಿಗಳು, ದನ–ಕರುಗಳು ತೇಲಿಹೋಗುತ್ತಿವೆ. ಕರುಳ ಕಿವುಚಿದೆ, ಪ್ರವಾಹದ ಎದುರು ಈಜಲಾರದೆ ಅವುಗಳನ್ನು ರಕ್ಷಿಸಿಕೊಳ್ಳಲಾರದ ಅಸಹಾಯಕ ಸ್ಥಿತಿ ಅವರದ್ದು. ಮುಂದೆ ಬದುಕು ಕಟ್ಟಿಕೊಳ್ಳುವುದು ಹೇಗೆಂದು ಚಿಂತೆಯಲ್ಲಿದ್ದಾರೆ. ಸರ್ಕಾರ ನೀಡುವ ತಕ್ಷಣದ ಪರಿಹಾರ ಹತ್ತು ಸಾವಿರ ತೆಗೆದುಕೊಳ್ಳುವುದಕ್ಕೂ ಅವರ ಬಳಿ ಯಾವುದೇ ಬ್ಯಾಂಕ್ ಖಾತೆಗಳಿಲ್ಲ.

ಬರದಿಂದ ಬಸವಳಿದು ಬೆಂಡಾಗಿದ್ದ ಜನ ಕೆಲವೇ ದಿನಗಳಲ್ಲಿ ಪ್ರವಾಹದಿಂದ ತತ್ತರಿಸಿ ಹೋಗುತ್ತಾರೆ. ತೊಟತೊಟ ಸುರಿಯುತ್ತಿರುವ ಮಳೆ ನಿಲ್ಲುವುದೇ ಇಲ್ಲ. ಭೇದ–ಭಾವವಿಲ್ಲದೆ ಜಾತ್ಯಾತೀತವಾಗಿ ತನ್ನ ತೆಕ್ಕೆಯೊಳಗೆ ಬಾಚಿ ರಕ್ತದೋ ಕುಳಿಯಾಗಿ ಕೆಂಪು ಬಣ್ಣದಿಂದ ಹರಿಯುತ್ತಿರುವ ಪ್ರವಾಹ ಕಡಿಮೆ ಆಗುವ ಲಕ್ಷಣಗಳು ಕಾಣುವುದಿಲ್ಲ. ಸೂರ್ಯನು ಎಂದು ತನ್ನ ಮುಷ್ಕರವನ್ನು ನಿಲ್ಲಿಸಿ ಬೆಳಕು ಚೆಲ್ಲಿ ಕರಿಮೋಡಗಳನ್ನು ಓಡಿಸುತ್ತಾನೋ..?! ತಿಳಿಯದು, ಹವಾಮಾನ ಇಲಾಖೆಯ ಸೂಚನೆಯಂತೆ ಜಿಲ್ಲಾಡಳಿತ ರೆಡ್ಡು, ಯೆಲ್ಲೋ, ಆರೆಂಜ್ ಅಲರ್ಟ್‌ಗಳನ್ನು ಘೋಷಿಸುತ್ತಲೇ ಇದೆ.

ನಿರಾಶ್ರಿತರ ಪರಿಹಾರಕ್ಕಾಗಿ ಅಧಿಕಾರಿಗಳು ಹಗಲಿರುಳು ಅಂಕಿಅಂಶಗಳನ್ನು ಕಲೆಹಾಕುತ್ತಿದ್ದಾರೆ, ನೆನ್ನೆ ಇದ್ದ ಅಂಕಿಸಂಖ್ಯೆ ಇಂದಿಲ್ಲ, ಇಂದಿದ್ದು ನಾಳೆಗೆ ಮತ್ತೊಂದು, ಪ್ರವಾಹಕ್ಕೆ ಸಿಲುಕಿದವರ ಸಂಖ್ಯೆ ಹೆಚ್ಚಿದಂತೆ ಏರುತ್ತಲೇ ಇರುವುದು, ಪರಿಹಾರವಾಗಿ ಸರ್ಕಾರದ ಮಾರ್ಗಸೂಚಿಯನ್ವಯ ಕೊಡುವ ಕಾಸು ಯಾವುದಕ್ಕೂ ಸಾಲದು. ಬಿದ್ದ ಮನೆಗಳಲ್ಲಿ ಐಷಾರಾಮಿ ಬಂಗಲೆಯಿಂದ ಗುಡಿಸಲುಗಳವರೆಗು ಇವೆ, ಬಡವ ಶ್ರೀಮಂತನೆಂದು ಇದ್ದ ವರ್ಗ ಇಂದು ಬರೀ ನಿರಾಶ್ರಿತ ವರ್ಗವಾಗಿ ಕೈಯ್ಯಲ್ಲಿ ಆಧಾರ್ ಕಾರ್ಡ್ ಸಹ ಇಲ್ಲದೆ ಗಂಜೀಕೇಂದ್ರಗಳಲ್ಲಿ ಮುದುಡಿ ಕೂರುವಂತೆ ಮಾಡಿದೆ ಕ್ರೂರಿ ಮಹಾಮಳೆ.

ನೆರೆ ಬಂದ ಊರುಗಳಲ್ಲಿ ಮದುವೆ–ಮುಂಜಿ, ಉಳುಮೆ–ಬಿತ್ತನೆ, ಸಡಗರ–ಸಂಭ್ರಮ ಯಾವುದೂ ಇಲ್ಲ. ನಿಶ್ಚಿತಾರ್ಥ ಆದವುಗಳಿಗೂ ಮದುವೆ ಭಾಗ್ಯವಿಲ್ಲ. ಬಸಿರು–ಬಾಣಂತಿಯರದ್ದು ಬೇರೆಯದೇ ಸಮಸ್ಯೆ, ಬಸಿರಾದವರಿಗೆ ಹೆರಬೇಕೋ, ಬೇಡವೋ? ಎನ್ನಲಾಗದು ಅವಧಿ ಆಯ್ತೆಂದರೆ ಹಡೆಯಲೇಬೇಕು ಇನ್ನು ಬಾಣಂತಿಯರಿಗೆ ಹಸುಗೂಸುಗಳನ್ನು ಪೋಷಿಸುವ ಚಿಂತೆ. ಪಕೃತಿಯ ವಿಕೋಪವೇ ಹಾಗೆ ಜೀವಸಂಕುಲಗಳ ಬದುಕನ್ನು ಮೂರಾಬಟ್ಟೆ ಮಾಡಿಬಿಡುತ್ತದೆ. ಈ ಕಟುಸತ್ಯ ನಮ್ಮ ಕಣ್ಣೆದುರಿಗೇ ನಡೆಯುತ್ತಿರುವುದು ನಮ್ಮ ದುರ್ದೈವ.

ನಿತ್ಯವೂ ಸಾಯುವವರಿಗೆ ಅಳುವವರು ಯಾರು? ಎಂಬಂತಾಗಿದೆ ಬಹಳ ದಿನಗಳವರೆಗೆ ಸುರಿಯುವ ಮಳೆಯ ಆರ್ಭಟದ ಹಾನಿ ಅಥವಾ ಮಳೆಯೇ ಬರದೆ ಬರಗಾಲದಿಂದ ಭೂಮಿ ಬರಡಾಗಿ ಕ್ಷಾಮದಿಂದ, ಸಮಯವಾದಂತೆ ಮನಕರಗುವಿಕೆಯ ತೀವ್ರತೆ ಪ್ರಾರಂಭದಲ್ಲಿ ಇದ್ದಂತಿಲ್ಲ. ನಿರಾಶ್ರಿತರ ಶಾಶ್ವತ ಪುನರ್ವಸತಿ ಆಗುವುದೆಂತೋ?, ಅಂಕಿಅಂಶಗಳಲ್ಲೇ ಕಳೆದುಹೋಗುವುದು ಬೇಡ. ಈ ಕಾರ್ಯದಲ್ಲಿ ಪ್ರತಿಯೊಬ್ಬ ನಾಗರಿಕನು ಸರ್ಕಾರದ ಜೊತೆ ಕೈಜೋಡಿಸುವುದು ಮುಖ್ಯವಾಗುವುದು. ಏಕೆಂದರೆ ಮುಂದೆ ಗ್ರಹಚಾರ ವಕ್ಕರಿಸಿದರೆ ಪ್ರಕೃತಿಯೊಂದಿಗೆ ಬದುಕುತ್ತಿರುವ ನಾವು ಕೂಡ ನಿರಾಶ್ರಿತರಾಗಬಹುದಲ್ಲವೇ?. ಅಯ್ಯೋ ಆ ಪರಿಸ್ಥಿತಿಯನ್ನು ಕನಸ್ಸಿನಲ್ಲೂ ಕಾಣುವುದು ಬೇಡ.

ಎಲ್ಲದಕ್ಕೂ ಶಾಶ್ವತ ಪರಿಹಾರವನ್ನು ಕಂಡುಕೊಳ್ಳುತ್ತೇವೆ. ಆದರೆ ಮಳೆಹಾನಿ ಮತ್ತು ಕ್ಷಾಮ ಎರಡಕ್ಕೂ ಶಾಶ್ವತ ಪರಿಹಾರ ಎಂಬುದು ಇಲ್ಲವಲ್ಲ. ರಾಜಧಾನಿ ಬೆಂಗಳೂರಿಗೆ ಏನಾಗಿದೆ ದೊಡ್ಡ ರೋಗ, ಪ್ರತೀ ಮಳೆಯಲ್ಲೂ ಒಂದಿಲ್ಲೊಂದು ಬಡಾವಣೆ ಮುಳುಗಿ, ನಿವಾಸಿಗಳು ನೆಮ್ಮದಿ ಕಳಕೊಂಡು ಗೀಳಿಡುತ್ತಾರೆ. ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬಹುದಾಗಿದ್ದರೂ ಭ್ರಷ್ಟಾಚಾರದಿಂದಾಗಿ ಕೈಗೊಳ್ಳುವ ಯೋಜನೆಗಳು ಊರ್ಜಿತವಾಗದೆ ವಿಫಲ ಆಗುತ್ತಿವೆ. ರಾಜಕಾಲುವೆಗಳ ಮೇಲೆಯೇ ಕಟ್ಟಡಗಳನ್ನು ಕಟ್ಟುತ್ತಾರೆ, ಕೆರೆಗಳನ್ನು ಬಡಾವಣೆ ಮಾಡಿ ಮುಗಿಲೆತ್ತರದ ಕಟ್ಟಡಗಳನ್ನು ಕಟ್ಟುತ್ತಾರೆ. ಇವುಗಳಿಗೆ ಅನುಮತಿ ಕೊಟ್ಟವರು ಯಾರು?.

ಪ್ರವಾಹದ ಹೊಡೆತಕ್ಕೆ ಸಿಕ್ಕ ಜನರು ಚೇತರಿಸಿಕೊಳ್ಳುವುದಕ್ಕೆ ಬಹಳ ಕಾಲ ಬೇಕು. ಜನರೇನು ಬಿಟ್ಟಿ ಬಿದ್ದಿದ್ದಾರೆಯೇ ಭಗವಂತನೆ, ಮತ್ತೆಮತ್ತೇ ಏಕೆ ನೋವನ್ನು ಕೊಡುತ್ತಿರುವೆ?. ದೀಪವು ನಿನ್ನದೆ, ಗಾಳಿಯು ನಿನ್ನದೆ, ಆರದಿರಲಿ ಬೆಳಕು, ಕಡಲು ನಿನ್ನದೆ, ಹಡಗು ನಿನ್ನದೆ, ಮುಳುಗದಿರಲಿ ಬದುಕು. ನಿಜ ಎಲ್ಲವೂ ಅವನದೇ ಆದರೂ ದುರಾಸೆಯಿಂದ ನಮ್ಮದಾಗಿಸಿಕೊಳ್ಳಲು ಹೋಗಿ ಕಷ್ಟಗಳನ್ನು ಮೈಮೇಲೆ ಹೇರಿಕೊಳ್ಳುತ್ತಿದ್ದೇವೆ, ಹೀಗೇ ಮುಂದುವರಿದರೆ ಭವಿಷ್ಯ ಘನಘೋರ!

"ಪ್ರವಾಹದ ಹೊಡೆತಕ್ಕೆ ಸಿಕ್ಕ ಜನರು ಚೇತರಿಸಿಕೊಳ್ಳುವುದಕ್ಕೆ ಬಹಳ ಕಾಲ ಬೇಕು. ಜನರೇನು ಬಿಟ್ಟಿ ಬಿದ್ದಿದ್ದಾರೆಯೇ ಭಗವಂತನೆ, ಮತ್ತೆಮತ್ತೇ ಏಕೆ ನೋವನ್ನು ಕೊಡುತ್ತಿರುವೆ?. ದೀಪವು ನಿನ್ನದೆ, ಗಾಳಿಯು ನಿನ್ನದೆ, ಆರದಿರಲಿ ಬೆಳಕು, ಕಡಲು ನಿನ್ನದೆ, ಹಡಗು ನಿನ್ನದೆ, ಮುಳುಗದಿರಲಿ ಬದುಕು. ನಿಜ ಎಲ್ಲವೂ ಅವನದೇ ಆದರೂ ದುರಾಸೆಯಿಂದ ನಮ್ಮದಾಗಿಸಿಕೊಳ್ಳಲು ಹೋಗಿ ಕಷ್ಟಗಳನ್ನು ಮೈಮೇಲೆ ಹೇರಿಕೊಳ್ಳುತ್ತಿದ್ದೇವೆ, ಹೀಗೇ ಮುಂದುವರಿದರೆ ಭವಿಷ್ಯ ಘನಘೋರವಾಗಿರುತ್ತದೆ.

ಕಾರ್ಮೋಡ ಕರಗಲಿ...

ಧರ್ಮಸ್ಥಳ ವಿಚಾರವಾಗಿ ಸುತ್ತೂರು ಶ್ರೀಗಳ ಆಶಯ

ನಾಡಿನ ಪ್ರಸಿದ್ಧ ಶ್ರದ್ಧೆ ಹಾಗೂ ಭಕ್ತಿಯ ಧಾರ್ಮಿಕ ಕೇಂದ್ರಗಳಲ್ಲಿ ಶ್ರೀ ಧರ್ಮಸ್ಥಳ ಕ್ಷೇತ್ರವೂ ಒಂದು. ಇಂದು ಕ್ಷೇತ್ರವನ್ನು ವಿವಾದಿತ ಕೇಂದ್ರವನ್ನಾಗಿಸಲು ಕೆಲವರು ಯತ್ನಿಸುತ್ತಿರುವುದು ವಿಷಾದನೀಯ. ನಂಬಿಕೆ ಎಂಬುದು ಬಹು ಸೂಕ್ಷ್ಮ. ಅದು ಕನ್ನಡಿಯಿದ್ದಂತೆ. ಒಮ್ಮೆ ಒಡೆದು ಹೋದರೆ ಮತ್ತೆ ಸರಿಪಡಿಸಲಾಗದು. ಒಡೆದ ಕನ್ನಡಿಯ ಪ್ರತಿಚೂರಿನಲ್ಲೂ ಪ್ರತ್ಯೇಕ ಬಿಂಬಗಳು ಕಾಣುತ್ತಿರುತ್ತವೆ. ಹೀಗೆ ಕಂಡ ಭಿನ್ನ ಬಿಂಬಗಳನ್ನೆಲ್ಲ ನಂಬಿ ವಿಭಿನ್ನವಾಗಿ ಅರ್ಥೈಸುತ್ತಾ ಹೋಗುವುದು ಸೂಕ್ತವಾದುದಲ್ಲ. ಒಂದು ಧಾರ್ಮಿಕ ಕ್ಷೇತ್ರದ ಮೇಲೆ ನಿರಂತರವಾಗಿ ಒಂದಲ್ಲ ಒಂದು ವಿವಾದವನ್ನು ಮುನ್ನೆಲೆಗೆ ತರುತ್ತಿರುವ ಪ್ರಯತ್ನಗಳು ಸೂಕ್ತವಾದುದ್ದಲ್ಲ.

ಶ್ರೀಕ್ಷೇತ್ರ ಧರ್ಮಸ್ಥಳ ಕರ್ನಾಟಕ ಮಾತ್ರವಲ್ಲದೇ ಇಡೀ ಭಾರತ ಮಾತ್ರವಲ್ಲ, ಜಗತ್ತಿನ ಅನೇಕ ಭಾಗಗಳ ಪರಂಪರಾಗತ ಸಹಬಾಳ್ವೆಗೆ ದ್ಯೋತಕ. ಇಲ್ಲಿ ಶಿವ ದೇವಾಲಯ ಪೂಜಿಸುವ ಅರ್ಚಕರು ವಿಷ್ಣುವನ್ನೇ ಪರಮ ದೈವವೆಂದು ನಂಬುವ ಮಾಧ್ವ ಸಂಪ್ರದಾಯದವರು. ಉಸ್ತುವಾರಿ ನೋಡಿಕೊಳ್ಳುತ್ತಿರುವವರು ಶ್ರಮಣ ಧರ್ಮದ ಜೈನ ಸಮುದಾಯದವರು. ಈ ಮೂರು ವಿಭಿನ್ನ ನಂಬಿಕೆಗಳು ಒಗ್ಗೂಡಿರುವ ಶ್ರೀಕ್ಷೇತ್ರದ ಮೂಲ ದೈವಕ್ಕೆ ಹೆಗ್ಗಡೆ ಕುಟುಂಬದವರು ಪರಂಪರಾನುಗತಾ ಶ್ರದ್ಧಾ–ಭಕ್ತಿಗಳಿಂದ ನಡೆದುಕೊಳ್ಳುತ್ತಿರುವುದು ಹಾಗೂ ಯಾವುದೇ ಚ್ಯುತಿಬಾರದಂತೆ ನಿರ್ವಹಿಸುತ್ತಿರುವುದು ಹೆಮ್ಮೆ ಪಡುವ ವಿಚಾರ. ಇದು ಭಾವೈಕ್ಯತೆಗೆ ನಿಜವಾದ ತೋರುಗನ್ನಡಿ.

ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆಯ ಮೂಲಕ ಗ್ರಾಮೀಣ ಜನರ ಬದುಕನ್ನು ಸಮೃದ್ಧಗೊಳಿಸಲು ಹಮ್ಮಿಕೊಂಡಿರುವ ಕಾರ್ಯಗಳು ಅಪೂರ್ವವಾದುವು. ಗ್ರಾಮಗಳಿಗೆ ಕುಡಿಯುವ ನೀರು ಮತ್ತು ಮೂಲ ಸೌಕರ್ಯಗಳನ್ನು ಕಲ್ಪಿಸುತ್ತಿರುವರು. ದೇವಾಲಯಗಳ ಜೀರ್ಣೋದ್ಧಾರ ಕೈಗೊಳ್ಳುತ್ತಿರುವರು. ಮಂಜೂಷಾ ವಸ್ತುಸಂಗ್ರಹಾಲಯದ ಮೂಲಕ ಪ್ರಾಚೀನ ವಸ್ತುಗಳು, ಸ್ಮರಣಿಕೆಗಳು ಹಾಗೂ ಹಸ್ತಪ್ರತಿಗಳ ಸಂಗ್ರಹ ಮತ್ತು ಪ್ರದರ್ಶನ ವ್ಯವಸ್ಥೆ ಮಾಡಿರುವರು. ಸ್ತ್ರೀಶಕ್ತಿ ಸಂಘಗಳ ಮೂಲಕ ಗ್ರಾಮೀಣ ಮಹಿಳೆಯರ ಆರ್ಥಿಕ ಭದ್ರತೆಯನ್ನು ಹೆಚ್ಚಿಸಿ, ಸ್ವಾಭಿಮಾನ ಮತ್ತು ಸ್ವಾವಲಂಬಿ ಬದುಕನ್ನು ಕಲ್ಪಿಸುತ್ತಿರುವರು. 1972 ರಿಂದಲೂ ಸಾಮೂಹಿಕ ವಿವಾಹಗಳ ನಡೆಸುವ ಮೂಲಕ ಶ್ರೀಸಾಮಾನ್ಯರು ಆಡಂಬರದ ಆಚರಣೆಗಳಿಂದ ಅನುಭವಿಸುತ್ತಿದ್ದ ಆರ್ಥಿಕ ತೊಂದರೆಯಿಂದ ಮುಕ್ತರನ್ನಾಗಿರಿಸಿರುವುದು ಅನುಕರಣೀಯ.

ಇಂತಹ ಪವಿತ್ರ ಕ್ಷೇತ್ರದ ಪರಿಸರದಲ್ಲಿ ನಡೆದ ಕೆಲವು ಅಸಹಜ ಸಾವಿನ ಪ್ರಕರಣಗಳು ಗಂಭೀರವಾದುವೇ ಆಗಿರಬಹುದು. ಆದರೆ ಇಂತಹ ಪ್ರಕರಣಗಳನ್ನು ಶ್ರೀಕ್ಷೇತ್ರದೊಂದಿಗೆ ತಳಕು ಹಾಕಲು ಪ್ರಯತ್ನಿಸುವುದು ದುಡುಕಿನ ನಿರ್ಧಾರವಾಗುತ್ತದೆ. **'ಸತ್ಯ ಸದಾ ಮೌನಿ, ಸುಳ್ಳಿಗೆ ಆರ್ಭಟ ಜಾಸ್ತಿ'**. ಇದರಿಂದ ಶ್ರದ್ಧಾವಂತ ಮನಸ್ಸುಗಳಿಗೆ ಧಕ್ಕೆಯುಂಟಾಗಬಾರದು. ಇಂಥ ಕೃತ್ಯಗಳನ್ನು ಸಮಗ್ರವಾಗಿ ತನಿಖೆ ಮಾಡಿ ಸತ್ಯವನ್ನು ಅನಾವರಣ ಮಾಡಬೇಕಾದುದು ಸರ್ಕಾರದ ಜವಾಬ್ದಾರಿಯಾಗಿದ್ದು, ಅದಕ್ಕಾಗಿಯೇ ವಿಶೇಷ ತನಿಖಾ ತಂಡವನ್ನು ರಚಿಸಿದೆ. ಶ್ರೀಕ್ಷೇತ್ರದ ಬಗ್ಗೆ ಅಪಾರ ಭಕ್ತಿ ಮತ್ತು ಶ್ರದ್ಧೆಯನ್ನು ಹೊಂದಿರುವ ಸದ್ಭಕ್ತರು ಶಾಂತಿ ಮತ್ತು ಸಂಯಮದಿಂದ ಇರಬೇಕಾದುದು ಅಗತ್ಯ. ಹಾಗೆಯೇ ನ್ಯಾಯಕ್ಕಾಗಿ ಆಗ್ರಹಿಸುವವರು ಕೂಡ ಯಾವುದೇ ಪೂರ್ವಾಗ್ರಹಗಳಿಗೆ ಒಳಗಾಗದೆ ತನಿಖೆ ಪೂರ್ಣವಾಗುವವರೆಗೆ ಅಸಹನೆಗೊಳ್ಳದೆ ತಾಳ್ಮೆಯಿಂದ ಇರಬೇಕಾದುದೂ ಅವಶ್ಯ. ಯಾವುದನ್ನೇ ಆಗಲಿ **'ಒಡೆಯುವುದು ಸುಲಭ, ಕಟ್ಟುವುದು ಕಷ್ಟ'** ಎಂಬುದನ್ನು ಎಲ್ಲರೂ ಅರಿಯಬೇಕು. ಸರ್ಕಾರ ಆದಷ್ಟು ಶೀಘ್ರ ಕೂಲಂಕುಷವಾಗಿ ತನಿಖೆ ನಡೆಸಿ ಸತ್ಯವನ್ನು ಪತ್ತೆ ಹಚ್ಚಬೇಕು.


ಅನೇಕ ಭಕ್ತರಿಗೆ ಇಂತಹ ಪ್ರಸಂಗಗಳು ಏಕೆ ಎದುರಾಗುತ್ತವೆ? ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡುವುದು ಸಹಜ. ಇದೆಲ್ಲ ಭಗವಂತನ ಲೀಲೆ ಎಂದು ತಿಳಿಯುವುದು ಸೂಕ್ತ. **ತೇನ ವಿನಾತೃಣಮಪಿ ನಚಲತಿ** ಎಂಬಂತೆ ಭಗವಂತನ ಲೀಲೆಯಿಲ್ಲದಿದ್ದರೆ ಇಂಥದ್ದೆಲ್ಲ ಸಂಭವಿಸುವುದಿಲ್ಲ. ಸತ್ಯ ತನ್ನ ಪ್ರಖರತೆಯನ್ನು ಕಂಡು ಕೊಳ್ಳಲು ಇದೂ ಸಹ ಒಂದು ಸಾಧನವಾಗಿರಲೂಬಹುದು!

ದೇವರ ದಾಸಿಮಯ್ಯನವರು

ಹರತನ್ನ ಭಕ್ತರತಿರಿವಂತೆ ಮಾಡುವ । ಒರೆದು ನೋಡುವ ಮಿಸುನಿಯಚಿನ್ನದಂತೆ ।

ಅರೆದು ನೋಡುವಚಂದನದಂತೆ । ಅರಿದು ನೋಡುವಕಬ್ಬಿನ ಕೋಲಿನಂತೆ ।

ಬೆದರದೆ ಬೆಚ್ಚದೆಇರ್ದಡೆ। ಕರವಿಡಿದೆತ್ತಿಕೊಂಬ, ನಮ್ಮ ರಾಮನಾಥ



ಶ್ರೀ ಡಿ. ವೀರೇಂದ್ರ ಹೆಗ್ಗಡೆ ಮತ್ತು ಸುತ್ತೂರು ಶ್ರೀ

ಎಂಬಂತೆ ಭಗವಂತನೇ ಆಡುತ್ತಿರಬಹುದಾದ ಈ ಲೀಲಾ ಪ್ರಸಂಗದಿಂದ ಚಿನ್ನವು ತನ್ನ ನೈಜಕಾಂತಿಯನ್ನು ಮತ್ತೆ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಅಲ್ಲಿಯವರೆಗೆ ಎಲ್ಲರೂ ತಾಳ್ಮೆಯಿಂದಿರಬೇಕಾದುದು ಅಗತ್ಯ.

ಇಂಥ ಘಟನೆಗಳಿಂದ ಶ್ರೀಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಮತ್ತು ಅವರ ಕುಟುಂಬವರ್ಗದವರು, ಶ್ರೀಕ್ಷೇತ್ರದ ಸೇವಾಕರ್ತರು, ಭಕ್ತಾದಿಗಳು ಹಾಗೂ ಅಭಿಮಾನಿಗಳು ವಿಚಲಿತರಾಗದೆ, ಧೈರ್ಯ ಹಾಗೂ ಸಮಾಧಾನಗಳಿಂದಿದ್ದು, ಶ್ರೀಕ್ಷೇತ್ರದ ಎಲ್ಲ ಧಾರ್ಮಿಕ ಚಟುವಟಿಕೆಗಳನ್ನು ಎಂದಿನಂತೆ ಮುಂದುವರಿಸಿಕೊಂಡು ಹೋಗುತ್ತಿರಬೇಕು. ಇಂಥ ಸೂಕ್ಷ್ಮ ಸಂದರ್ಭಗಳಲ್ಲಿ ಎಲ್ಲರೂ ಅವರೊಂದಿಗೆ ಒಟ್ಟಾಗಿದ್ದು ಕ್ಷೇತ್ರದ ಸಂರಕ್ಷಣೆಗೆ ಸಹಕರಿಸಬೇಕಾದುದು ಅತ್ಯಗತ್ಯ. ಶ್ರೀ ಮಂಜುನಾಥ ಸ್ವಾಮಿಯ ಕೃಪೆಯಿಂದ ಆದಷ್ಟು ಜರೂರು ಎಲ್ಲ ಕಾರ್ಮೋಡಗಳು ಕರಗಿ ಶಾಂತಿ–ನೆಮ್ಮದಿಗಳು ನೆಲೆಸುವಂತಾಗಲೆಂದು ಹಾರೈಸುತ್ತೇವೆ.

(ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು)
ಸುತ್ತೂರು ಶ್ರೀ ಕ್ಷೇತ್ರ

ಲಾಭದ ಆಸೆಗೆ ಬಿದ್ದು ಆನ್‌ಲೈನ್‌ನಲ್ಲಿ 24.71 ಲಕ್ಷ ಹೂಡಿಕೆ ಮಾಡಿ ಮೋಸಹೋದ ಟೆಕ್ಕಿ

ಮೈಸೂರು: ಮಹಿಳಾ ಸಾಫ್ಟ್‌ವೇರ್ ಇಂಜಿನಿಯರ್ ಆನ್‌ಲೈನ್ ಮೂಲಕ ಹೂಡಿಕೆ ಮಾಡಿ 24.71 ಲಕ್ಷರೂ. ಕಳೆದುಕೊಂಡಿದ್ದಾರೆ.

ಮೈಸೂರಿನ ಲಿಂಗದೇವರಕೊಪ್ಪಲು ನಿವಾಸಿಯಾಗಿರುವ ಸಾಫ್ಟ್‌ವೇರ್ ಇಂಜಿನಿಯರ್, ಇನ್ಸ್ಟಾಗ್ರಾಂನಲ್ಲಿ ಮೋತಿಲಾಲ್ ಓಸ್ವಾಲ್ ಗ್ರೂಪ್ ಜಾಹೀರಾತು ನೋಡಿ, ಅದರಲ್ಲಿದ್ದ ನಂಬರ್ ಅನ್ನು ವಾಟ್ಸಾಪ್ ಮೂಲಕ ಸಂಪರ್ಕಿಸಿದ್ದಾರೆ. ಅನನ್ಯ ಮೆಹತಾ ಹಾಗೂ ರಜತ್ ಹೆಸರಿನಲ್ಲಿ ಪರಿಚಯಿಸಿಕೊಂಡ ಇಬ್ಬರು ಷೇರು ಮಾರುಕಟ್ಟೆ ಮತ್ತು ಟ್ರೇಡಿಂಗ್ ಬಗ್ಗೆ ಸಲಹೆ ಸೂಚನೆ ನೀಡುವುದಾಗಿ ತಿಳಿಸಿ, ಪ್ರತಿ ಹೂಡಿಕೆಗೆ ಶೇ.5ಲಾಭಾಂಶ ನೀಡುವುದಾಗಿ ನಂಬಿಸಿದ್ದಾರೆ.

ಅವರ ಮಾತು ನಂಬಿದ ಇಂಜಿನಿಯರ್ ಟ್ರೇಡಿಂಗ್ ಖಾತೆ ತೆರೆದು, ಆರಂಭದಲ್ಲಿ 5 ಸಾವಿರ ರೂ. ಹೂಡಿಕೆ ಮಾಡಿದ್ದಾರೆ. ಅದಕ್ಕೆ 15 ಸಾವಿರ ರೂ. ಲಾಭ ಬಂದಿದೆ. ಬಳಿಕ ಇವರನ್ನು ಬೇರೊಂದು ಗ್ರೂಪ್‌ಗೆ ಸೇರ್ಪಡೆ ಮಾಡಿದ್ದಾರೆ. ಆ ಗ್ರೂಪ್‌ನಲ್ಲಿ ನೀಡಿದ ಸೂಚನೆಯಂತೆ ಹಂತ ಹಂತವಾಗಿ 17.36 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ಅದರ ಲಾಭಾಂಶವನ್ನು ಡ್ರಾ ಮಾಡಲು ಹೋದಾಗ ಶೇ.20ರಷ್ಟು ತೆರಿಗೆ ಪಾವತಿಸಿದ ನಂತರ ಒಟ್ಟು ಲಾಭಾಂಶ ಡ್ರಾ ಮಾಡಿಕೊಳ್ಳಬಹುದು ಎಂಬ ಸಂದೇಶ ಬಂದಿದ್ದರಿಂದ ಮತ್ತೆ 7.50 ಲಕ್ಷ ವರ್ಗಾಯಿಸಿದ್ದಾರೆ. ಆದರೆ ನಂತರವೂ ಅದೇ ರೀತಿಯ ಸಂದೇಶ ಬಂದಾಗ ಮೋಸ ಹೋಗಿರುವುದು ಗೊತ್ತಾಗಿದೆ. ಬಳಿಕ ಸೈಬರ್ ಠಾಣೆಗೆ ದೂರು ನೀಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಎಸ್‌ಪಿವಿಜಿಎಂಸಿ ಟ್ರಸ್ಟ್ ಗಣೇಶೋತ್ಸವ ಪಾರಂಪರಿಕ ಸಂಗೀತೋತ್ಸವ

ನಾದಸ್ವರ-ಪಿಟೀಲು ವಾದನದ ಜುಗಲ್‌ಬಂದಿಗೆ ಮಾರುಹೋದ ಪ್ರೇಕ್ಷಕರು



ವಿದ್ವಾನರಾದ ನೆಮ್ಮಾರ ಕಣ್ಣನ್, ಆನಂದ ಬ್ರಹ್ಮ, ವಿದುಷಿ ಅಕ್ಕರೈ ಶುಭುಲಕ್ಷ್ಮೀ ಮತ್ತು ಸ್ವರ್ಣ ಲತಾ ಅವರ ನಾದಸ್ವರ-ವಯೋಲಿನ್ ಜುಗಲ್‌ಬಂದಿ

ಮೈಸೂರು, ಆ.29(ವಿವಿಹೆಚ್)- ವಿದ್ವಾನ್ ನೆಮ್ಮಾರ ಕಣ್ಣನ್, ಆನಂದ ಬ್ರಹ್ಮ ಅವರ ನಾದಸ್ವರ, ವಿದುಷಿ ಅಕ್ಕರೈ ಶುಭುಲಕ್ಷ್ಮೀ ಮತ್ತು ಸ್ವರ್ಣ ಲತಾ ಅವರ ಪಿಟೀಲು(ವಯೋಲಿನ್) ವಾದನದ ಜುಗಲ್‌ಬಂದಿ ನೆರೆದಿದ್ದ ಸಾವಿರಾರು ಸಭಿಕರನ್ನು ಪುಳಕಿತಗೊಳಿಸಿತು.

ಮೈಸೂರಿನ ವಾಣಿವಿಲಾಸ ಮೊಹಲ್ಲಾದ (ವಿವಿ ಮೊಹಲ್ಲಾ) 8ನೇ ಕ್ರಾಸ್‌ನಲ್ಲಿ ಶ್ರೀ ಪ್ರಸನ್ನ ವಿದ್ಯಾಗಣಪತಿ ಮಹೋತ್ಸವ ಚಾರಿಟೆಬಲ್ ಟ್ರಸ್ಟ್ (ಎಸ್‌ಪಿವಿಜಿಎಂಸಿ ಟ್ರಸ್ಟ್) ವತಿಯಿಂದ ಆಯೋಜಿಸಿರುವ 64ನೇ ಪಾರಂಪರಿಕ ಸಂಗೀತೋತ್ಸವದ ಮೂರನೇ ದಿನದಂದು (ಶುಕ್ರವಾರ) ನಾದಸ್ವರ-ಪಿಟೀಲು ಜುಗಲ್‌ಬಂದಿ ಸಂಗೀತ ವಾದನಗಳ ಅಲೆಯಲ್ಲಿ ತೇಲುವಂತೆ ಮಾಡಿತು.

ನೆಮ್ಮಾರ್ ಕಣ್ಣನ್, ಮುತ್ತುಸ್ವಾಮಿ ದೀಕ್ಷಿತರ ಗೌಳ ರಾಗದ 'ಶ್ರೀಮಹಾಗಣಪತಿ ರವತುಮಾಮ್' ಕೃತಿ ನುಡಿಸಿದರು. ಅಕ್ಕರೈ ಸ್ವರ್ಣಲತಾ ಅವರು ಸಂಯೋಜಿಸಿದ 'ನನ್ನು ಬ್ರೊವು' ಕಾಮಾಕ್ಷಿ ಕೃತಿಯನ್ನು ಶುಭುಲಕ್ಷ್ಮಿ ನುಡಿಸಿದರು.

ನಂತರ ಆರಭಿ ರಾಗ, 'ಮಾಂಡ್', 'ನಳಿನಕಾಂತಿ', 'ಮಧುವಂತಿ', 'ಚಾರುಕೇಶಿ' ರಾಗಗಳನ್ನು ನುಡಿಸುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ಯಾವುದೇ ದಣಿವಿಲ್ಲದೇ ಸತತ 2 ಗಂಟೆಗಳಿಗೂ ಹೆಚ್ಚು ಕಾಲ ನಾದಸ್ವರ, ಪಿಟೀಲು, ಮೃದಂಗ ಮತ್ತು ಘಟ್ಟಂ ಸಂಗೀತಾಭಿಮಾನಿಗಳನ್ನು ಮಂತ್ರಮುಗ್ಧರನ್ನಾಗಿಸಿತು.

ಬಳಿಕ ಮಾತನಾಡಿದ ವಿದುಷಿ ಅಕ್ಕರೈ ಶುಭುಲಕ್ಷ್ಮೀ, ನಾದಸ್ವರ-ಪಿಟೀಲು ಜುಗಲ್‌ಬಂದಿ ಕಾರ್ಯಕ್ರಮ ಆಯೋಜಿಸಿರುವುದು ಇದೇ ಮೊದಲು. ಇದೊಂದು ಅವಿಸ್ಮರಣೀಯ ಕಾರ್ಯಕ್ರಮವಾಗಿದ್ದು, ಪ್ರತಿಭೆಗಳ ಅನಾವರಣಕ್ಕೆ ಇದೊಂದು ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು. ಈ ವೇಳೆ ಮೃದಂಗ ವಾದಕ ವಿದ್ವಾನ್ ಜಯಚಂದ್ರ ರಾವ್, ಘಟಂ ವಾದಕ ವಿದ್ವಾನ್ ಚಂದ್ರಶೇಖರ ಶರ್ಮಾ ಇದ್ದರು.

ರಂಗಗೀತೆ: ಇದಕ್ಕೂ ಮೊದಲು ಚಂದ್ರಶೇಖರಾಚಾರ್ ಅವರ ನಿನಾದರಂಗ ತಂಡದ ವತಿಯಿಂದ ರಂಗಗೀತೆಗಳನ್ನು ಪ್ರಸ್ತುತಪಡಿಸಲಾಯಿತು. ಹೆಚ್.ಕೆ.ಯೋಗಾನರಸಿಂಹ ಅವರು ಸಂಯೋಜನೆ ಮಾಡಿರುವ ಪೌರಾಣಿಕ ನಾಟಕಗಳ ಹಿನ್ನೆಲೆಯುಳ್ಳ ರಂಗ ಗೀತೆಗಳನ್ನು ಹಾಡಿದರು.

'ದೇವಿ ಭುವನ ಮನಮೋಹಿನಿ' ನಾಂದಿ ಪದ್ಯ, ಶಿವನ ಕುರಿತ ಪ್ರಾರ್ಥನಾ ಗೀತೆ 'ಶಾಂತ ಭುವನೇಶ್ವರ ಸುಮನೋಹರ ಭುವನ ಸಾರ', ಸಂಪೂರ್ಣ ರಾಮಾಯಣದ 'ರಾಮ ಜಯತು', 'ಲಂಕಾಧಿಪಾಲನೆ ದೇವಾ', ಕೃಷ್ಣಲೀಲೆಯ 'ಮೋಹನ ಮುರಳಿ' ಚಿತ್ರವಿದು ಗೋಪಾಲ ಬಾಲಕೃಷ್ಣ ಲೀಲೆಯೋ' ಜೊತೆಗೆ 'ಮಲ್ಲಿನಾಥನ ಧ್ಯಾನ' ವಚನ ಸಾಹಿತ್ಯ, ಗಾಯನ ಪ್ರೇಕ್ಷಕರನ್ನು ಮೋಡಿ ಮಾಡಿತು.

ಜಿಎಸ್‌ಟಿ ಸರಳೀಕರಣದಿಂದ ರಾಜ್ಯಗಳ ಆದಾಯ 2.5 ಲಕ್ಷ ಕೋಟಿ ನಷ್ಟ ಸಾಧ್ಯತೆ

ಸಚಿವ ಕೃಷ್ಣ ಬೈರೇಗೌಡ ಕಳವಳ



ನವದೆಹಲಿ, ಆ.29- ಕೇಂದ್ರ ಸರ್ಕಾರ ಪ್ರಸ್ತಾಪಿಸಿರುವ ಜಿಎಸ್‌ಟಿ ಸರಳೀಕರಣ ವ್ಯವಸ್ಥೆಯಿಂದ ರಾಜ್ಯಗಳ ಆದಾಯ 85,000 ಕೋಟಿಯಿಂದ 2.5 ಲಕ್ಷ ಕೋಟಿವರೆಗೆ ನಷ್ಟ ಉಂಟಾಗಲಿದ್ದು, ಜಿಎಸ್‌ಟಿ ಸ್ಥಿರಗೊಳ್ಳುವವರೆಗೆ ಜಿಎಸ್ಟಿ ಕೌನ್ಸಿಲ್ ನಷ್ಟ ಪರಿಹಾರ ನೀಡಲಿ ಎಂದು ಸಚಿವ ಕೃಷ್ಣ ಬೈರೇಗೌಡ ಒತ್ತಾಯಿಸಿದರು.

ಜಿಎಸ್‌ಟಿ ಸರಳೀಕರಣ ಹಾಗೂ ರಾಜ್ಯಗಳ ಸ್ವಾಯತ್ತತೆಗೆ ಸಂಬಂಧಿಸಿ ಶುಕ್ರವಾರ ದೆಹಲಿಯ ಕರ್ನಾಟಕ ಭವನದಲ್ಲಿ ಸಮಾನ ಮನಸ್ಕ ಎಂಟು ರಾಜ್ಯಗಳ ಸಚಿವರು ಹಾಗೂ ಅಧಿಕಾರಿಗಳ ಸಭೆ ನಡೆಸಲಾಯಿತು. ಈ ಸಭೆಯಲ್ಲಿ ತಮಿಳುನಾಡು ಹಣಕಾಸು ಸಚಿವ ತಂಗಮ್ ತೆನ್ನರಸು, ಹಿಮಾಚಲ ಪ್ರದೇಶದ ಹಣಕಾಸು ಸಚಿವ ರಾಜೇಶ್ ಧರ್ಮಾನಿ, ಜಾರ್ಖಂಡ್ ಹಣಕಾಸು ಸಚಿವ ರಾಧಾ ಕೃಷ್ಣ ಕಿಶೋರ್, ಪಂಜಾಬ್ ಹಣಕಾಸು ಸಚಿವ ಹರ್ಪಾಲ್ ಸಿಂಗ್ ಚೀಮಾ, ಕೇರಳ ಹಣಕಾಸು ಸಚಿವ ಬಾಲ ಗೋಪಾಲ್, ತೆಲಂಗಾಣ ಹಣಕಾಸು ಸಚಿವ ಮಲ್ಲು ಭಟ್ಟಿ ವಿಕ್ರಮಾರ್ಕ, ಪಶ್ಚಿಮ ಬಂಗಾಳ ಸರ್ಕಾರದ ಪರವಾಗಿ ವಲಯ ಅಧಿಕಾರಿ ಉಜ್ಜೈನಿ ದತ್ತ ಪಾಲ್ಗೊಂಡಿದ್ದರು.

ಸಭೆಯ ನಂತರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಚಿವ ಕೃಷ್ಣ ಬೈರೇಗೌಡ, ಜಿಎಸ್‌ಟಿ ಕೌನ್ಸಿಲ್ ನಮ್ಮ ಮುಂದಿಟ್ಟಿರುವ ಜಿಎಸ್‌ಟಿ ತೆರಿಗೆ ಸರಳೀಕರಣ ವ್ಯವಸ್ಥೆಯನ್ನು ನಾವು ಸ್ವಾಗತಿಸುತ್ತೇವೆ. ಆದರೆ, ಈ ವ್ಯವಸ್ಥೆ ರಾಜ್ಯಗಳ ತೆರಿಗೆ ಆದಾಯವನ್ನು ರಕ್ಷಿಸುವಂತಿರಬೇಕು ಹಾಗೂ ಇದರ ಸಂಪೂರ್ಣ ಲಾಭ ದೇಶದ ಜನಸಾಮಾನ್ಯರಿಗೆ ಸಿಗುವಂತಿರಬೇಕೇ ಹೊರತು ಕೆಲವು ಕಂಪನಿಗಳಿಗೆ ಮಾತ್ರ ಲಾಭ ಆಗುವಂತಿರಬಾರದು ಎಂದು ಅಭಿಪ್ರಾಯಪಟ್ಟರು.

ರಾಜ್ಯಗಳಿಗೆ ಅಧಿಕ ನಷ್ಟವಾದರೆ ಅಂತಿಮವಾಗಿ ಜನಸಾಮಾನ್ಯರು ಸಂಕಷ್ಟಕ್ಕೆ ಒಳಗಾಗುತ್ತಾರೆ. ರಾಜ್ಯಗಳ ಸ್ವಾಯತ್ತೆ ತುಂಬಾ ಮುಖ್ಯವಾದ ವಿಚಾರ. ಪ್ರತಿಯೊಂದು ರಾಜ್ಯಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸುಸ್ಥಿರ ಆದಾಯ ಅತ್ಯಂತ ಮುಖ್ಯ. ಆದರೆ, ಆದಾಯ ಕೊರತೆ ಉಂಟಾಗಿ ಸ್ವಂತ ಸರ್ಕಾರ ನಡೆಸಲು ಕೇಂದ್ರದ ಕಡೆ ಕೈಚಾಚುವಂತಾದರೆ ರಾಜ್ಯಗಳ ಸ್ವಾಯತ್ತೆ ಎಂಬ ಪದವೇ ಅರ್ಥ ಕಳೆದುಕೊಳ್ಳುತ್ತದೆ. ಸಹಕಾರಿ ಒಕ್ಕೂಟವಾದ ಪದಗಳಲ್ಲಿ ಮಾತ್ರವಲ್ಲದೆ ಕೆಲಸದಲ್ಲೂ ಚಾಲ್ತಿ ಇದ್ದರೆ ಮಾತ್ರ ಸ್ವಾಯತ್ತೆ ಉಳಿಯಲು ಸಾಧ್ಯ ಎಂದು ವ್ಯಾಖ್ಯಾನಿಸಿದರು.

ಮುದ್ರಾಂಕ ನೋಂದಣಿ ಶುಲ್ಕ ಶೇ.100 ರಷ್ಟು ಹೆಚ್ಚಳ

ಮೈಸೂರು, ಆ.29(ಎಸ್‌ಪಿಎನ್)- ರಾಜ್ಯ ಸರ್ಕಾರವು ಮುಂದ್ರಾಕ ನೋಂದಣಿ ಶುಲ್ಕವನ್ನು ಶೇ.1ರಿಂದ 2ಕ್ಕೆ ಪರಿಷ್ಕರಿಸಿದ್ದು, ಪರಿಷ್ಕೃತ ಶುಲ್ಕವು ಸೆ.31ರಿಂದ ಜಾರಿಗೆ ಬರಲಿದೆ.

ಪರಿಷ್ಕೃತ ನೋಂದಣಿ ಶುಲ್ಕವನ್ನು ಸುಗಮವಾಗಿ ಕಾವೇರಿ ತಂತ್ರಾಂಶದ ಮೂಲಕ ಪಾವತಿಸಲು ಇಲಾಖೆಯು ಅರ್ಜಿದಾರರಿಗಾಗಿ ಕೆಲ ಮಾರ್ಗಸೂಚಿಗಳನ್ನು ನೀಡಿದೆ. ಹಿಂದಿನ ನೋಂದಣಿ ಶುಲ್ಕವನ್ನು ಪಾವತಿಸಿ ಈಗಾಗಲೇ ದಸ್ತಾವೇಜುಗಳ ಅಪಾಯಿಂಟ್‌ಮೆಂಟ್ ಪಡೆದಿರುವವರು ವ್ಯತ್ಯಾಸದ ಮೊತ್ತವನ್ನು ಇಲಾಖೆಯ ಅಧಿಕೃತ ಪೋರ್ಟಲ್ ಮೂಲಕ ಪಾವತಿಸಬೇಕು. ಮೊದಲು ಬಳಸಿದ ಲಾಗಿನ್ ಮೂಲಕವೇ ಪಾವತಿಸಬೇಕು. ಅರ್ಜಿದಾರರಿಗೆ ಎಸ್‌ಎಂಎಸ್ ಸಂದೇಶವನ್ನು ನೇರವಾಗಿ ಅವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುವುದು.

ಈಗಾಗಲೇ ದಸ್ತಾವೇಜುಗಳ ನೋಂದಣಿಗೆ ಸಲ್ಲಿಸಲಾಗಿರುವ ಹಾಗೂ ಪರಿಶೀಲನೆಯಲ್ಲಿರುವ ದಸ್ತಾವೇಜುಗಳಿಗೆ ನೋಂದಣಿ ಶುಲ್ಕವನ್ನು ಮರು ಲೆಕ್ಕ ಹಾಕಿ, ಪರಿಷ್ಕೃತ ಶೇ.2ರಂತೆ ನೋಂದಣಿ ಶುಲ್ಕವನ್ನು ಪಾವತಿಸಬೇಕಾಗುತ್ತದೆ. ಈ ವರ್ಗದ ಅರ್ಜಿದಾರರಿಗೆ ಪಾವತಿಯ ಪ್ರಕ್ರಿಯೆ ಪೂರ್ಣಗೊಳ್ಳುವ ಮೊದಲು ಪರಿಷ್ಕೃತ ನೋಂದಣಿ ಶುಲ್ಕದ ವಿವರನ್ನು ತಿಳಿಸಲಾಗುವುದು ಎಂದಿದ್ದಾರೆ.

ಇಲಾಖೆಯ ದಸ್ತಾವೇಜುಗಳ ನೋಂದಣಿ ಪ್ರಕ್ರಿಯೆಯಲ್ಲಿ ವಿಳಂಬವಾಗುವುದನ್ನು ತಪ್ಪಿಸಲು ಎಲ್ಲಾ ಅರ್ಜಿದಾರರಿಗೆ ಮೇಲ್ಕಾಣಿಸಿದ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಅಧಿಕೃತ ಪೋರ್ಟಲ್‌ನಲ್ಲಿ ಲಭ್ಯವಿದೆ ಎಂದು ಮುಂದ್ರಾಕಗಳ ಆಯುಕ್ತರ ಕಚೇರಿಯ ನೋಂದಣಿ ಮಹಾಪರಿವೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಅಧ್ಯಕ್ಷರ ಮೆರವಣಿಗೆ



ಮೈಸೂರಿನ ಕರ್ನಾಟಕ ಮುಕ್ತ ವಿಶ್ವ ವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಗುರುವಾರ ನಡೆದ 5ನೇ ರಾಜ್ಯ ಪತ್ರಿಕಾ ವಿತರಕರ ಸಮ್ಮೇಳನ ಹಾಗೂ ವಿಶ್ವ ಪತ್ರಿಕಾ ವಿತರಕರ ದಿನಾಚರಣೆ ಕಾರ್ಯಕ್ರಮಕ್ಕೆ ರಾಜ್ಯಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಅಧ್ಯಕ್ಷರಾದ ಎಂ.ಎನ್ ನಾಗರಾಜ್ ಅವರನ್ನು ಸಾರೋಟಲ್ಲಿ ಮೆರವಣಿಗೆ ಮೂಲಕ ಅದ್ದೂರಿಯಾಗಿ ಕರೆತರಲಾಯಿತು.

ಇಂದು ಸಂಗೀತ ಕಾರ್ಯಕ್ರಮ

ಮೈಸೂರು, ಆ.29(ಎಸ್‌ಪಿಎನ್)- ಮೈಸೂರು ಕೃಷ್ಣ ವಿಲಾಸ ರಸ್ತೆಯಲ್ಲಿರುವ ಪರಕಾಲ ಮಠದಲ್ಲಿ ಹಮ್ಮಿಕೊಂಡಿರುವ ಚಾತುರ್ಮಾಸ್ಯ ಪ್ರಯುಕ್ತ ಶನಿವಾರ ಸಂಜೆ 6 ಗಂಟೆಗೆ ವಿದ್ವಾನ್ ಭಾರತ್ ರಾಜಗೋಪಾಲ್ ಮತ್ತು ತಂಡದಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ಅಂತೆಯೇ ಭಾನುವಾರ 31 ಆಗಸ್ಟ್ ಬೆಳಗ್ಗೆ 11 ಗಂಟೆಗೆ ಸ್ವಾಮಿ ವೇದಾಂತ ದೇಶಿಕರ್ ಕುರಿತು ಡಾ. ನರಸಿಂಹನ್ ಅನಂತರಂಗಾಚಾರ್ ಅವರು ಉಪನ್ಯಾಸ ನೀಡುವರು. ಈ ಕಾರ್ಯಕ್ರಮಕ್ಕೆ ಶ್ರೀಮಠದ ಭಕ್ತರು ಆಗಮಿಸಿ ಕಾರ್ಯಕ್ರಮ ಯಶಸ್ಸಿಗೊಳಿಸಬೇಕೆಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಂಟಿ ಕಾರ್ಯದರ್ಶಿ ಟಿ.ಎಸ್ ಅರುಣ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಯೋಗ ತರಗತಿ



ಮೈಸೂರು, ಆ. 29- ಮೈಸೂರಿನ ಚೈತನ್ಯ ಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಷನ್ ವತಿಯಿಂದ ಸೆ. 1 ರಿಂದ 3 ರವರೆಗೆ ಉಚಿತ ಯೋಗ ತರಬೇತಿ (ಮುದ್ರಾ, ಧ್ಯಾನ ಮತ್ತು ಪ್ರಾಣಾಯಾಮ)ಗಳನ್ನು ಕಾಳಿದಾಸ ರಸ್ತೆಯಲ್ಲಿರುವ ಕುವೆಂಪು ಟ್ರಸ್ಟ್‌ನ ಬಾಡಿ ಲುಕ್ ಯೋಗ ಕೇಂದ್ರದಲ್ಲಿ ಬೆಳಗ್ಗೆ 11 ರಿಂದ 12 ರವರೆಗೆ ಮತ್ತು ಸಂಜೆ 3.30 ರಿಂದ 4.30ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9449886387, 9844492535 ಸಂಪರ್ಕಿಸಬಹುದು.

ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕ ವಿಜೇತರಿಗೆ ಬಹುಮಾನದ ಮೊತ್ತ ಹೆಚ್ಚಳ; ಒಲಿಂಪಿಕ್ಸ್ ಪದಕ ಗೆದ್ದರೆ 5 ಕೋಟಿ ನಗದು ಪುರಸ್ಕಾರ



ಬೆಂಗಳೂರು, ಆ.29- ಕ್ರೀಡಾಕೂಟಗಳ ಪದಕ ವಿಜೇತರಿಗೆ ನಗದು ಪುರಸ್ಕಾರವನ್ನು ಹೆಚ್ಚಿಸಿ, ಚಿನ್ನ ಪದಕ ವಿಜೇತರಿಗೆ 7 ಲಕ್ಷ ರೂ, ಬೆಳ್ಳಿ ಪದಕ ವಿಜೇತರಿಗೆ 5 ಲಕ್ಷರೂ, ಕಂಚಿನ ಪದಕ ವಿಜೇತರಿಗೆ 3 ಲಕ್ಷರೂ. ನೀಡಲು ಸರ್ಕಾರ ತೀರ್ಮಾನಿಸಿದೆ. ನಮ್ಮ ರಾಜ್ಯದವರು ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದರೆ 5 ಕೋಟಿ ನಗದು ಪುರಸ್ಕಾರ ಕೊಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಆಯೋಜಿಸಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, 38ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪದಕ ವಿಜೇತ ಕ್ರೀಡಾಪಟುಗಳಿಗೆ ನಗದು ಪುರಸ್ಕಾರವನ್ನು ಹೆಚ್ಚಿಸುವುದಾಗಿ ಘೋಷಿಸಿದ್ದಾರೆ.

ಉತ್ತರಾಖಂಡದಲ್ಲಿ ನಡೆದ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕರ್ನಾಟಕದ ಕ್ರೀಡಾಪಟುಗಳು ರಾಜ್ಯಕ್ಕೆ ಐದನೇ ಸ್ಥಾನವನ್ನು ದೊರಕಿಸಿಕೊಟ್ಟಿದ್ದು, ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಕ್ರೀಡಾಕೂಟದಲ್ಲಿ ರಾಜ್ಯದ ಕ್ರೀಡಾಪಟುಗಳು 34 ಚಿನ್ನ, 18 ಬೆಳ್ಳಿ ಹಾಗೂ 28 ಕಂಚಿನ ಪದಕಗಳನ್ನು ಗೆದ್ದಿರುವುದು ಹೆಮ್ಮೆಯ ವಿಷಯ. ಕ್ರೀಡಾಕೂಟದಲ್ಲಿ ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು. ಮುಂದಿನ ಕ್ರೀಡಾಕೂಟದಲ್ಲಿ ರಾಜ್ಯಕ್ಕೆ ಮೊದಲನೇ ಸ್ಥಾನ ದೊರಕಲೆಂದು ಹಾರೈಸಿದರು.

7th Year Remembrance



Dr. (Mrs.) IVY M. HANS
22.12.1952 30.08.2018

Those we love don't go away, they walk beside us everyday. Unseen, Unheard but always near, still loved, still missed and held so dear.

— Rev. Dr. P.H. Hans (Husband)
— Dr. Shwetha M. Hans (Daughter)
— Mr. Shashidhar (Son-in-law)

15ನೇ ವರ್ಷದ ಸವಿನೆನಪು



ಮಗಳೆ ದೇವರು ನಿನ್ನ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲಿ ಎಂದು ಕೋರುವ.
ದುಃಖತಪ್ತರು:
ತಾಯಿ-ಚಾಣಿಕಮ್ಮ,
ತಂದೆ-ಯೋಗ ಲಿಂಗೇಗೌಡ,
ಪತಿ-ಬಸವರಾಜು,
ತಮ್ಮ-ಮಂಜುನಾಥ್
ಮತ್ತು ಕುಟುಂಬ ವರ್ಗದವರು
ಗುಡುಮಾದನಹಳ್ಳಿ
ಶ್ರೀಮತಿ ಧನಲಕ್ಷ್ಮಿ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ನಮ್ಮ ಕಕ್ಷಿದಾರರುಗಳಾದ ಕಿರಣ್ ಕುಮಾರ್ ಪಾಟೀಲ್ ಬಿನ್ ಶಿವಣ್ಣೇಗೌಡ ಪಾಟೀಲ್, ನಂ.3391, 1ನೇ ಮಹಡಿ, ಹಿತ. ವಿ.ಬಿ.ಹೆಚ್.ಸಿ.ಎಸ್. ಲೇಔಟ್, ಗಿರಿನಗರ ಬೆಂಗಳೂರುರವರು

ಇವರು ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಶ್ರೀಮತಿ ಸುಬ್ಬಮ್ಮ, ಬಿನ್ ನಾಗಪ್ಪ, ದೇವರಹಳ್ಳಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ. ಶ್ರೀಮತಿ ಶಿವಮ್ಮ ಕೋಂ ಶಿವಪ್ಪ ಆರ್ ಬಿನ್ ಲೇಟ್ ನಾಗಪ್ಪ, ಕೆಂಪರಾಜು ಬಿನ್ ಶಿವಪ್ಪ ಆರ್. ನಾಗರಾಜು ಬಿನ್ ಶಿವಪ್ಪ ಆರ್. ಇವರುಗಳ ವಾಸ: ಎಲಚಟ್ಟಿ ಗ್ರಾಮ, ಗುಂಡ್ಲು-ಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರುಗಳು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರು ಸದರಿ ಸ್ವತ್ತನ್ನು ಮಾರಾಟ ಮಾಡಲು ನಿರ್ಧರಿಸಿದ್ದು, ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಶುದ್ಧ ಕ್ರಯಕ್ಕೆ ಖರೀದಿ ಸಲು ಸಿದ್ಧರಿದ್ದು ಈ ಷೆಡ್ಯೂಲ್ ಸ್ವತ್ತಿನ ಸಂಬಂಧ ಯಾವುದೇ ವ್ಯಕ್ತಿಗಳು ಸದರಿ ಸ್ವತ್ತಿನ ಮೇಲೆ ತಮ್ಮ ಹಕ್ಕು, ಹಿತಾಸಕ್ತಿ ಹೊಂದಿದ್ದಲ್ಲಿ, ತಾವಾ ಗಲಿ ಅಥವಾ ತಮ್ಮ ವಕೀಲರ ಮೂಲಕ ಈ ಕೆಳಗೆ ಸಹಿ ಮಾಡಿರುವವರ ಕಚೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ 15 (ಹದಿನೈದು) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ತಪ್ಪಿದ್ದಲ್ಲಿ ನಮ್ಮ ಕಕ್ಷಿದಾರರು 'ಷೆಡ್ಯೂಲ್' ಸ್ವತ್ತನ್ನು ಖರೀದಿಸಿದ ನಂತರ ಷೆಡ್ಯೂಲ್ ಸ್ವತ್ತಿನ ಮೇಲೆ ಬೇರೆ ಯಾರಿಗೂ ಯಾವುದೇ ಹಿತಾಸಕ್ತಿ ಇಲ್ಲ ವೆಂದು ಪರಿಗಣಿಸಿ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದು ನೊಂದಾಯಿತ ಕ್ರಯವನ್ನು ಪೂರ್ಣ ಗೊಳಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಹಂಗಳ ಹೋಬಳಿ, ಲೊಕ್ಕೆರೆ ಗ್ರಾಮದ ಸರ್ವೆ ನಂಬರ್ 54/3 ರಲ್ಲಿನ ಒಟ್ಟು ವಿಸ್ತೀರ್ಣ 1 ಎಕರೆ 0.12.08 ಗುಂಟೆ (ಒಂದು ಎಕರೆ ಹನ್ನೆರಡುವರೆ ಗುಂಟೆ) ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂಧಿ:, ಪೂರ್ವಕ್ಕೆ: ಅಮ್ಮಣ್ಣಮ್ಮರವರ ಜಮೀನು, ಪಶ್ಚಿಮಕ್ಕೆ: ಮಹದೇವಪ್ಪರವರ ಜಮೀನು, ಉತ್ತರಕ್ಕೆ: ಸರ್ಕಾರಿ ರಸ್ತೆ, ದಕ್ಷಿಣಕ್ಕೆ : ಶಾಂತಿ ರೆಡ್ಡಿಯವರ ಜಮೀನು

Sd/- Pradeep C.K
BAL.,LLB, Advocate KAR/1706/09
K.P LAW ASSOCIATES, #47, CH-4,47/1,CH 4/1, 1st Floor, 6th Cross, 3rd Cross, 3rd Main Opp. SrinivasaTemple,Jayanagara, Mysuru-570014, Mob: 7795721368

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸರ್ಹವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ನೇರ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮಡಿಕೇರಿ, ಕೊಡಗು ಜಿಲ್ಲೆ
ಇ-ಮೇಲ್ :eerdwsd.kdg@gmail.com

ಸಂಖ್ಯೆ:ಕಾ.ಇಂ/ಗ್ರಾ.ಕು.ನೀ.&ನೈ.ವಿ-ಮಡಿಕೇರಿ/ಟೆಂಡರ್ 01/25-26 ದಿ:29/08/2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕೊಡಗು ಜಿಲ್ಲೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಕ್ಕೆ ಸಂಬಂಧಿಸಿದಂತೆ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ-2) ನಿಯಮಾವಳಿಯಂತೆ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್ ವಿವರಗಳನ್ನು KPPP ವೆಬ್ ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು KPP ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

ಕ್ರಂ ಸಂ.	ಕಾಮಗಾರಿ ವಿವರ	ಟೆಂಡರ್ ಗಿಟ್ಟು ಮೊತ್ತ (ರೂ. ಲಕ್ಷಗಳಲ್ಲಿ)
1	ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕು ಗುಡ್ಡೆಹೊಸುರು ಗ್ರಾಮ ಪಂಚಾಯತಿ ವ್ಯಾಪ್ತಿಯ ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್ಮೆಂಟ್ ಯೂನಿಟ್ ನಿರ್ಮಾಣ ಕಾಮಗಾರಿ	33.89/-

ಟೆಂಡರ್ ಸಲ್ಲಿಸುವ ವಿವರ
1. ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : 19-09-2025 ಅಪರಾಹ್ನ 05.00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ : 20-09-2025ರ ಅಪರಾಹ್ನ 05.05 ಗಂಟೆಗೆ ಅಥವಾ ಮುಂದೆ ಸೂಚಿಸುವ ದಿನದಂದು

ಸೂಚನೆ: ಇತರೇ ಷರತ್ತು ಹಾಗೂ ಪ್ಯಾಕೇಜ್ ಕಾಮಗಾರಿಗಳ ವಿವರಗಳನ್ನು ಈ ಕಛೇರಿಯಿಂದ ಅಥವಾ ವೆಬ್ ಸೈಟ್ www.kppp.gov.in ನಲ್ಲಿ ಪಡೆಯಬಹುದು

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಗ್ರಾ.ಕು.ನೀ & ನೈ ವಿಭಾಗ-ಮಡಿಕೇರಿ

ಕೆ.ಪಿ.ಟಿ.ಸಿ.ಎಲ್. ವೇತನ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.
(ನೋಂದಣಿ ಸಂಖ್ಯೆ :ಎ.ಆರ್.-41: ಎಂ.ಕೆ.ಟಿ: ಆರ್.ಜಿ.ಎನ್./15362/1988-89 ದಿ :16-06-1988)
ಎಂ.ಪಿ.ಎಲ್. ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
ಮೊ: 9901914004, 9113607224.

2024-2025 ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ
ಆಹ್ವಾನ ಪತ್ರಿಕೆ
ದಿನಾಂಕ : 31-08-2025ನೇ ಭಾನುವಾರ ಬೆಳಗ್ಗೆ 11-00 ಘಂಟೆಗೆ
ಸ್ಥಳ : ಹೋಟೆಲ್ ಗೋವರ್ಧನ್ ಸಭಾಂಗಣ, ಶ್ರೀಹರ್ಷ ರಸ್ತೆ, ಮೈಸೂರು
ತಮಗೆಲ್ಲರಿಗೂ ಆದರದ ಸ್ವಾಗತ

ಮನ್‌ಮುಲ್
ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ - 571428

2024-25 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸು

ಒಕ್ಕೂಟದ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ:12-09-2025ರ ಶುಕ್ರವಾರ ಬೆಳಗ್ಗೆ 10:25 ಗಂಟೆಗೆ "ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಲು ಉತ್ಪನ್ನ ಘಟಕ, ಗೆಜ್ಜಲಗೆರೆ ಕಚೇರಿ ಆವರಣ" ದಲ್ಲಿ ಒಕ್ಕೂಟದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಯು.ಸಿ. ಶಿವಕುಮಾರ್(ಶಿವಪ್ಪ ಉಮ್ಮಡಹಳ್ಳಿ) ರವರ ಘನ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿರುತ್ತದೆ.

ಸದಸ್ಯ ಸಂಘಗಳ ಪ್ರತಿನಿಧಿಗಳು ವಾರ್ಷಿಕ ಸಾಮಾನ್ಯ ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ವಾರ್ಷಿಕ ಸಾಮಾನ್ಯ ಸಭೆಯ ನೋಟೀಸನ್ನು ಎಲ್ಲಾ ಸದಸ್ಯ ಸಂಘಗಳಿಗೂ ಅಂಚೆ ಮೂಲಕ ಈಗಾಗಲೇ ಕಳುಹಿಸಲಾಗಿದೆ. ಅಂಚೆ ಮೂಲಕ ನೋಟೀಸು ತಲುಪದೇ ಇದ್ದ ಪಕ್ಷದಲ್ಲಿ ಇದನ್ನೇ ಅಧೀಕೃತ ನೋಟೀಸು ಎಂದು ಪರಿಗಣಿಸುವುದು ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ಪ್ರತಿನಿಧಿಗಳು ಕಡ್ಡಾಯವಾಗಿ ಸಂಘದ ನಿರ್ಣಯದ ಪ್ರತಿಯೊಂದಿಗೆ ಹಾಜರಾಗಲು ಈ ಮೂಲಕ ಕೋರಲಾಗಿದೆ.

ಸ್ಥಳ: ಗೆಜ್ಜಲಗೆರೆ
ದಿನಾಂಕ: 29-08-2025
ಸಹಿ/-ವ್ಯವಸ್ಥಾಪಕ ನಿರ್ದೇಶಕರು

ಯಶಸ್ವಿನಿ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ನಂ.43, 1ನೇ ಕ್ರಾಸ್, ಹೆಚ್.ಡಿ. ದೇವೇಗೌಡ ವೃತ್ತ ಬನ್ನೂರು ಮುಖ್ಯ ರಸ್ತೆ, ರಿಂಗ್ ರೋಡ್ ಹತ್ತಿರ, ಮೈಸೂರು -570011

ವಾರ್ಷಿಕ ಮಹಾ ಸಭೆಯ ಅಹ್ವಾನ ಪತ್ರಿಕೆ

ಸಂಘದ 2024-25ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ: **14.09.2025 ನೇ ಭಾನುವಾರ ಬೆಳಿಗ್ಗೆ 10:30 ಘಂಟೆಗೆ, ಮೈಸೂರಿನ ಬನ್ನೂರು ರಸ್ತೆಯ ಭುಗತಹಳ್ಳಿ ಗೇಟ್, (ಟೋಲ್ ಹತ್ತಿರ) ಇರುವ ಶಿವಲಿಂಗ ಕನ್ವೆನ್ಷನ್ ಹಾಲ್, (ಪಿ.ಆರ್. ಕನ್ವೆನ್ಷನ್ ಹಾಲ್)** ನಲ್ಲಿ ಸಂಘದ ಅಧ್ಯಕ್ಷರಾದ ಡಾ. ಕೆ.ಟಿ. ಚಂದ್ರಶೇಖರ್ ರವರ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದ್ದು, ಈ ಸಂಬಂಧ ಎಲ್ಲಾ ಅರ್ಹ ಸದಸ್ಯರುಗಳಿಗೂ ಆಹ್ವಾನ ಪತ್ರಿಕೆಯನ್ನು ಈಗಾಗಲೆ ಅಂಚೆ ಪ್ರಮಾಣ ಪತ್ರದ ಮೂಲಕ ರವಾನಿಸಲಾಗಿದೆ, ಸದರಿ ಆಹ್ವಾನ ಪತ್ರಿಕೆ ತಲುಪದೆ ಇರುವಂತಹ ಅರ್ಹ ಸದಸ್ಯರುಗಳು ಇದನ್ನೆ ಆಹ್ವಾನ ಪತ್ರಿಕೆ ಎಂದು ಭಾವಿಸಿ ಮಹಾಸಭೆಯಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ಸುಗೊಳಿಸಲು ಕೋರಲಾಗಿದೆ.

ವಿಶೇಷ ಸೂಚನೆ: ವಾರ್ಷಿಕ ಮಹಾ ಸಭೆಯಲ್ಲಿ ಭಾಗವಹಿಸಲು ಸದಸ್ಯರುಗಳು ಸಂಘದ ಗುರುತಿನ ಚೀಟಿ / ಪಾಸ್ ಪುಸ್ತಕ (ಭಾವಚಿತ್ರವಿರುವ) ವನ್ನು ಕಡ್ಡಾಯವಾಗಿ ತರಲು ಕೋರಿದೆ. ಇಲ್ಲವಾದಲ್ಲಿ ಸಭೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.

ಸಹಿ/- ಶ್ರೀಕಾಂತ್ ಎಂ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಮೊ.ನಂ. 9148800980 ಮುಖ್ಯ ಕಾರ್ಯನಿರ್ವಾಹಣಾಧಿಕಾರಿ

ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಶತೋತ್ತರ ದಶಮಾನೋತ್ಸವ

ರಾಜನೀತಿ ಬದಿಗಿಟ್ಟು ಧರ್ಮನೀತಿ ಅನುಸರಿಸಿದ ಮೈಸೂರಿನ ರಾಜಕೀಯ ನಾಯಕರು ಆದರ್ಶಪ್ರಾಯರು; ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಪ್ರಶಂಸೆ

- ಧರ್ಮದ ಹಿತರಕ್ಷಣೆ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ
- ವಸುದೈವ ಕುಟುಂಬಕಂ ಪರಿಕಲ್ಪನೆಯಲ್ಲಿ ಮಠದ ಕಾರ್ಯ
- ವಿಶ್ವದ ಬಲಾಢ್ಯ ರಾಷ್ಟ್ರಗಳಿಗೆ ಭಾರತದ ಜ್ಞಾನ ದೀವಟಿಗೆ
- ಮಠಗಳಿಂದ ಸಾಮಾಜಿಕ ಸೇವೆ ಜೊತೆಗೆ ಧರ್ಮ ರಕ್ಷಣಾ ಕಾರ್ಯ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ಶುಕ್ರವಾರ ನಡೆದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸವ ಸಮಾರಂಭವನ್ನು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಉದ್ಘಾಟಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರಿನ ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.29(ಬಿಎಲ್‌ಯು)– ಸುತ್ತೂರು ಮಠದ ಇಂದಿನ ಕಾರ್ಯಕ್ರಮದಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಪಕ್ಷಗಳ ಜನಪ್ರತಿನಿಧಿಗಳು ಪಕ್ಷಾತೀತವಾಗಿ ಪಾಲ್ಗೊಂಡಿದ್ದು, ರಾಜನೀತಿ ಬದಿಗಿಟ್ಟು ಧರ್ಮನೀತಿ ಅನುಸರಿಸಿದ್ದಾರೆ. ದೇಶದ ಧರ್ಮ ಹಿತರಕ್ಷಣೆಯ ದೃಷ್ಟಿಯಿಂದ ಇದು ಒಳ್ಳೆಯ ಬೆಳವಣಿಗೆ ಎಂದು ಕೇಂದ್ರ ಕೃಷಿ, ರೈತ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅಭಿಪ್ರಾಯಪಟ್ಟಿದ್ದಾರೆ

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಮಠದಲ್ಲಿ ಇಂದು ನಡೆದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಶತೋತ್ತರ ದಶಮಾನೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ರಾಜಕೀಯ ಹೊರತು ಪಡಿಸಿ ಲೋಕದ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ. ರಾಷ್ಟ್ರದ ಹಿತ ದೃಷ್ಟಿಯಿಂದ ಇದೇ ರೀತಿ ಎಲ್ಲರೂ ಒಂದಾಗಬೇಕು ಎಂದು ಸಲಹೆ ನೀಡಿದರು.

ನಾಡಿನಲ್ಲಿರುವ ಹಲವು ಮಠಗಳಿಂದ ಧರ್ಮ ರಕ್ಷಣೆ ಕಾರ್ಯ ಅವಿರತವಾಗಿ ನಡೆಯುತ್ತಿದೆ. ವಸುದೈವ ಕುಟುಂಬಕಂ ಎಂಬ ನೀತಿಯಡಿ ಶ್ರೀ ಮಠಗಳು ಕೆಲಸ ಮಾಡುತ್ತಿವೆ. ಜಾತಿ, ಧರ್ಮದ ಭೇದ–ಭಾವವಿಲ್ಲದೆ ಅನೇಕ ಸೇವಾ ಕಾರ್ಯವನ್ನು ನಿರಂತರವಾಗಿ ಮಾಡುತ್ತಿದೆ. ಸಾಮಾಜಿಕ ಕಾರ್ಯದ ಜೊತೆಗೆ ಧರ್ಮ ರಕ್ಷಣೆಯ ಕಾರ್ಯ ಕೂಡ ಮಾಡುತ್ತಿರುವುದು ಪ್ರಶಂಸೆ ಪಡುವ ವಿಚಾರ ಎಂದು ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ವಿಶ್ವದ ಹಲವು ಬಲಾಢ್ಯ ರಾಷ್ಟ್ರಗಳು ಸಾಧನೆ ಮಾಡಿರಬಹುದು. ಆದರೆ ಸಾವಿರಾರು ವರ್ಷಗಳ ಹಿಂದೆ ಆ ರಾಷ್ಟ್ರಗಳಿಗೆ ಜ್ಞಾನ ನೀಡುವ ಕೆಲಸವನ್ನು ನಮ್ಮ ಭಾರತ ಮಾಡಿದ್ದು, ಹೆಮ್ಮೆ ಪಡುವ ವಿಚಾರವಾಗಿದೆ ಭಾರತ ವಿಶ್ವದ ಎಲ್ಲಾ ರಾಷ್ಟ್ರಗಳನ್ನು ಸೋದರ ಭಾವನೆಯಿಂದ ಕಾಣುತ್ತದೆ. ನಮ್ಮ ದೇಶದ ಮಠ ಮಾನ್ಯಗಳು ಹಾಕಿಕೊಟ್ಟ ಸನ್ಮಾರ್ಗ ಇದಕ್ಕೆ ಕಾರಣವಾಗಿದೆ ಎಂದು ಅಭಿಪ್ರಾಯಪಟ್ಟರು.

ಕೃಷಿ ಭಾರತದ ಅರ್ಥ ವ್ಯವಸ್ಥೆಯ ನಾಯಕನಾದರೆ, ರೈತ ಆತ್ಮದ ಸ್ಥಾನದಲ್ಲಿದ್ದಾನೆ. ಭಾರತ ತನ್ನ ಹೊಟ್ಟೆ ತುಂಬಿಸಿ ನಂತರ ವಿಶ್ವದ ಹಲವು ದೇಶಗಳ ಹಸಿವು ನೀಗಿಸುವ ಕೆಲಸ ಮಾಡುತ್ತಿದೆ. ಸರ್ವೇಜನೋ ಸುಖಿನೋ ಭವಂತು ಎಂಬಂತೆ ಭಾರತ ಉದಾರ ಮನೋಭಾವ ಹೊಂದಿದೆ ಎಂದು ಶಿವರಾಜ್ ಸಿಂಗ್ ಚೌಹಣ್ ಹೇಳಿದರು.

ವಸುದೈವ ಕುಟುಂಬಕಂ ಪರಿಕಲ್ಪನೆಯನ್ನು ನಮ್ಮ ಹಿರಿಯರು ಸಾವಿರಾರು ವರ್ಷಗಳ ಹಿಂದೆಯೇ ಸಾರಿ ಹೇಳಿದ್ದಾರೆ. ಭಾರತದಲ್ಲಿ ಮನುಷ್ಯರು ಮಾತ್ರವಲ್ಲದೆ ಪ್ರಾಣಿಗಳಲ್ಲಿಯೂ ಸದ್ಭಾವನೆಯ ಗುಣವಿದೆ. ಪ್ರಾಣಿಗಳಲ್ಲಿರುವ ದೈವಿಕ ಭಾವನೆಯನ್ನು ನಮ್ಮ ಭಾರತ ಸಾರಿ ಹೇಳುತ್ತದೆ. ಈ ಮೂಲಕ ಜಗತ್ತಿಗೆ ವಿಶ್ವ ಕಲ್ಯಾಣ ಸಂದೇಶವನ್ನು ನೀಡುತ್ತಿದೆ ಎಂದು ಹೇಳಿದರು.

ಸುತ್ತೂರು ಮಠ ಸಾವಿರಾರು ವರ್ಷಗಳ ಹಿಂದೆ ಬೀಜಾಂಕುರವಾಗಿ, ಇಂದು ಹೆಮ್ಮರವಾಗಿ ಬೆಳೆದಿದೆ. ಅಂದಿನಿಂದ ಇಂದಿನವರೆಗೆ ತ್ರಿವಿಧ ದಾಸೋಹದ ಮೂಲಕ ಸಮಾಜ ಕಲ್ಯಾಣ ಕಾರ್ಯವನ್ನು ಮಾಡುತ್ತಾ ಬರುತ್ತಿದೆ. ಇಂದು 400 ಕ್ಕೂ ಹೆಚ್ಚು ವಿದ್ಯಾಸಂಸ್ಥೆ ಹೊಂದಿರುವ ಸುತ್ತೂರು ಮಠ, ಸರ್ಕಾರ ಮಾಡದ ಕೆಲಸ ಮಾಡುತ್ತಿದೆ. ಮೆಡಿಕಲ್ ಕಾಲೇಜು ಸ್ಥಾಪನೆ ಮಾಡಲು ತುಂಬಾ ಕಷ್ಟ ಇದ್ದ ಸಂದರ್ಭದಲ್ಲಿ ಮೆಡಿಕಲ್ ಕಾಲೇಜು ಸ್ಥಾಪಿಸಿ ಸಾಧನೆ ಮಾಡಿದೆ. ಡಾ.ಶ್ರೀ ರಾಜೇಂದ್ರ ಸ್ವಾಮೀಜಿ ಅವರು ಹಾಕಿಕೊಟ್ಟ ಅಡಿಗಲ್ಲಿನಲ್ಲಿ ಈ ಸಂಸ್ಥೆ ಇಂದು ಇಷ್ಟು ಎತ್ತರಕ್ಕೆ ಬೆಳೆದಿದೆ ಎಂದು ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಅನಿಲ್ ಚಿಕ್ಕಮಾದು, ಕೆ.ವಿವೇಕಾನಂದ, ದರ್ಶನ್ ಧ್ರುವ ನಾರಾಯಣ್, ಮಾಜಿ ಶಾಸಕರಾದ ತೋಂಟದಾರ್ಯ, ಬಾಲರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಹಿಂದೂ ಧರ್ಮದ ಉಳಿವಿಗೆ ಮಠ ಮಾನ್ಯಗಳು ಬೆಂಬಲ ನೀಡಬೇಕು

ಹಿಂದೂ ಧರ್ಮದ ಮೇಲೆ ದಾಳಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಇಂತಹ ಧಾರ್ಮಿಕ ಕಾರ್ಯಕ್ರಮಗಳು ನಡೆಯಬೇಕು. ಜೊತೆಗೆ ಮಠ ಮಾನ್ಯಗಳು ಹಿಂದೂ ಧರ್ಮದ ಉಳಿವಿನ ಹೋರಾಟಕ್ಕೆ ಬೆಂಬಲ ನೀಡಬೇಕು ಎಂದು ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು. ಇಂದು ಮೈಸೂರಿನ ಹಲವು ಬಡಾವಣೆ, ಗಲ್ಲಿಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಿ ಅನ್ನ ಸಂತರ್ಪಣೆ ಮಾಡುತ್ತಿರುವುದಕ್ಕೆ ಸುತ್ತೂರು ಮಠ ಮಾಡುತ್ತಿರುವ ಅನ್ನ ದಾಸೋಹವೇ ಸ್ಫೂರ್ತಿ ಎಂದು ಹೇಳಿದರು. ಕೊರೊನಾ ಸಮಯದಲ್ಲಿ ಶ್ರೀ ಮಠ ಜನರ ಸಂಕಷ್ಟಕ್ಕೆ ಸ್ಪಂದಿಸಿತು. ಕೊರೊನಾದಲ್ಲಿ ತಂದೆ ತಾಯಿ ಕಳೆದುಕೊಂಡ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ನೀಡುತ್ತಿದೆ. ಸುನಾಮಿಯಲ್ಲಿ ಮನೆ ಕಳೆದುಕೊಂಡವರಿಗೆ ತಮಿಳುನಾಡಿನಲ್ಲಿ ನೂರಾರು ಮನೆ ನಿರ್ಮಾಣ ಮಾಡಿದೆ ಎಂದು ಶ್ರೀವತ್ಸ ಹೇಳಿದರು.

ವಿದೇಶಿ ವಸ್ತುಗಳ ಅವಲಂಬನೆ ತಗ್ಗಿಸಿ, ಸ್ವಾವಲಂಬಿಗಳಾಗಬೇಕು

ಅಮೇರಿಕಾ ಸೇರಿದಂತೆ ವಿದೇಶಗಳ ಸುಂಕ ನೀತಿಯಿಂದ ಭಾರತದ ಉತ್ಪಾದಕರು ಹಾಗೂ ರಫ್ತುದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಹಿನ್ನೆಲೆ ಭಾರತೀಯರು ವಿದೇಶದ ವಸ್ತುಗಳ ಅವಲಂಬನೆ ತಗ್ಗಿಸಬೇಕು ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸಲಹೆ ನೀಡಿದ್ದಾರೆ.

ಅಮೇರಿಕಾ ಸೇರಿದಂತೆ ಹಲವು ದೇಶಗಳಲ್ಲಿ ದೊಡ್ಡ ಹಿಡುವಳಿದಾರರಿದ್ದಾರೆ. ಒಬ್ಬೊಬ್ಬರು ಸಾವಿರಾರು ಎಕರೆ ಜಮೀನು ಹೊಂದಿದ್ದಾರೆ. ಆದರೆ ನಾವು ಎರಡು ಎಕರೆ ಜಮೀನು ಹೊಂದಿರುವುದೇ ಹೆಚ್ಚಾಗಿದೆ. ಇದನ್ನೆ ಬಳಕೆ ಮಾಡಿಕೊಂಡು ಹೆಚ್ಚು ಉತ್ಪಾದನೆ ಮಾಡಬೇಕು. ಈ ಹಿನ್ನೆಲೆ ಇಂಟಿಗ್ರೇಟೆಡ್ ಫಾರ್ಮಿಂಗ್ ಮೂಲಕ ಸಾಮೂಹಿಕ ಬೇಸಾಯ ಕ್ರಮ ಅನುಸರಿಸಬೇಕು ಎಂದು ಸಲಹೆ ನೀಡಿದರು.

ದಶಕಗಳ ಹಿಂದೆ ಭಾರತ ಅಕ್ಕಿಯನ್ನು ವಿದೇಶದಿಂದ ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಈಗ ನಾವೇ ಹೆಚ್ಚು ಅಕ್ಕಿ ಉತ್ಪಾದಿಸಿ ರಫ್ತು ಮಾಡುತ್ತಿದ್ದೇವೆ. ಈ ಮೂಲಕ ಭಾರತ ವಿಶ್ವದ ಆಹಾರದ ಬುಟ್ಟಿಯಾಗಿ ಮಾರ್ಪಾಡಾಗಿದೆ ಎಂದು ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದರು.

ಈ ಧರ್ಮ ರಕ್ಷಣೆಗೆ ಅವಶ್ಯವಾಗಿದೆ...

ಇತ್ತೀಚಿನ ಬೆಳವಣಿಗೆಯ ಹಿನ್ನೆಲೆಯಲ್ಲಿ ಧರ್ಮದ ಹಿತರಕ್ಷಣೆಗೆ ನಾವೆಲ್ಲಾ ನಿಲ್ಲಬೇಕಾಗಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸಲಹೆ ನೀಡಿದರು. ಸುತ್ತೂರು ಮಠ ತ್ರಿವಿಧ ದಾಸೋಹಕ್ಕೆ ಪ್ರಖ್ಯಾತಿಯಾಗಿದೆ. ಸಮಾಜ ಕಲ್ಯಾಣದ ಪರಿಕಲ್ಪನೆಯಲ್ಲಿ ಶ್ರೇಷ್ಠ ಕೊಡುಗೆಗಳನ್ನು ನೀಡುತ್ತಿದೆ. ಮೈಸೂರು ಅರಮನೆ ಹಾಗೂ ಸುತ್ತೂರು ಮಠದ ನಡುವೆ ಅವಿನಾಭಾವ ಸಂಬಂಧವಿದೆ. ನಮ್ಮ ತಾತ ಜಯಚಾಮರಾಜ ಒಡೆಯರ್ ಹಾಗೂ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ನಡುವೆ ಉತ್ತಮ ಬಾಂಧವ್ಯವಿತ್ತು. ಈ ಸಂಬಂಧ ಈಗಲೂ ಮುಂದುವರೆದುಕೊಂಡು ಬಂದಿದೆ. ಇದರಿಂದ ಸುತ್ತೂರು ಮಠ ನಮಗೆ ಗುರುವಿನ ಸ್ಥಾನದಲ್ಲಿದೆ ಎಂದು ಹೇಳಿದರು.

ಈ ವೇಳೆ ಮಾತನಾಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು, ಸುತ್ತೂರು ಮಠ ಸಾಮಾಜಿಕ ಕಾರ್ಯ ಮಾಡುತ್ತಿದೆ. ಹಲವು ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಮೂಲಕ ಯುವ ಸಮೂಹದ ಉಜ್ವಲ ಭವಿಷ್ಯ ರೂಪಿಸುತ್ತಿದೆ. ಶಿಕ್ಷಣ, ಆರೋಗ್ಯ, ಅನ್ನ ದಾಸೋಹದ ಮೂಲಕ ವಿವಿಧ ರೀತಿ ಹಸಿವು ನೀಗಿಸುತ್ತಿದೆ ಎಂದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿ, ಸುತ್ತೂರು ಮಠ ಮೈಸೂರು, ಕರ್ನಾಟಕ, ಭಾರತ ಮಾತ್ರವಲ್ಲದೆ ವಿಶ್ವದ ಹಲವು ದೇಶದಲ್ಲಿ ಶಿಕ್ಷಣ ಸಂಸ್ಥೆ ಸ್ಥಾಪಿಸಿ ಮನೆಮಾತಾಗಿದೆ ಎಂದರು.

ಸುತ್ತೂರು ಮಠ ಜ್ಞಾನ ಜ್ಯೋತಿ ಬೆಳಗಿಸಿ ಶೈಕ್ಷಣಿಕ ಕ್ರಾಂತಿ ಮಾಡುತ್ತಿದೆ

ಸುತ್ತೂರು ಮಠ ನೂರಾರು ಶಿಕ್ಷಣ ಸಂಸ್ಥೆ ಸ್ಥಾಪಿಸಿ, ಜ್ಞಾನ ಜ್ಯೋತಿ ಬೆಳಗಿಸುವ ಮೂಲಕ ಶೈಕ್ಷಣಿಕ ಕ್ರಾಂತಿ ಮಾಡುತ್ತಿದೆ ಎಂದು ತುಮಕೂರಿನ ಶ್ರೀ ಸಿದ್ಧಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ ಹೇಳಿದರು. ಮೈಸೂರಿಗೆ ಅರಮನೆ ಗರಿಮೆಯಾದರೆ, ಸುತ್ತೂರು ಮಠ ಹಿರಿಮೆಯಾಗಿದೆ. ಅಕ್ಷರ ಕ್ರಾಂತಿ ಮಾಡಿದ ಶ್ರೀ ರಾಜೇಂದ್ರ ಶ್ರೀಗಳು, ನಾಡಿನ ಉದ್ದಗಲಕ್ಕೂ ಮಠದ ಸೇವಾ ಕಾರ್ಯವನ್ನು ವಿಸ್ತರಿಸಿದರು ಎಂದು ತಿಳಿಸಿದರು.

ರಾಜೇಂದ್ರ ಶ್ರೀಗಳು ಬಹಳ ಕಷ್ಟ ಕಾಲದಲ್ಲಿ ಪ್ರಸಾದ ನಿಲಯಗಳನ್ನು ತೆರೆದರು. ಆರ್ಥಿಕ ಸಂಕಷ್ಟದ ಸಮಯದಲ್ಲಿ ಚಿನ್ನದ ಕರಡಿಗೆ ಮಾರಾಟ ಮಾಡಿ ಮಕ್ಕಳಿಗೆ ಅನ್ನ ಹಾಕಿದರು. ಈ ಮೂಲಕ ಈ ಭಾಗದ ಜನರಿಗೆ ಶ್ರೀ ರಾಜೇಂದ್ರ ಸ್ವಾಮೀಜಿ ದಾರಿ ದೀಪವಾದರೆ,. ಈಗ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ಎಲ್ಲರನ್ನು ಕೈಹಿಡಿದು ಮುನ್ನಡೆಸುತ್ತಿದ್ದಾರೆ ಎಂದರು.

ವಿದ್ಯಾಭ್ಯಾಸಕ್ಕಾಗಿ ರಾಜೇಂದ್ರ ಸ್ವಾಮೀಜಿ ಅವರು ಕಾಶಿಗೆ ಹೋಗಿದ್ದರು. ಆ ವೇಳೆ ಕಾಶಿಯ ಗೌರಿಶಂಕರ ಸ್ವಾಮೀಜಿ ಅವರು ರಾಜೇಂದ್ರ ಶ್ರೀಗಳಿಗೆ ಒಂದು ಸಲಹೆ ನೀಡಿದರು. ಇಲ್ಲಿ ಬಂದು ವಿದ್ಯಾಭ್ಯಾಸ ಮಾಡುವುದಕ್ಕಿಂತ ಮೈಸೂರಿನಲ್ಲಿ ಇದ್ದುಕೊಂಡೇ ಸಾವಿರಾರು ಮಂದಿಗೆ ಶಿಕ್ಷಣ ನೀಡುವ ಕಾರ್ಯ ಮಾಡಿ ಎಂದು ಹೇಳಿದರು. ಈ ಮಾತಿನಿಂದ ಪ್ರೇರಣೆಗೊಂಡ ರಾಜೇಂದ್ರ ಸ್ವಾಮೀಜಿ ಅವರು ಮೈಸೂರಿನಲ್ಲಿ ಸಾಮಾಜಿಕ ಕಾರ್ಯಗಳನ್ನು ಮಾಡಿದರು. ಅಲ್ಲದೆ ಹಲವು ಪ್ರಸಾದ ನಿಲಯ ಸ್ಥಾಪಿಸಿ ಮಕ್ಕಳ ಉಜ್ವಲ ಭವಿಷ್ಯಕ್ಕೆ ಶಿಕ್ಷಣ ನೀಡಿದರು ಎಂದರು.

ಹಲವು ಬೇಡಿಕೆ ಈಡೇರಿಸುವಂತೆ ರೈತರ ಮನವಿ



ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಸಿಂಗ್ ಅವರನ್ನು ಶುಕ್ರವಾರ ಭೇಟಿ ಮಾಡಿದ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದವರು ಹಲವು ಬೇಡಿಕೆ ಈಡೇರಿಸುವಂತೆ ಮನವಿ ಸಲ್ಲಿಸಿದರು.

ಮೈಸೂರು, ಆ.29(ಬಿಎಲ್‌ಯು)– ಎಂ.ಎಸ್.ಸ್ವಾಮಿನಾಥನ್ ವರದಿ ಜಾರಿ ಸೇರಿದಂತೆ ಹಲವು ಬೇಡಿಕೆ ಈಡೇರಿಸುವಂತೆ ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘದವರು ಇಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಮನವಿ ಸಲ್ಲಿಸಿದರು.

ನಗರದ ಸುತ್ತೂರು ಮಠದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂದರ್ಭದಲ್ಲಿ ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ನೇತೃತ್ವದಲ್ಲಿ ರೈತರು ಶಿವರಾಜ್ ಸಿಂಗ್ ಅವರನ್ನು ಭೇಟಿ ಮಾಡಿ ಬೇಡಿಕೆಗಳ ಮಂಡಿಸಿದರು.

ಭಾರತ ಮತ್ತು ಅಮೇರಿಕಾ ನಡುವಿನ ಒಪ್ಪಂದದಲ್ಲಿ ಕೃಷಿ, ಪಶುಸಂಗೋಪನೆ, ಮೀನುಗಾರಿಕೆ, ಕೋಳಿ ಸಾಕಾಣಿಕೆಯನ್ನು ಸೇರಿಸಬಾರದು. ಒಪ್ಪಂದದಲ್ಲಿ ಇದು ಸೇರಿದರೆ ಭಾರತದ ಕೃಷಿಕರಿಗೆ ಮಾರಕವಾಗುತ್ತದೆ ಎಂದು ಸಚಿವರಿಗೆ ಮನದಟ್ಟು ಮಾಡಿದರು.

ಎಂಎಸ್ ಪಿ ಗ್ಯಾರಂಟಿ ಕಾಯ್ದೆ ಜಾರಿ ಮಾಡಬೇಕು, ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಬೇಕು, ವರ್ಷಪೂರ್ತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಖರೀದಿ ಕೇಂದ್ರ ತೆರೆಯಬೇಕು ಸೇರಿದಂತೆ ಹಲವು ಬೇಡಿಕೆ ಈಡೇಸುವಂತೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಸಂಘದ ರಾಜ್ಯ ಗೌರವಾಧ್ಯಕ್ಷ ಎಚ್.ಎಸ್.ರಾಜು, ಖಜಾಂಚಿ ಕೆರೆಹುಂಡಿ ರಾಜಣ್ಣ, ಮೈಸೂರು ಜಿಲ್ಲಾಧ್ಯಕ್ಷ ವಳಗೆರೆ ಗಣೇಶ್, ಮುಖಂಡರಾದ ಚಿದಂಬರ, ಜಗದೀಶ್, ಮಹೇಶ್ ಸ್ವಾಮಿ, ಸಂತೋಷ್ ಹಾಜರಿದ್ದರು.

ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ

ಮೈಸೂರು, ಆ.29(ಜಿಎ)–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕರಾಮುವಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ನಡೆಯುತ್ತಿರುವ ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಸೆ.2ರಂದು ಬೆಳಗ್ಗೆ 11 ಗಂಟೆಗೆ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ನಿವೃತ್ತ ಐಪಿಎಸ್ ಅಧಿಕಾರಿ ಶಂಕರ್ ಬಿದರಿ ಮುಖ್ಯ ಭಾಷಣ ಮಾಡಲಿದ್ದಾರೆ. ಬೆಂಗಳೂರು ವಿವಿಯ ವಿಶ್ರಾಂತ ಕುಲಪತಿ ಪ್ರೊ.ಲಿಂಗರಾಜ ಗಾಂಧಿ 'ಮುಕ್ತ ಭಂಡಾರ' ಅಧ್ಯಯನ ಪುಸ್ತಕ ಬಿಡುಗಡೆ ಮಾಡಿ, ಕೆ–ಸೆಟ್ ಮತ್ತು ಯುಜಿಸಿ–ನೆಟ್ ಪರೀಕ್ಷೆ ಬಗ್ಗೆ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅಧ್ಯಕ್ಷತೆ ವಹಿಸಲಿದ್ದಾರೆ. ಜು.16ರಿಂದ ಆರಂಭವಾದ ತರಬೇತಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 314 ಮಂದಿ ತರಬೇತಿ ಪಡೆದುಕೊಂಡಿದ್ದಾರೆ ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ



ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ 'ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ'ಯಲ್ಲಿ ಡಿಆರ್‌ಟಿಸಿ ಮುಖ್ಯಸ್ಥ ಡಾ.ಎಂ.ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.29(ಪಿಎಂ)– ಭಾರತೀಯ ಗ್ರಂಥಾಲಯ ವಿಜ್ಞಾನದ ಪಿತಾಮಹ ಪದ್ಮಶ್ರೀ ಡಾ.ಎಸ್.ಆರ್.ರಂಗನಾಥನ್ ಅವರ ಜನ್ಮದಿನದ ಪ್ರಯುಕ್ತ ಜೆಎಸ್‌ಎಸ್ ಎಹೆಚ್‌ಇಆರ್ ಅಧೀನದ ಜೆಎಸ್‌ಎಸ್ ಕಾಲೇಜ್ ಆಫ್ ಫಾರ್ಮಸಿಯ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದಲ್ಲಿ 'ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ' ಮತ್ತು ಪುಸ್ತಕ ಪ್ರದರ್ಶನವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಕಾರ್ಯಕ್ರಮ ಉದ್ಘಾಟಿಸಿದ ಬೆಂಗಳೂರಿನ ದಿ ಡಾಕ್ಯುಮೆಂಟೇಶನ್ ರಿಸರ್ಚ್ ಅಂಡ್ ಟ್ರೈನಿಂಗ್ ಸೆಂಟರ್ (ಡಿಆರ್‌ಟಿಸಿ) ಮುಖ್ಯಸ್ಥ ಡಾ.ಎಂ.ಕೃಷ್ಣಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಪುಸ್ತಕ ಪ್ರದರ್ಶನದಲ್ಲಿ ಫಾರ್ಮಸಿ ಹಾಗೂ ಸಂಬಂಧಿತ ವಿಷಯಗಳ ಕುರಿತ ಪುಸ್ತಕಗಳು ಅನಾವರಣಗೊಂಡಿದ್ದವು. ಜೆಎಸ್‌ಎಸ್ ಎಹೆಚ್‌ಇಆರ್ ಉಪಕುಲಪತಿ ಡಾ.ಹೆಚ್. ಬಸವನಗೌಡ, ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ. ಪ್ರಮೋದ್ ಕುಮಾರ್, ಉಪಪ್ರಾಂಶುಪಾಲ ಡಾ.ಜಿ.ವಿ.ಪೂಜಾರ್ ಮತ್ತು ಗ್ರಂಥಪಾಲಕಿ ಹೆಚ್.ವಿ.ಸುಲಕ್ಷಣಾ ಮತ್ತಿತರರು ಹಾಜರಿದ್ದರು.

ದಸರಾ ಚಲನ ಚಿತ್ರೋತ್ಸವಕ್ಕೆ 10 ಕಿರುಚಿತ್ರಗಳ ಆಯ್ಕೆ



ದಸರಾ ಚಲನಚಿತ್ರೋತ್ಸವ–2025ಕ್ಕೆ ಕಿರುಚಿತ್ರಗಳನ್ನು ಆಯ್ಕೆ ಸಮಿತಿ ಹಾಗೂ ಉಪಸಮಿತಿ ಪದಾಧಿಕಾರಿಗಳನ್ನು ಕಾಣಬಹುದು

ಮೈಸೂರು, ಆ.29(ಎಂಕೆ)– ನಾಡಹಬ್ಬ ಮೈಸೂರು ದಸರಾ ಚಲನಚಿತ್ರೋತ್ಸವ–2025ಕ್ಕೆ 10 ಕಿರುಚಿತ್ರಗಳನ್ನು ಆಯ್ಕೆ ಮಾಡಲಾಗಿದೆ. ದಸರಾ ದಸರಾ ಚಲನಚಿತ್ರೋತ್ಸವದ ಅಂಗವಾಗಿ ನಡೆದ ಕಿರು ಚಿತ್ರ ಸ್ಪರ್ಧೆಯಲ್ಲಿ ಸಲ್ಲಿಕೆಯಾದ 34 ಕಿರುಚಿತ್ರಗಳ ಪೈಕಿ 'ಹಿಂಬಾಲಿಸಿ', 'ಆ ಕ್ಷಣ', 'ಅದೃಷ್ಟ ಲಕ್ಷ್ಮೀ', 'ಮಾರ್ವೆನ್', 'ನನ್ನ ಪ್ರಪಂಚ', 'ಹಬ್ಬದ ಹಸಿವು', 'ಕಾಲಾಂತರ', 'ಎಡರ್ೂಪಾಯಿ', 'ಲಕುಮಿ' ಹಾಗೂ 'ಸೆಕ್ಸ್ ಟಾಯ್' ಕಿರು ಚಿತ್ರಗಳು ಆಯ್ಕೆಯಾಗಿವೆ. ಒಂದಕ್ಕಿಂತ ಒಂದು ವಿಭಿನ್ನ ರೀತಿಯ ಕಥಾವಸ್ತುವನ್ನು ಹೊಂದಿರುವ ಚಿತ್ರಗಳನ್ನು ಐನಾಕ್ಸ್ ಚಿತ್ರಮಂದಿರದಲ್ಲಿ ಪ್ರದರ್ಶನ ಮಾಡಲಾಗುವುದು.

ಕಿರು ಚಿತ್ರ ಸ್ಪರ್ಧೆಯ ತೀರ್ಪುಗಾರರಾಗಿ ಶಿವಮೊಗ್ಗ, ಇಂದಿರಾಗಾಂಧಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ನರೇಂದ್ರ ಕುಳಗಟ್ಟೆ ಜಯಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜಿನ ಪ್ರಾಧ್ಯಾಪಕ ಡಾ.ಚರಿತ, ಮೈಸೂರು ವಿಶ್ವವಿದ್ಯಾನಿಲಯ ಇಎಂಆರ್‌ಸಿ ತಂತ್ರಜ್ಞರಾದ ಗೋಪಿನಾಥ್, ಬೆಂಗಳೂರಿನ ಸೌಂಡ್ ಇಂಜಿನಿಯರ್ ಅನಿಲ್ ಕುಮಾರ್ ಭಾಗವಹಿಸಿದ್ದರು.

ದಸರಾ ಚಲನಚಿತ್ರೋತ್ಸವದ ಉಪ ಸಮಿತಿಯ ಉಪ ವಿಶೇಷಾಧಿಕಾರಿ ವಿಜಯಕುಮಾರ್, ಕಾರ್ಯಾಧ್ಯಕ್ಷರಾದ ಕೆ.ಶೋಭಾ, ಕಾರ್ಯದರ್ಶಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಚಲನಚಿತ್ರೋತ್ಸವ ಸಹ ಸಂಯೋಜಕ ಶ್ರೇಯಸ್ ಉಪಸ್ಥಿತರಿದ್ದರು.

ಕೆ.ಎನ್.ರಾಜಣ್ಣ ವಜಾ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ

ಮೆರವಣಿಗೆ, ಸರ್ಕಾರದ ವಿರುದ್ಧ ಘೋಷಣೆ, ಮನವಿ ಸಲ್ಲಿಕೆ



ಕೆ.ಎನ್.ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿರುವುದನ್ನು ಖಂಡಿಸಿ, ಸಂಪುಟಕ್ಕೆ ಮರು ಸೇರ್ಪಡೆ ಮಾಡಿಕೊಳ್ಳುವಂತೆ ಒತ್ತಾಯಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಆ.29(ಜಿಎ)–ಕೆ.ಎನ್. ರಾಜಣ್ಣ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಿರುವುದನ್ನು ಖಂಡಿಸಿ, ಸಂಪುಟಕ್ಕೆ ಮರು ಸೇರ್ಪಡೆ ಮಾಡಿಕೊಳ್ಳುವಂತೆ ಒತ್ತಾಯಿಸಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ನಾಯಕರ ಕ್ಷೇಮಾಭಿವೃದ್ಧಿ ಸಂಘದಿಂದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ ಜಮಾಯಿಸಿದ್ದ ನಾಯಕ ಸಮುದಾಯ ಮುಖಂಡರು ಟೌನ್‌ಹಾಲ್ ಮುಂಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ನಂತರ ಮೆರವಣಿಗೆ ಮೂಲಕ ಡಿಸಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಸಹಕಾರ ಸಚಿವರಾಗಿದ್ದ ಕೆ.ಎನ್.ರಾಜಣ್ಣ ನಾಯಕ ಜನಾಂಗದ ಪ್ರಭಾವಿ ಮುಖಂಡ. ನೇರ ನಡೆ–ನುಡಿ, ದಿಟ್ಟ ಹೋರಾಟಗಾರ ಅವರನ್ನು ಸಂಪುಟದಿಂದ ವಜಾ ಮಾಡಿರುವುದು ನಾಯಕ ಜನಾಂಗಕ್ಕೆ ಮಾಡಿರುವ ಘನ ಘೋರ ಅನ್ಯಾಯ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ಅವಲೋಕಿಸಿದಾಗ ನಾಯಕ ಜನಾಂಗದ ಬಂಧುಗಳಿಗೆ ಇದು ಎಚ್ಚರಿಕೆಯ ಗಂಟೆಯಾಗಿದೆ. ಏಳಿ–ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ ಎಂಬ ನಾಣ್ಣುಡಿಗೆ ಬದ್ಧರಾಗಿ ಹೋರಾಟ ನಡೆಸಬೇಕಾದ ಅನಿವಾರ್ಯತೆ ಉಂಟಾಗಿದೆ. ಕೆ.ಎನ್. ರಾಜಣ್ಣ ಅವರನ್ನು ಸಂಪುಟದಿಂದ ವಜಾಗೊಳಿಸಿ ರಾಜಕೀಯ ಜೀವನದಿಂದ ಅಧೋಗತಿಗೆ ತಳ್ಳಲು ಷಡ್ಯಂತರ ಮಾಡಿರುವುದು ಸ್ಪಷ್ಟವಾಗಿ ಕಂಡುಬರುತ್ತಿದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ರಾಜಣ್ಣ ಅವರಿಗೆ ಯಾವುದೇ ನೋಟೀಸ್ ಸಹ ನೀಡದೇ ಏಕಾಏಕಿ ಸಂಪುಟದಿಂದ ವಜಾಗೊಳಿಸಿರುವುದು ದೊಡ್ಡ ಅಪಮಾನ. ಬಿ.ನಾಗೇಂದ್ರ, ಬೆಂಗಳೂರು ಪೊಲೀಸ್ ಆಯುಕ್ತರಾಗಿದ್ದ ಬಿ.ದಯಾನಂದ್, ರವಿ.ಡಿ ಚೆನ್ನಣ್ಣನವರ್ ಅವರಿಗೂ ಅನ್ಯಾಯವಾಗಿದೆ. ರಾಜಣ್ಣ ಅವರ ಮೇಲೆ ಯಾವುದೇ ಭ್ರಷ್ಟಾಚಾರದ ಆರೋಪವಿಲ್ಲ, ಸ್ವಜನ ಪಕ್ಷಪಾತವಿಲ್ಲ. ದೀನ–ದಲಿತರ ಹಿಂದುಳಿದ ವರ್ಗದವರ ಧ್ವನಿಯಾಗಿದ್ದರು. ಸಹಕಾರ ಸಚಿವರಾಗಿ ಉತ್ತಮ ಆಡಳಿತ ನೀಡುತ್ತಿದ್ದರು. ಇವರ ಏಳಿಗೆ ಸಹಿಸದೆ ಕುತಂತ್ರ ಮಾಡುತ್ತಿದ್ದಾರೆ. ಮುಂದುವರೆದ ವರ್ಗದ ಮುಖಂಡರು ಪಕ್ಷ ವಿರೋಧಿ ಹೇಳಿಕೆ ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ ನಾಯಕ ಸಮುದಾಯದ ರಾಜಣ್ಣ ಅವರನ್ನು ಏಕಾಏಕಿ ವಜಾ ಮಾಡಿರುವುದು ಖಂಡನೀಯ. ಕೂಡಲೇ ರಾಜಣ್ಣ ಅವರನ್ನು ಸಂಪುಟಕ್ಕೆ ಮರು ಸೇರ್ಪಡೆ ಮಾಡಬೇಕು. ಒಂದು ವೇಳೆ ಅವಕಾಶ ನೀಡದಿದ್ದರೆ ನಾಯಕ ಸಮುದಾಯವೇ ಕಾಂಗ್ರೆಸ್‌ನಿಂದ ದೂರವಾಗಲಿದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ಆರ್.ರಾಚಪ್ಪ, ಮಹದೇವನಾಯಕ, ಕುಂಬರಳ್ಳಿ ಸುಬ್ಬಣ್ಣ, ಕೆಂಪನಾಯಕ, ಶ್ರೀನಿವಾಸ ನಾಯಕ, ದ್ಯಾವಪ್ಪ ನಾಯಕ, ಅಣ್ಣಯ್ಯ ನಾಯಕ, ಮಲ್ಲೇಸ್ ನಾಯಕ, ಮಹದೇವಸ್ವಾಮಿ, ಹುಣಸೂರು ಪ್ರಭಾಕರ್, ಕಡಕೊಳ ಕುಮಾರಸ್ವಾಮಿ ಸೇರಿದಂತೆ ಹಲವರು ಪಾಲ್ಗೊಂಡಿದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ; ಹಿಂದೂ ಜಾಗರಣ ವೇದಿಕೆ ವಿರೋಧ

ನಿರ್ಧಾರ ಹಿಂಪಡೆಯಲು ಆಗ್ರಹಿಸಿ ಸರ್ಕಾರಕ್ಕೆ ಮನವಿ



ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ಮಾಡಿರುವುದನ್ನು ಸರ್ಕಾರ ಹಿಂಪಡೆಯಬೇಕು' ಎಂದು ಆಗ್ರಹಿಸಿ ಹಿಂದೂ ಜಾಗರಣ ವೇದಿಕೆಯ ಮೈಸೂರು ಜಿಲ್ಲಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ಎಡಿಸಿ ಪಿ.ಶಿವರಾಜು ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಮೈಸೂರು, ಆ.29(ಜಿಎ)–ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಅವರನ್ನು ಆಯ್ಕೆ ನಿರ್ಧಾರವನ್ನು ಸರ್ಕಾರ ಹಿಂಪಡೆಯಬೇಕು' ಎಂದು ಆಗ್ರಹಿಸಿ ಹಿಂದೂ ಜಾಗರಣ ವೇದಿಕೆಯ ಮೈಸೂರು ಜಿಲ್ಲಾ ಸಮಿತಿ ಪದಾಧಿಕಾರಿಗಳು ಜಿಲ್ಲಾಧಿಕಾರಿ ಕಚೇರಿಯಲ್ಲಿ ಎಡಿಸಿ ಪಿ.ಶಿವರಾಜು ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ನವರಾತ್ರಿಯಲ್ಲಿ ಚಾಮುಂಡೇಶ್ವರಿ ತಾಯಿಯನ್ನು ಶ್ರದ್ಧಾ, ಭಕ್ತಿಯಿಂದ ಪೂಜಿಸುತ್ತೇವೆ. ಆದರೆ ಈಗ ದಸರಾ ಉದ್ಘಾಟಕರೆಂದು ಮುಖ್ಯಮಂತ್ರಿಗಳು ಬಾನು ಮುಷ್ತಾಕ್ ಅವರನ್ನು ಘೋಷಿಸಿದ್ದು, ಇದನ್ನು ಹಿಂದೂ ಸಮಾಜ ವಿರೋಧಿಸುತ್ತದೆ. ಅವರು ತಾಯಿ ಭುವನೇಶ್ವರಿ ಹಾಗೂ ಅರಿಶಿನ, ಕುಂಕುಮದ ಬಗ್ಗೆ ಸಂಕುಚಿತವಾಗಿ ಮಾತನಾಡಿದ್ದಾರೆ. ಹೀಗಾಗಿ ವಿವಾದಿತ ವ್ಯಕ್ತಿಯ ಆಯ್ಕೆಯ ನಿರ್ಧಾರ ಹಿಂಪಡೆಯಬೇಕು ಎಂದು ವೇದಿಕೆ ಸದಸ್ಯರು ಒತ್ತಾಯಿಸಿದರು.

ಮೂರ್ತಿ ಆರಾಧನೆಯನ್ನು ವಿರೋಧಿಸುವವರು, ಬಹು ವಿಗ್ರಹ ಆರಾಧನೆ ಮಾಡುವವರನ್ನು ನಿಂದಿಸುವ ಅನೇಕರು ಇಸ್ಲಾಂ ಧರ್ಮದಲ್ಲಿದ್ದಾರೆ. ಇದೇ ರೀತಿ ಈ ದೇಶದ ಬಹುಸಂಖ್ಯಾತ ಹಿಂದೂಗಳ ಭಾವನೆಗೆ ನಿರಂತರವಾಗಿ ಧಕ್ಕೆ ತರುತ್ತಿರುವವರಲ್ಲಿ ಬಾನು ಮುಷ್ತಾಕ್ ಒಬ್ಬರು. ಹಾಗಾಗಿ ರಾಜ್ಯ ಸರ್ಕಾರ ತಕ್ಷಣ ದಸರಾ ಉದ್ಘಾಟಕರನ್ನಾಗಿ ಬಾನು ಮುಷ್ತಾಕ್ ಅವರ ಆಯ್ಕೆ ಹಿಂಪಡೆದು, ನಾಡಿನ ಸಂಸ್ಕೃತಿ, ಪರಂಪರೆಗೆ ಗೌರವ ಕೊಡುವ ವ್ಯಕ್ತಿಯನ್ನು ಆಯ್ಕೆ ಮಾಡಬೇಕೆಂದು ವೇದಿಕೆಯ ಸದಸ್ಯರು ಒತ್ತಾಯಿಸಿದರು.

ಈ ವೇಳೆ ಹಿಂದೂ ಜಾಗರಣ ವೇದಿಕೆಯ ಸದಸ್ಯ ಚಂದ್ರು ಮಾತನಾಡಿ, ದಸರಾ ಉದ್ಘಾಟಕರಾಗಿ ಬಾನು ಮುಷ್ತಾಕ್ ಅವರ ಆಯ್ಕೆ ತಪ್ಪು ನಿರ್ಧಾರ. ಹಿಂದೂಗಳ ಹಬ್ಬದಲ್ಲಿ ಇಂತಹ ನಿರ್ಧಾರ ಸರಿಯಲ್ಲ. ಕುರಾನ್‌ನಲ್ಲಿ ಮೂರ್ತಿ ಪೂಜೆ ಸುಳ್ಳು ಎನ್ನುವ ನಂಬಿಕೆಯಿದೆ. ಹಾಗಾದರೆ ದಸರಾ ಉದ್ಘಾಟನಾ ಸಂದರ್ಭದಲ್ಲಿ ಚಾಮುಂಡೇಶ್ವರಿಯನ್ನು ಪೂಜಿಸಲು ತಮ್ಮ ನಿಲುವು ಏನು ಎಂಬುದನ್ನು ಬಾನು ಮುಷ್ತಾಕ್ ತಿಳಿಸಲಿ. ಕೂಡಲೇ ಬಾನು ಮುಷ್ತಾಕ್ ಆಯ್ಕೆಯನ್ನು ಹಿಂಪಡೆಯಬೇಕು. ಇಲ್ಲದಿದ್ದರೆ ಹಿಂದೂ ಜಾಗರಣ ವೇದಿಕೆ ಉಗ್ರ ಹೋರಾಟ ನಡೆಸುತ್ತದೆ ಎಂದು ಎಚ್ಚರಿಸಿದರು. ಸಂಘಟನೆ ಮುಖಂಡರಾದ ಮಹೇಶ್ ಕಡಗದಾಳು, ಪ್ರಶಾಂತ್ ಬಂಡಿಯೋಡು, ಮನು ಶ್ರೀನಿವಾಸ್, ರಂಗಸ್ವಾಮಿ, ರಾಜನ್, ವಸಂತ್ ಕುಮಾರ್, ಚಂದ್ರು ಸ್ವಾಮಿ ಉಪಸ್ಥಿತರಿದ್ದರು.

ಸೆ.1 ರಾಷ್ಟ್ರಪತಿ ದ್ರೌಪದಿ ಮುರ್ಮು ಮೈಸೂರು ಭೇಟಿ

●ಎರಡು ದಿನ ವಿವಿಧ ಕಾರ್ಯಕ್ರಮದಲ್ಲಿ ಭಾಗಿ ●ಅರಮನೆ, ಚಾಮುಂಡಿಬೆಟ್ಟಕ್ಕೂ ಭೇಟಿ ●ರಾಷ್ಟ್ರಪತಿಗಳು ತಂಗುವ ಹೋಟೆಲ್, ಹಾದು ಹೋಗುವ ಮಾರ್ಗ, ಪಾಲ್ಗೊಳ್ಳುವ ಕಾರ್ಯಕ್ರಮಕ್ಕೆ ಕಟ್ಟೆಚ್ಚರ ●ಜಿಲ್ಲಾಧಿಕಾರಿ, ಪೊಲೀಸ್ ಕಮಿಷ್ನರ್ ಪರಿಶೀಲನೆ




ರಾಷ್ಟ್ರಪತಿ ದ್ರೌಪದಿ ಮುರ್ಮು ಭೇಟಿ ಹಿನ್ನೆಲೆಯಲ್ಲಿ ಆಯಿಷ್ ಸಂಸ್ಥೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿ.ಎನ್.ಬಿಂಧುಮಣಿ, ಸುಂದರ್‌ರಾಜ್ ಪರಿಶೀಲನೆ ನಡೆಸಿದರು. ಮತ್ತೊಂದು ಚಿತ್ರದಲ್ಲಿ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಪೊಲೀಸ್ ಆಯುಕ್ತರು ಪರಿಶೀಲನೆ ನಡೆಸುತ್ತಿರುವುದು.

ಮೈಸೂರು, ಆ.29(ಎಂಟಿವೈ)- ರಾಷ್ಟ್ರಪತಿ ದ್ರೌಪದಿ ಮುರ್ಮು, ಸೆ.1 ಹಾಗೂ 2 – ಎರಡು ದಿನಗಳ ಮೈಸೂರು ಪ್ರವಾಸದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಹಾಗೂ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ನೇತೃತ್ವದಲ್ಲಿ ರಾಷ್ಟ್ರಪತಿಗಳು ಸಾಗುವ ಮಾರ್ಗ ಹಾಗೂ ಕಾರ್ಯಕ್ರಮದ ಸ್ಥಳ ಪರಿಶೀಲಿಸಿದರು.

ರಾಷ್ಟ್ರಪತಿಗಳ ವಿಶೇಷ ಭದ್ರತಾ ಸಿಬ್ಬಂದಿ ಮೈಸೂರು ಜಿಲ್ಲಾಡಳಿತಕ್ಕೆ ಸೂಕ್ತ ಭದ್ರತೆಗೆ ಸೂಚನೆ ನೀಡಿ, ಶಿಷ್ಟಾಚಾರ ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಿದೆ. ಹಾಗಾಗಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿ.ಎನ್. ಬಿಂಧುಮಣಿ, ಸುಂದರ್‌ರಾಜ್ ಹಾಗೂ ಆಯಾ ವಿಭಾಗದ ಎಸಿಪಿ, ಸ್ಥಳೀಯ ಇನ್ಸ್‌ಪೆಕ್ಟರ್‌ಗಳೊಂದಿಗೆ ಸ್ಥಳ ಪರಿಶೀಲಿಸಿ, ಕೈಗೊಳ್ಳಬೇಕಾದ ಭದ್ರತಾ ಕ್ರಮ ಕುರಿತಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ರಾಷ್ಟ್ರಪತಿಗಳು, ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಆಗಮಿಸಲಿದ್ದು, ಅಲ್ಲಿ ಶಿಷ್ಟಾಚಾರದಂತೆ ರಾಜ್ಯಪಾಲರು, ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಮಂತ್ರಿ ಹಾಗೂ ಇನ್ನಿತರರಿಗೆ ಅವಕಾಶ ನೀಡಬೇಕಾಗಿದೆ. ಕಾನ್ವೆಯಲ್ಲಿ ಯಾವ ಯಾವ ವಾಹನಗಳಿಗೆ ಅವಕಾಶ ನೀಡಬೇಕೆಂದು ಚರ್ಚಿಸಿ, ಎಲ್ಲಿಯೂ ಲೋಪವಾಗದಂತೆ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳು ಸೂಚಿಸಿದರು.

ವಾಸ್ತವ್ಯ ಹೂಡಲಿರುವ ರ್‍ಯಾಡಿಸನ್ ಬ್ಲೂ ಹೋಟೆಲ್, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಆಯಿಷ್ ಆವರಣ, ಚಾಮುಂಡಿಬೆಟ್ಟ ಅರಮನೆ ಆವರಣ ಹಾಗೂ ಸರ್ಕಾರಿ ಅತಿಥಿ ಗೃಹದಲ್ಲಿ ಭದ್ರತಾ ಕ್ರಮ ಪರಿಶೀಲಿಸಲಾಯಿತು. ಅಲ್ಲದೆ, ರಾಷ್ಟ್ರಪತಿಗಳು ಹಾದು ಹೋಗುವ ಮಾರ್ಗದುದ್ದಕ್ಕೂ ಪರಿಶೀಲನೆ ನಡೆಸಿ, ಕಾನ್ವೆ ವಾಹನಗಳ ತಾಲೀಮು ನಡೆಸಲಾಯಿತು. ರಾಷ್ಟ್ರಪತಿಗಳು ಪಾಲ್ಗೊಳ್ಳುವ ಕಾರ್ಯಕ್ರಮದಲ್ಲಿ ಶಿಸ್ತಿಗೆ ಪ್ರಾಧಾನ್ಯತೆ ನೀಡಬೇಕು. ಕಾನ್ವೆ ಸಾಗುವ ವೇಳೆ ಯಾವುದೇ ವಾಹನ ಅಡ್ಡ ಬರದಂತೆ ನೋಡಿಕೊಳ್ಳಬೇಕು. ರಾಷ್ಟ್ರಪತಿಗಳು ಪಾಲ್ಗೊಳ್ಳುವ ವೇದಿಕೆಯಲ್ಲಿ ಸಚಿವರ ಸಹಾಯಕರು ಸುಳಿಯದಂತೆ ನೋಡಿಕೊಳ್ಳಬೇಕು. ವೇದಿಕೆಯಲ್ಲಿ ಗಣ್ಯರು ಕುಳಿತುಕೊಳ್ಳುವ ಆಸನಗಳ ನಡುವೆ ಅಂತರ ಕಾಯ್ದುಕೊಳ್ಳಬೇಕು. ವೇದಿಕೆಯಿಂದ ರಾಷ್ಟ್ರಪತಿಗಳು ನಿರ್ಗಮಿಸುವವರೆಗೂ ಸಭಿಕರು ಸಭಾಂಗಣದಿಂದ ಹೊರ ಹೋಗದಂತೆ ಸೂಚನೆ ನೀಡುವುದೂ ಸೇರಿದಂತೆ ವಿವಿಧ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದಕ್ಕೆ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.

ಚಾಮುಂಡಿಬೆಟ್ಟಕ್ಕೆ ಭೇಟಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಯಿಷ್ ಮೊದಲ ದಿನ (ಸೆ.1) ಕಾರ್ಯಕ್ರಮ ಮುಗಿದ ನಂತರ ಸಂಜೆ 6.30ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿ ದರ್ಶನ ಪಡೆಯಲಿದ್ದಾರೆ. 2022ರಲ್ಲಿ ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟಿಸಲು ಚಾಮುಂಡಿಬೆಟ್ಟಕ್ಕೆ ಆಗಮಿಸಿದ್ದರು. ಇದೀಗ ಎರಡನೇ ಬಾರಿಗೆ ಚಾಮುಂಡಿ ಬೆಟ್ಟಕ್ಕೆ ಆಗಮಿಸುತ್ತಿದ್ದಾರೆ. ರಾತ್ರಿ 7.30ಕ್ಕೆ ಚಾಮುಂಡಿಬೆಟ್ಟದಿಂದ ನಿರ್ಗಮಿಸಿ, ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಅರಮನೆಯಲ್ಲಿ ಉಪಹಾರ: ಸೆ.1ರಂದು ಮೈಸೂರಲ್ಲೇ ವಾಸ್ತವ್ಯ ಹೂಡಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮರು ದಿನ(ಸೆ.2) ಬೆಳಿಗ್ಗೆ 8.40ಕ್ಕೆ ಮೈಸೂರು ಅರಮನೆಗೆ ಆಗಮಿಸಲಿದ್ದಾರೆ. ಅಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಉಪಹಾರ ಕೂಟ ಏರ್ಪಡಿಸಿದ್ದು, ಕೆಲ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಬಳಿಕ ಅರಮನೆ ವೀಕ್ಷಿಸುವ ಸಾಧ್ಯತೆ ಇದ್ದು, ನಂತರ ಬೆಳಗ್ಗೆ 10 ಗಂಟೆಗೆ ಅರಮನೆಯಿಂದ ನಿರ್ಗಮಿಸಿ, 10.20ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣ ತಲುಪಲಿದ್ದಾರೆ. ಬೆಳಗ್ಗೆ 10.30ಕ್ಕೆ ವಿಶೇಷ ವಿಮಾನದಲ್ಲಿ ಚೆನ್ನೈಗೆ ತೆರಳಲಿದ್ದಾರೆ.

ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧ

ರಾಷ್ಟ್ರಪತಿಗಳ ಭೇಟಿ ಹಿನ್ನೆಲೆಯಲ್ಲಿ ಸೆ.1ರಂದು ಮಧ್ಯಾಹ್ನದ ನಂತರ ಹಾಗೂ ಸೆ.2ರಂದು ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿದೆ.

ದೆಹಲಿಯಿಂದ ನೇರವಾಗಿ ಮೈಸೂರಿಗೆ...

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೆ.1ರಂದು ಮಧ್ಯಾಹ್ನ 12 ಗಂಟೆಗೆ ದೆಹಲಿಯ ರಾಷ್ಟ್ರಪತಿ ಭವನದಿಂದ ಹೊರಡಲಿದ್ದಾರೆ. 12.25ಕ್ಕೆ ದೆಹಲಿಯ ಪಾಲಂ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನತ್ತ ಪ್ರಯಾಣಿಸಲಿದ್ದಾರೆ. 2 ಗಂಟೆ 45 ನಿಮಿಷದ ಪ್ರಯಾಣದ ನಂತರ ಮಧ್ಯಾಹ್ನ 3.10ಕ್ಕೆ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ಮಧ್ಯಾಹ್ನ 3.45ಕ್ಕೆ ಗಂಗೋತ್ರಿ ಬಡಾವಣೆಯಲ್ಲಿರುವ ಆಯಿಷ್‌ನಲ್ಲಿ ಸಂಜೆ 4 ಗಂಟೆಗೆ ಆರಂಭವಾಗುವ ಆಲ್ ಇಂಡಿಯಾ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯ ಡೈಮಂಡ್ ಜ್ಯುಬಿಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಸಂಜೆ 5 ಗಂಟೆಗೆ ಆಯಿಷ್ ಸಂಸ್ಥೆಯಿಂದ ನಿರ್ಗಮಿಸಲಿದ್ದಾರೆ. ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಅಲ್ಪವಿಶ್ರಾಂತಿ ಪಡೆದು, ಸಂಜೆ 6.30ಕ್ಕೆ ಚಾಮುಂಡಿಬೆಟ್ಟಕ್ಕೆ ತೆರಳಿ ದೇವಿ ದರ್ಶನ ಪಡೆಯಲಿದ್ದಾರೆ. ಅಂದು ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ.

ಚಾಮುಂಡಿಬೆಟ್ಟಕ್ಕೂ ನಿರ್ಬಂಧ

ಸೆ.1ರಂದು ರಾಷ್ಟ್ರಪತಿಗಳು ಚಾಮುಂಡಿಬೆಟ್ಟಕ್ಕೂ ಭೇಟಿ ನೀಡುವುದರಿಂದ ಅಂದು ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8.30ರವರೆಗೆ ಚಾಮುಂಡಿಬೆಟ್ಟಕ್ಕೆ ಪ್ರವಾಸಿಗರು, ಸ್ಥಳೀಯರ ವಾಹನ ಸಂಚಾರ ನಿರ್ಬಂಧಿಸಲು ನಿರ್ಧರಿಸಲಾಗಿದೆ.

ಬದಲಿ ವ್ಯವಸ್ಥೆ

ಮೈಸೂರಲ್ಲಿ ರಾಷ್ಟ್ರಪತಿಗಳು ವಾಸ್ತವ್ಯ ಹೂಡಲು ರ್‍ಯಾಡಿಸನ್ ಬ್ಲೂ ಹೋಟೆಲ್‌ನೊಂದಿಗೆ ಪರ್ಯಾಯವಾಗಿ ಸರ್ಕಾರಿ ಅತಿಥಿ ಗೃಹದಲ್ಲಿ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ಸರ್ಕಾರಿ ಅತಿಥಿ ಗೃಹದಲ್ಲಿ ಪರಿಶೀಲನೆ ನಡೆಸಲಾಗಿದ್ದು, ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ.

ಮಾನವ ಹಕ್ಕುಗಳ ಆಯೋಗದ ಅಧಿಕಾರಿಯೆಂದು ರೌಡಿಶೀಟರ್ ಪರಿಚಯ: ಗಿರೀಶ್ ಮಟ್ಟಣ್ಣನವರ್ ವಿರುದ್ಧ ಪ್ರಕರಣ ದಾಖಲು



ಬೆಂಗಳೂರು, ಆ.29– ಸುದ್ದಿಗೋಷ್ಠಿ ಸಂದರ್ಭದಲ್ಲಿ ರೌಡಿಶೀಟರ್ ಒಬ್ಬರನ್ನು ಮಾನವ ಹಕ್ಕುಗಳ ಆಯೋಗದ ಅಧಿಕಾರಿ ಎಂದು ಪರಿಚಯಿಸಿದ ಆರೋಪದ ಮೇಲೆ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಪ್ರಕರಣ ದಾಖಲಿಸಿದೆ. ಮಂಡ್ಯ ಬಿಜೆಪಿ ವಕ್ತಾರ ಸಿ.ಟಿ. ಮಂಜು ನಾಥ್ ಅವರು ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ದಲ್ಲಿ ದೂರು ದಾಖಲಿಸಿದ್ದಾರೆ. ದೂರಿನ ಪ್ರಕಾರ ಮಟ್ಟಣ್ಣನವರ್ ಹಳೆ ಹುಬ್ಬಳ್ಳಿಯ ಶಿವಶಂಕರ್ ಕಾಲೋನಿ ತಾಂಡಾದ ನಿವಾಸಿ ಮದನ್ ಬುಗಾಡಿ ಎಂಬಾತನನ್ನು ಮಾನವ ಹಕ್ಕುಗಳ ಆಯೋಗದ ಅಧಿಕಾರಿ ಎಂದು ಪರಿಚಯಿಸಿದ್ದಾರೆ.

ಆದರೆ ಬುಗಾಡಿ ಹುಬ್ಬಳ್ಳಿಯಲ್ಲಿ ಕುಖ್ಯಾತ ರೌಡಿಶೀಟರ್ ಆಗಿದ್ದು, ವಿವಿಧ ಪೊಲೀಸ್ ಠಾಣೆಗಳಲ್ಲಿ ಆತನ ವಿರುದ್ಧ ಹಲವಾರು ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ. ನಾನು ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದ್ದೇನೆ, ಅವರು ಈಗ ಪ್ರಕರಣ ದಾಖಲಿಸಿದ್ದಾರೆ ಎಂದು ಮಂಜುನಾಥ್ ಹೇಳಿದರು.

ಬುಗಾಡಿ ಕೊಲೆ, ಕೊಲೆ ಯತ್ನ, ಸುಲಿಗೆ, ದರೋಡೆ, ಡಕಾಯಿತಿ ಮತ್ತು ಜಾನುವಾರು ಕಳ್ಳತನದ ಆರೋಪಗಳನ್ನು ಎದುರಿಸುತ್ತಿದ್ದಾರೆ ಎಂದು ಅವರು ಹೇಳಿದರು. ಅಂತಹ ವ್ಯಕ್ತಿಯನ್ನು ಮಾನವ ಹಕ್ಕುಗಳ ಅಧಿಕಾರಿ ಎಂದು ಪರಿಚಯಿಸುವುದರಿಂದ ಮತ್ತಷ್ಟು ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚುತ್ತವೆ ಎಂದು ಅವರು ಆರೋಪಿಸಿದರು. ಮಟ್ಟಣ್ಣನವರ್ ಮತ್ತು ಮದನ್ ಬುಗಡಿ ಇಬ್ಬರ ವಿರುದ್ಧವೂ ಕಠಿಣ ಕಾನೂನು ಕ್ರಮ ಕೈಗೊಳ್ಳುವಂತೆ ಅವರು ಅಧಿಕಾರಿಗಳನ್ನು ಒತ್ತಾಯಿಸಿದ್ದರು.

ಡಿಸಿಎಂ ಡಿಕೆಶಿ ಆಪ್ತರ ಬಿಹಾರ ಯಾತ್ರೆ ಬಳಿಕ ಈಗ ಸಿಎಂ ಸಿದ್ದರಾಮಯ್ಯ ಸರದಿ!

ರಾಹುಲ್ ಗಾಂಧಿ ಮತಾಧಿಕಾರ ಯಾತ್ರೆಯಲ್ಲಿ ಭಾಗಿ



ಬಿಹಾರದ ಗೋಪಾಲ್‌ಗಂಜ್‌ನಲ್ಲಿ ನಡೆದ ವೋಟರ್ ಅಧಿಕಾರ್ ಯಾತ್ರೆಯಲ್ಲಿ ಎಐಸಿಸಿ ನಾಯಕ ರಾಹುಲ್ ಗಾಂಧಿ ಜೊತೆ ಸಿಎಂ ಸಿದ್ದರಾಮಯ್ಯ ಭಾಗವಹಿಸಿದರು.

ಬೆಂಗಳೂರು, ಆ. 29(ಕೆಎಂಶಿ)– ಆಪ್ತರ ಜೊತೆಗೂಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿನಿಂದ ಎರಡು ದಿನಗಳ ಕಾಲ ಬಿಹಾರ ಪ್ರವಾಸ ಕೈಗೊಂಡಿದ್ದಾರೆ. ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಬಿಹಾರದಲ್ಲಿ ನಡೆಸುತ್ತಿರುವ ಮತಾಧಿಕಾರ ಯಾತ್ರೆಯಲ್ಲಿ ಪಾಲ್ಗೊಳ್ಳಲು ಸಚಿವರು ಮತ್ತು ಶಾಸಕರ ಜೊತೆಗೂಡಿ ಪ್ರವಾಸ ತೆರಳಿದ್ದಾರೆ.

ಪಕ್ಷದ ವರಿಷ್ಠರ ಆಪ್ತ ವಲಯದಲ್ಲಿರುವ ಎಐಸಿಸಿ ಪ್ರಧಾನಕಾರ್ಯದರ್ಶಿ ಬಿ.ಕೆ.ಹರಿಪ್ರಸಾದ್, ಸಚಿವರಾದ ಕೆ.ಜೆ.ಜಾರ್ಜ್, ಡಾ.ಜಿ.ಪರಮೇಶ್ವರ್, ಜಮೀರ್ ಅಹಮದ್ ಖಾನ್, ಸತೀಶ್ ಜಾರಕಿಹೊಳಿ ಪ್ರವಾಸದಲ್ಲಿದ್ದಾರೆ.

ವಿಧಾನ ಪರಿಷತ್ ಸದಸ್ಯ ಹಾಗೂ ಪುತ್ರ ಡಾ.ಯತೀಂದ್ರ ಅವರನ್ನೂ ಮುಖ್ಯಮಂತ್ರಿ ಕರೆದುಕೊಂಡು ಹೋಗಿದ್ದಾರೆ.

ಕಳೆದ ವಾರವಷ್ಟೇ ಕೆಪಿಸಿಸಿ ಅಧ್ಯಕ್ಷರಾಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ ಆಪ್ತರೆನಿಸಿಕೊಂಡಿರುವ 20 ಶಾಸಕರನ್ನು ವಿಶೇಷ ವಿಮಾನದಲ್ಲಿ ಬಿಹಾರಕ್ಕೆ ಕರೆದುಕೊಂಡು ಹೋಗಿ, ಎರಡು ದಿನಗಳ ಕಾಲ ರಾಹುಲ್ ಕಾಲ್ನಡಿಗೆ ಜಾಥಾದಲ್ಲಿ ಪಾಲ್ಗೊಂಡಿದ್ದರು.

ನವೆಂಬರ್‌ನಲ್ಲಿ ಪಕ್ಷದಲ್ಲಿ ರಾಜಕೀಯ ಕ್ರಾಂತಿ ಆಗುತ್ತದೆ ಎಂಬ ಸ್ವಪಕ್ಷೀಯರ ಹೇಳಿಕೆ ಹಿನ್ನೆಲೆಯಲ್ಲಿ ನಾಯಕರು ಒಂದಲ್ಲಾ ಒಂದು ರೀತಿ ಬಲಪ್ರದರ್ಶನಕ್ಕೆ ವೇದಿಕೆ ಅಣಿಗೊಳಿಸುತ್ತಿದ್ದಾರೆ.

ಲೇಖನ ಸಮರ್ಪಣೆ



ಶೃಂಗೇರಿ ಶ್ರೀ ಶಾರದಾಪೀಠದ 37ನೇ ಜಗದ್ಗುರು ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂ ಅವರ 11 ನೇ ಚಾತುರ್ಮಾಸ್ಯ ಆಚರಣೆಯ ಸಂಧರ್ಭದಲ್ಲಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಪ್ರತಿಯನ್ನು ಶ್ರೀಗಳಿಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಹಾಗೂ ಅಂಕಣಕಾರ ನಂ.ಶ್ರೀಕಂಠ ಕುಮಾರ್ ಸಮರ್ಪಿಸಿದರು. ಈ ವೇಳೆ ರಾಜ್ಯ ಸಂಘಟನಾ ಕಾರ್ಯದರ್ಶಿ ಜಿ.ಆರ್.ಮೋಹನ್, ಸಹಕಾರ್ಯದರ್ಶಿ ಎಂ.ಆರ್.ಬಾಲಕೃಷ್ಣ ಎನ್.ಶ್ರೀನಿವಾಸ ಪ್ರಸಾದ್, ಕಲ್ಕೆರೆ ನಾಗರಾಜ್, ಶಂಕರನಾರಾಯಣ, ಟಿ.ಎಸ್.ಅರುಣ್ ಕುಮಾರ್, ರಾಜ್ ಕುಮಾರ್ ಮತ್ತಿತರರಿದ್ದರು.

ಕೇಂದ್ರ ಕೃಷಿ ಸಚಿವರಿಂದ ಜಿ.ಟಿ.ದೇವೇಗೌಡರಿಗೆ ಗೌರವ ಸಲ್ಲಿಕೆ



ಸುತ್ತೂರು ಶ್ರೀ ಕ್ಷೇತ್ರದ ಜಗದ್ಗುರು ಡಾ. ಶ್ರೀ.ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ 110ನೇ ಜಯಂತಿ ಕಾರ್ಯಕ್ರಮದಲ್ಲಿ ಕೇಂದ್ರ ಕೃಷಿ, ರೈತರ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರಾದ ಶಿವರಾಜ್ ಸಿಂಗ್ ಚೌಹ್ವಾಣ್ ಅವರು ಸಹಕಾರ ಮಹಾಮಂಡಳದ ಅಧ್ಯಕ್ಷರು, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರನ್ನು ಸನ್ಮಾನಿಸಿ, ಗೌರವಿಸಿದರು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ವಿಧಾನ ಪರಿಷತ್ ಸದಸ್ಯರಾದ ಕೆ.ವಿವೇಕಾನಂದ ಉಪಸ್ಥಿತರಿದ್ದರು.

ದಸರಾ ಕ್ರೀಡಾಕೂಟ; ಚಾಮುಂಡಿವಿಹಾರ ಕ್ರೀಡಾಂಗಣಕ್ಕೆ ಅಭಿವೃದ್ಧಿ ಸ್ಪರ್ಶ

ವಿವಿಧ ಸ್ಪರ್ಧೆಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ



ದಸರಾ ಕ್ರೀಡಾಕೂಟಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣ ಸಜ್ಜಾಗುತ್ತಿರುವುದು.

ಮೈಸೂರು, ಆ.29(ಎಂಕೆ)– ನಾಡಹಬ್ಬ ಮೈಸೂರು ದಸರಾ ಕ್ರೀಡಾಕೂಟಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣ ಸಜ್ಜಾಗುತ್ತಿದ್ದು, ಹೊಸ ಬಾಕ್ಸಿಂಗ್ ರಿಂಗ್, ವಿನೂತನ ಕ್ರೀಡಾ ವಿಜ್ಞಾನ ಕೇಂದ್ರ, ಫುಟ್‌ಬಾಲ್ ಕ್ರೀಡಾಂಗಣ, ಹ್ಯಾಮರ್ ಥ್ರೋ ಕೇಜ್, ಹಾಸ್ಟೆಲ್‌ಗಳ ನವೀಕರಣ ಹಾಗೂ ಸಿಸಿ ರಸ್ತೆ ನಿರ್ಮಾಣದ ಮೂಲಕ ಅಭಿವೃದ್ಧಿ ಸ್ಪರ್ಶ ನೀಡಲಾಗುತ್ತಿದೆ.

ಸೆ.22ರಿಂದ ಸೆ.25ರವರೆಗೆ ನಡೆಯುವ ರಾಜ್ಯಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣದಲ್ಲಿ ಹೊಸ ಕಿಕ್ ಬಾಕ್ಸಿಂಗ್ ರಿಂಗ್ ರೆಡಿಯಾಗಿರಲಿದೆ. ಕರ್ನಾಟಕ ಒಲಿಂಪಿಕ್ ಸಹಯೋಗದಲ್ಲಿ 20 ಲಕ್ಷ ರೂ. ವೆಚ್ಚದಲ್ಲಿ ಬಾಕ್ಸಿಂಗ್ ರಿಂಗ್ ಅಳವಡಿಸಲಾಗಿದೆ. ಹಾಗೆಯೇ 3.5 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಿರುವ ಕ್ರೀಡಾ ವಿಜ್ಞಾನ ಕೇಂದ್ರದ ಸೇವೆಯೂ ಲಭ್ಯವಾಗಲಿದ್ದು, ಕ್ರೀಡಾಪಟುಗಳಿಗೆ ಗಾಯ ನಿವಾರಣೆ, ವಿಶೇಷ ಆಹಾರ ಕ್ರಮ, ದೇಹದಾರ್ಢ್ಯ ಕಾಪಾಡಿಕೊಳ್ಳುವುದು, ಫಿಸಿಯೋಥೆರಪಿ, ಅಮ್ಲಜನಕ ಘಟಕದ ಸೌಲಭ್ಯ, ವ್ಯಾಯಾಮ, ಕ್ರೀಡಾ ಮನೋವಿಜ್ಞಾನ ಮತ್ತಿತರ ಸೇವೆ ನೀಡುವ ಮೂಲಕ ಕ್ರೀಡಾಪಟುಗಳ ಕಾರ್ಯಕ್ಷಮತೆ ಹೆಚ್ಚಿಸಲು ಕ್ರೀಡಾ ವಿಜ್ಞಾನ ಕೇಂದ್ರ ಅನುಕೂಲವಾಗಲಿದೆ.

ದಸರಾ ವೇಳೆಗೆ ಫುಟ್‌ಬಾಲ್ ಕ್ರೀಡಾಂಗಣ ಸಜ್ಜುಗೊಳಿಸಲು ಇಲಾಖೆ ಮುಂದಾಗಿದ್ದು, ಪಕ್ಕದಲ್ಲಿರುವ ಸಾಯಿಬಾಬ ದೇವಸ್ಥಾನದ ಬಳಿ ಗಿಡಗಳನ್ನು ತೆರವುಗೊಳಿಸಲು ಅರಣ್ಯ ಇಲಾಖೆ ಅನುಮತಿಗೆ ಬರೆಯಲಾಗಿದೆ. ಅವುಗಳನ್ನು ತೆರವುಗೊಳಿಸಿ ಇಲ್ಲಿ ಫುಟ್‌ಬಾಲ್ ಜೊತೆಗೆ ಕಬಡ್ಡಿ, ಖೋಖೋ, ಹ್ಯಾಂಡ್‌ಬಾಲ್ ಕ್ರೀಡೆಗಳನ್ನು ಆಯೋಜಿಸಲು ಚಿಂತಿಸಲಾಗುತ್ತಿದೆ.

ಹ್ಯಾಮರ್ ಥ್ರೋ ಕೇಜ್ ಬದಲಾವಣೆ: ಅಥ್ಲೆಟಿಕ್ ಗ್ರೌಂಡ್‌ನಲ್ಲಿರುವ ಹಳೆಯ ಹ್ಯಾಮರ್ ಥ್ರೋ ಕೇಜ್ ಬದಲಾವಣೆ ಕಾರ್ಯವೂ ಚುರುಕಾಗಿ ನಡೆಯುತ್ತಿದ್ದು, ದಸರಾ ವೇಳೆಗೆ ಈ ಹೊಸ ಹ್ಯಾಮರ್ ಥ್ರೋ ಕೇಜ್ ಸೌಲಭ್ಯ ಕ್ರೀಡಾಪಟುಗಳಿಗೆ ಲಭ್ಯವಾಗಲಿದೆ.

“ಹಲವು ಹೊಸ ಸೌಲಭ್ಯಗಳೊಂದಿಗೆ ಈ ವರ್ಷದ ದಸರಾ ಕ್ರೀಡಾಕೂಟ ಆಯೋಜನೆಗೆ ಸಿದ್ಧತೆಗಳನ್ನು ನಡೆಸಲಾಗುತ್ತಿದೆ. ಹೊಸ ಬಾಕ್ಸಿಂಗ್ ರಿಂಗ್, ವಿನೂತನ ಕ್ರೀಡಾ ವಿಜ್ಞಾನ ಕೇಂದ್ರದಂತಹ ನೂತನ ಸೇವೆಗಳು ಲಭ್ಯವಾಗಲಿವೆ.
–ಭಾಸ್ಕರ್ ನಾಯಕ್.

ಆಧುನಿಕ ಸ್ಪರ್ಶ: ಚಾಮುಂಡಿ ವಿಹಾರ ಕ್ರೀಡಾಂಗಣದ ಆವರಣದಲ್ಲಿ ಅತ್ಯಾಧುನಿಕ ಭೋಜನಾಲಯ ಸಿದ್ಧವಾಗಿದ್ದು, ಸುಸಜ್ಜಿತ ಅಡುಗೆ ಕೋಣೆ, ಹಾಸ್ಟೆಲ್‌ಗಳ ನವೀಕರಣ, ಕ್ರೀಡಾಂಗಣದ ಸುತ್ತಲ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಇಡೀ ಕ್ರೀಡಾ ಸಮುಚ್ಚಯಕ್ಕೆ ಆಧುನಿಕ ಸ್ಪರ್ಶ ನೀಡಲಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸೆ.10ರೊಳಗೆ ಪೂರ್ಣ: ರಾಜ್ಯಮಟ್ಟದ ದಸರಾ ಕ್ರೀಡಾಕೂಟ ಹಿನ್ನಲೆಯಲ್ಲಿ ಸೆ.10 ರೊಳಗೆ ತಾಲೂಕು, ಜಿಲ್ಲಾ, ವಿಭಾಗ ಮಟ್ಟದ ದಸರಾ ಕ್ರೀಡಾಕೂಟ ಪೂರ್ಣಗೊಳಿಸಲು ನಿರ್ಧರಿದೆ ಎಂದು ಮಾಹಿತಿ ನೀಡಿದರು.

ದೇಶ - ವಿದೇಶ

ಫೋನ್ ಕರೆ ವಿವಾದ: ಥಾಯ್ಲೆಂಡ್ ಪ್ರಧಾನಿ ಪೆಟೊಂತಾರ್ನ್ ವಜಾಗೊಳಿಸಿದ ಕೋರ್ಟ್



ಬ್ಯಾಂಕಾಕ್: ಕಾಂಬೋಡಿಯಾದೊಂದಿಗಿನ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಥೈಲ್ಯಾಂಡ್ ಸಾಂವಿಧಾನಿಕ ನ್ಯಾಯಾಲಯ ಶುಕ್ರವಾರ ಥಾಯ್ಲೆಂಡ್ ಪ್ರಧಾನಿ ಪೆಟೊಂತಾರ್ನ್ ಶಿನವಾತ್ರ ಮತ್ತು ಅವರ ಸಂಪುಟವನ್ನು ವಜಾಗೊಳಿಸಿದೆ.

ಜೂನ್‌ನಲ್ಲಿ ಕಾಂಬೋಡಿಯಾ ಮಾಜಿ ಪ್ರಧಾನಿ ಹನ್ ಸೇನ್ ಅವರೊಂದಿಗೆ ದೂರವಾಣಿ ಮೂಲಕ ನಡೆಸಿದ ಮಾತುಕತೆಯ ಆಡಿಯೋ ಸೋರಿಕೆಯಾದ ನಂತರ ಬಿಲಿಯನೇರ್ ಮಾಜಿ ಪ್ರಧಾನಿ ಥಾಕ್ಸಿನ್ ಶಿನವಾತ್ರ ಅವರ ಪುತ್ರಿ ಪೆಟೊಂತಾರ್ನ್ ಅವರನ್ನು ಕಳೆದ ತಿಂಗಳು ಅಧಿಕಾರದಿಂದ ಅಮಾನತುಗೊಳಿಸಲಾಗಿತ್ತು.

ಇದೀಗ ಒಂಬತ್ತು ನ್ಯಾಯಾಧೀಶರ ಸಮಿತಿಯು, ಪೆಟೊಂತಾರ್ನ್ ಅವರು ಪ್ರಧಾನಿಗೆ ಅಗತ್ಯವಿರುವ ನೈತಿಕ ಮಾನದಂಡಗಳನ್ನು ಎತ್ತಿಹಿಡಿದಿಲ್ಲ ಎಂದು ತೀರ್ಪು ನೀಡುವ ಮೂಲಕ ಅವರನ್ನು ಪ್ರಧಾನಿ ಹುದ್ದೆಯಿಂದ ವಜಾಗೊಳಿಸಿದೆ. ಕಾಂಬೋಡಿಯಾದೊಂದಿಗಿನ ಗಡಿ ಬಿಕ್ಕಟ್ಟಿನ ವೇಳೆ ಪೆಟೊಂತಾರ್ನ್ ಶಿನವತ್ರ ಪ್ರಧಾನಿ ಸ್ಥಾನದ ನೈತಿಕತೆಯನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಕನ್ಸರ್ವೇಟಿವ್ ಸೆನೆಟರ್‌ಗಳ ಗುಂಪೊಂದು ದಾಖಲಿಸಿದ್ದ ದೂರಿನ ವಿಚಾರಣೆ ನಡೆಸಿದ ಸಾಂವಿಧಾನಿಕ ನ್ಯಾಯಾಲಯ, ಪ್ರಧಾನಿ ಹುದ್ದೆಯಿಂದ ಅವರನ್ನು ವಜಾಗೊಳಿಸಿ ಆದೇಶಿಸಿದೆ.

ರಸ್ತೆಯಲ್ಲಿ ಮಚ್ಚು ತೋರಿಸಿ ಹುಚ್ಚಾಟ: ಸಿಖ್ ವ್ಯಕ್ತಿ ಅಮೆರಿಕ ಪೊಲೀಸ್ ಗುಂಡೇಟಿಗೆ ಬಲಿ

ಲಾಸ್ ಏಂಜಲೀಸ್: ಅಮೆರಿಕದಲ್ಲಿ ರಸ್ತೆಯಲ್ಲಿ ಮಚ್ಚು ತೋರಿಸಿ ಹುಚ್ಚಾಟ ಮೆರೆದಿದ್ದ ಸಿಖ್ ವ್ಯಕ್ತಿಯನ್ನು ಪೊಲೀಸರು ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದ್ದಾರೆ.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ಈ ಘಟನೆ ನಡೆದಿದ್ದು, ಪೊಲೀಸ್ ಎನ್‌ಕೌಂಟರ್‌ನಲ್ಲಿ ಹತ್ಯೆಗೀಡಾದ ವ್ಯಕ್ತಿಯನ್ನು 35 ವರ್ಷದ ಗುರುಪ್ರೀತ್ ಸಿಂಗ್ ಎಂದು ಗುರುತಿಸಲಾಗಿದೆ. ಈತ ರಸ್ತೆಯಲ್ಲಿ ಸಿಖ್ ಸಮುದಾಯದ ಸಾಂಪ್ರದಾಯಿಕ ಸಮರ ಕಲೆಯಾದ ಗಟ್ಕಾವನ್ನು ಪ್ರದರ್ಶಿಸುತ್ತಿದ್ದ ಎಂದು ಹೇಳಲಾಗಿದೆಯಾದರೂ ಕೆಲವೇ ಕ್ಷಣಗಳಲ್ಲಿ ಆತ ಮಚ್ಚನ್ನು ಹಿಡಿದು ಹತ್ತಿರದ ಜನರನ್ನು ಬೆದರಿಸುತ್ತಿದ್ದ. ಅಲ್ಲದೆ ಮಾರ್ಗದಲ್ಲಿ ಬಂದ ಕಾರುಗಳ ಮೇಲೆ ಹಲ್ಲೆ ಮಾಡುತ್ತಿದ್ದ ಎಂದು ಆರೋಪಿಸಲಾಗಿದೆ.

ಗುರುಪ್ರೀತ್ ಸಿಂಗ್ ಹುಚ್ಚಾಟ ನೋಡಿದ ಸ್ಥಳೀಯರು 911 ಗೆ ಅಂದರೆ ಪೊಲೀಸರಿಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕಾಗಮಿಸಿದ ಪೊಲೀಸರು ಗುರುಪ್ರೀತ್ ಸಿಂಗ್ ಹುಚ್ಚಾಟ ನಿಲ್ಲಿಸುವಂತೆ ಸೂಚಿಸಿದ್ದಾರೆ. ಆದರೆ ಗುರುಪ್ರೀತ್ ಸಿಂಗ್ ಅವರ ಮಾತನ್ನು ಕೇಳದೇ ಮಚ್ಚಿನ ಸಾಹಸ ಮುಂದುವರೆಸಿದ್ದರು. ಈ ವೇಳೆ ಪೊಲೀಸರು ಆತನ ಮೇಲೆ ಗುಂಡು ಹಾರಿಸಿದ್ದಾರೆ. ಈ ಕುರಿತ ವಿಡಿಯೋವನ್ನು ಪೊಲೀಸರೇ ತಮ್ಮ LAPD ಯೂಟ್ಯೂಬ್ ಚಾನೆಲ್ ನಲ್ಲಿ ಬಿಡುಗಡೆ ಮಾಡಿದ್ದಾರೆ.

ಜಂಟಿಯಾಗಿ ಚಂದ್ರಯಾನ-5 ಮಿಷನ್: ಒಪ್ಪಂದಕ್ಕೆ ಭಾರತ-ಜಪಾನ್ ಸಹಿ



ಟೋಕಿಯೋ: ಭಾರತ ಮತ್ತು ಜಪಾನ್ ಶನಿವಾರ ಜಂಟಿಯಾಗಿ ಚಂದ್ರಯಾನ-5 ಮಿಷನ್ ಅನುಷ್ಠಾನ ಒಪ್ಪಂದಕ್ಕೆ ಸಹಿ ಹಾಕಿವೆ. ಇದು ಉಭಯ ದೇಶಗಳ ಬಾಹ್ಯಾಕಾಶ ಸಂಸ್ಥೆಗಳು ಚಂದ್ರನ ಧ್ರುವ ಪ್ರದೇಶದ ಜಂಟಿ ಪರಿಶೋಧನೆಯಾಗಿದೆ. ಮುಂಬರುವ ಚಂದ್ರಯಾನ-5 ಕಾರ್ಯಾಚರಣೆಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತು ಜಪಾನ್ ಏರೋಸ್ಪೇಸ್ ಪರಿಶೋಧನಾ ಸಂಸ್ಥೆ(JAXA) ಜಂಟಿ ಅನುಷ್ಠಾನ ಒಪ್ಪಂದಕ್ಕೆ ಸಹಿ ಹಾಕಲಾಯಿತು ಎಂದು ಜಪಾನ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಿದ್ದಾರೆ. ಟೋಕಿಯೋದಲ್ಲಿ ಜಪಾನ್ ಪ್ರಧಾನಿ ಶಿಗೇರು ಇಶಿಬಾ ಅವರೊಂದಿಗೆ ಮಾತುಕತೆಯ ನಂತರ ಜಂಟಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ, ಏಷ್ಯಾದ ಎರಡು ಪ್ರಜಾಪ್ರಭುತ್ವ ದೇಶಗಳ ನಡುವೆ ಬೆಳೆಯುತ್ತಿರುವ ಕಾರ್ಯತಂತ್ರ ಮತ್ತು ವೈಜ್ಞಾನಿಕ ಪಾಲುದಾರಿಕೆಯನ್ನು ಎತ್ತಿ ತೋರಿಸಿದರು. ಚಂದ್ರಯಾನ-5 ಮಿಷನ್ ಚಂದ್ರನ ದಕ್ಷಿಣ ಧ್ರುವದಲ್ಲಿ ಶಾಶ್ವತವಾಗಿ ನೆರಳಿನ ಪ್ರದೇಶದ(PSR) ಸುತ್ತಮುತ್ತಲಿನ ಚಂದ್ರನ ನೀರು ಸೇರಿದಂತೆ ಚಂದ್ರನ ಬಾಷ್ಪಶೀಲ ವಸ್ತುಗಳನ್ನು ಅಧ್ಯಯನ ಮಾಡುವ ಗುರಿ ಹೊಂದಿದೆ.

ಬಿಹಾರದಲ್ಲಿ ಬಿಜೆಪಿ-ಕಾಂಗ್ರೆಸ್ ನಡುವೆ ಭಾರೀ ಘರ್ಷಣೆ; ರಸ್ತೆ ಮಧ್ಯೆಯೇ ಭೀಕರ ಹೊಡೆದಾಟ



ಪಾಟ್ನಾ: ಬಿಹಾರದಲ್ಲಿ ಚುನಾವಣಾ ರಣಕಣ ದಿನದಿಂದ ದಿನಕ್ಕೆ ಬಿರುಸು ಪಡೆಯುತ್ತಿದ್ದು, ನಿನ್ನೆ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿದ್ದ 'ಮತದಾರ ಅಧಿಕಾರ ಯಾತ್ರೆ'ಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕರು ಅವಾಚ್ಯ ಶಬ್ದಗಳನ್ನು ಬಳಸಿದ್ದಾರೆ ಎಂಬ ಆರೋಪದ ಮೇಲೆ ಭಾರೀ ವಿವಾದ ಉಂಟಾಗಿತ್ತು. ಇದೀಗ ಇಂದು ಬಿಜೆಪಿ ಕಾಂಗ್ರೆಸ್ ಮಧ್ಯೆ ಹೊಡೆದಾಟವೇ ನಡೆದಿದೆ.

ಪ್ರಧಾನಿ ಮೋದಿಯವರ ಮೇಲೆ ನಿಂದನೀಯ ಪದಗಳ ಬಳಕೆಯನ್ನು ವಿರೋಧಿಸಿ ಬಿಜೆಪಿ ಇಂದು ಪಾಟ್ನಾದ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿತ್ತು. ಈ ಪ್ರತಿಭಟನಾ ಮೆರವಣಿಗೆ ಬಿಹಾರ ಕಾಂಗ್ರೆಸ್ ರಾಜ್ಯ ಕಚೇರಿ ಸದಾಕತ್ ಆಶ್ರಮದ ಮೂಲಕ ಹಾದುಹೋದ ಸಂದರ್ಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರ ನಡುವೆ ಘರ್ಷಣೆ ಉಂಟಾಗಿದೆ. ನಂತರ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಕಲ್ಲು ತೂರಾಟ ನಡೆದಿದೆ. ಅಷ್ಟೇ ಅಲ್ಲದೇ ಪರಸ್ಪರ ಎರಡೂ ಪಕ್ಷಗಳ ಕಾರ್ಯಕರ್ತರು ಕೋಲಿನಿಂದ ಹೊಡೆದಾಡಿಕೊಂಡಿದ್ದಾರೆ. ಸದ್ಯ ಈ ಹೊಡೆದಾಟದ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ರಾಮ ಸೇತು: ಕೇಂದ್ರದಿಂದ ಪ್ರತಿಕ್ರಿಯೆ ಕೇಳಿದ ಸುಪ್ರೀಂಕೋರ್ಟ್

ನವದೆಹಲಿ: ರಾಮ ಸೇತುಗೆ ಸಂಬಂಧಿಸಿದಂತೆ ಮಾಜಿ ಸಂಸದ ಸುಬ್ರಮಣಿಯನ್ ಸ್ವಾಮಿ ಅವರು ಸಲ್ಲಿಸಿರುವ ಅರ್ಜಿಗೆ ಸುಪ್ರೀಂ ಕೋರ್ಟ್ ಕೇಂದ್ರದಿಂದ ಪ್ರತಿಕ್ರಿಯೆ ಕೇಳಿದೆ.

ರಾಮ ಸೇತುವನ್ನು ರಾಷ್ಟ್ರೀಯ ಸ್ಮಾರಕವೆಂದು ಘೋಷಿಸಲು ತನ್ನ ಪ್ರಾತಿನಿಧ್ಯವನ್ನು ತ್ವರಿತವಾಗಿ ನಿರ್ಧರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಸುಬ್ರಮಣಿಯನ್ ಸ್ವಾಮಿ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ತಮಿಳುನಾಡಿನ ಪಂಬನ್ ದ್ವೀಪದಿಂದ ಶ್ರೀಲಂಕಾದ ವಾಯವ್ಯ ಕರಾವಳಿಯ ಮನ್ನಾರ್ ದ್ವೀಪಕ್ಕೆ ಸಂಪರ್ಕಿಸುವ ಸುಣ್ಣದ ಕಲ್ಲಿನ ಸೇತುವೆಯೇ ರಾಮ ಸೇತು ಎನ್ನಲಾಗುತ್ತದೆ. ಇದಕ್ಕೆ ಅಂಡಮನ್ ಸೇತುವೆ ಎನ್ನುವ ಇನ್ನೊಂದು ಹೆಸರೂ ಇದೆ.

ನ್ಯಾಯಮೂರ್ತಿಗಳಾದ ವಿಕ್ರಂನಾಥ್ ಮತ್ತು ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಪೀಠ ಈ ಅರ್ಜಿಯ ವಿಚಾರಣೆಗೆ ಒಪ್ಪಿಗೆ ಸೂಚಿಸಿ, ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ. ಅಲ್ಲದೇ 4 ವಾರಗಳ ಬಳಿಕ ವಿಚಾರಣೆಯನ್ನು ಮತ್ತೆ ನಡೆಸುವುದಾಗಿ ಹೇಳಿದೆ.

ರಾಮ ಸೇತುವನ್ನು ರಾಷ್ಟ್ರೀಯ ಪಾರಂಪರಿಕ ಸ್ಮಾರಕವಾಗಿ ಘೋಷಿಸುವ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ 2023ರ ಜ. 19ರಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಈ ಸಂಬಂಧ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಸುಬ್ರಮಣಿಯನ್ ಸ್ವಾಮಿ ತಮ್ಮ ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ.

ವಯನಾಡು ಸಂಪರ್ಕ ರಸ್ತೆಯಲ್ಲಿ ಭೂ ಕುಸಿತ

ವಾಹನ ಸಂಚಾರಕ್ಕೆ ಅಡ್ಡಿ, ಬದಲಿ ಮಾರ್ಗ ವ್ಯವಸ್ಥೆ

ಮಡಿಕೇರಿ,ಆ.29– ಕೇರಳ ರಾಜ್ಯ ವಯನಾಡು ಜಿಲ್ಲೆಯನ್ನು ಸಂಪರ್ಕಿಸುವ ರಸ್ತೆಯ ತಮರಶೇರಿ ಘಾಟ್ ಬಳಿ ಭೂ ಕುಸಿತ ಉಂಟಾಗಿರುವ ಹಿನ್ನೆಲೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗಿದೆ.

ಈ ಹಿನ್ನೆಲೆಯಲ್ಲಿ ಕೊಡಗು ಗಡಿ ಭಾಗವಾದ ಕುಟ್ಟ ಮೂಲಕ ವಯನಾಡು ಜಿಲ್ಲೆಗೆ ಗುಡಲೂರು ಮಾರ್ಗವಾಗಿ ಸಂಚರಿಸುವ ವಾಹನಗಳನ್ನು ಬದಲಿ ಮಾರ್ಗವಾದ ಗೋಣಿಕೊಪ್ಪ-ಕುಟುಮೊಳೆ-ಇರಿಟ್ಟಿ ಮಾರ್ಗದ ಮೂಲಕ ಸಂಚರಿಸಲು ಅನುವು ಮಾಡುವಂತೆ ವಯನಾಡು ಜಿಲ್ಲಾಧಿಕಾರಿಗಳು ಕೊಡಗು ಜಿಲ್ಲಾಡಳಿತವನ್ನು ಕೋರಿದ್ದಾರೆ.

ಈ ಕಾರಣದಿಂದ ಗುಡಲೂರು ಮಾರ್ಗದಲ್ಲಿ ವಾಹನ ಸಂಚಾರ ಸುಗಮವಾಗುವವರೆಗೆ ಕೊಡಗು ಜಿಲ್ಲೆಯ ಕುಟ್ಟ ಮೂಲಕ ತಮರಶೇರಿ ಘಾಟ್ ಕಡೆಗೆ ತೆರಳುವ ಸಾರ್ವಜನಿಕರು ಮಾಕುಟ್ಟ ರಸ್ತೆಯನ್ನು ಬಳಸಲು ಕೊಡಗು ಜಿಲ್ಲಾಡಳಿತ ಸಲಹೆ ನೀಡಿದೆ.

ಕಕ್ಕಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಸಿಂಹ ಮಾಸದ ಆರಾಧನೆ ಸಂಪನ್ನ

ನಾಪೋಕ್ಲು: ಸಮೀಪದ ಕಕ್ಕಬೆಯ ಪಾಡಿ ಇಗ್ಗುತ್ತಪ್ಪ ದೇವಾಲಯದಲ್ಲಿ ಸಿಂಹ ಮಾಸದ ಆರಾಧನೆ ಶ್ರದ್ಧಾಭಕ್ತಿಯಿಂದ ಸಂಪನ್ನಗೊಂಡಿತು. ಸಂಪ್ರದಾಯದಂತೆ ಬೆಳಿಗ್ಗೆ ದೇವತಕ್ಕರು ಹಾಗೂ ಇತರ ತಕ್ಕರ ಮನೆಗಳಿಂದ ಪಲ್ ಬೈವಾಡು ಆಗಮಿಸಿತು. ಅಯ್ಯಪ್ಪ ಕಟ್ಟೆಯ ಮುಂದೆ ದೇವತಕ್ಕರು ಹಾಗೂ ಊರು ನಾಡಿನ ತಕ್ಕರು ಸೇರಿ ನಡೆಸುವ ಪ್ರಾರ್ಥನೆಯೊಂದಿಗೆ ಸಿಂಹ ಮಾಸದ ಆರಾಧನೆಗೆ ಚಾಲನೆ ನೀಡಲಾಯಿತು.

ತುಲಾಭಾರ ಸೇವೆ ಮಹಾಪೂಜೆ ನಿತ್ಯ ಪೂಜೆಯ ಬಳಿಕ ಶ್ರೀ ಇಗ್ಗುತ್ತಪ್ಪ ದೇವರ ಉತ್ಸವ ಮೂರ್ತಿ ದಿವ್ಯ ಅಲಂಕೃತ ಭೂಷಿತವಾಗಿ ದೇವಸ್ಥಾನದ ಪ್ರಾಂಗಣದಲ್ಲಿ ಭಕ್ತರಿಗೆ ದರ್ಶನ ನೀಡಿದ್ದಲ್ಲದೆ ನಿತ್ಯ ಬಲಿಯೊಂದಿಗೆ ಉತ್ಸವ ಸಂಪನ್ನಗೊಂಡಿತು.

ದೇವಾಲಯದ ಭಕ್ತ ಜನ ಸಂಘದ ಅಧ್ಯಕ್ಷ ಪರದಂಡ ಸುಬ್ರಮಣಿ ಕಾವೇರಪ್ಪ ಕೊಡಗಿನ ಜನತೆಯ ಶ್ರೇಯೋಭಿವೃದ್ಧಿಗೆ ನಾಡಿನ ಸಮೃದ್ಧಿಗೆ ಹಾಗೂ ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸಿ ಹರಸುವಂತೆ ಇಗ್ಗುತ್ತಪ್ಪನಲ್ಲಿ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು.

ಮಡಿಕೇರಿ ದಸರಾಗೆ ಅನುದಾನಕ್ಕಾಗಿ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿ ಭೇಟಿ



ಮಡಿಕೇರಿ ಜನೋತ್ಸವ ದಸರಾದ ಬಗ್ಗೆ ಶಾಸಕ ಡಾ.ಮಂತರ್ ಗೌಡ ಅಧಿಕಾರಿಗಳ ಸಭೆ ನಡೆಸಿದರು.

ಮಡಿಕೇರಿ, ಆ.29– ಮಡಿಕೇರಿ ಜನೋತ್ಸವ ದಸರಾವನ್ನು ಸಂಭ್ರಮ, ಸಡಗರ, ಸುರಕ್ಷತೆ ಹಾಗೂ ಸ್ವಚ್ಛತೆಯಿಂದ ಆಚರಿಸಲು ಶುಕ್ರವಾರ ನಡೆದ ಸಭೆಯಲ್ಲಿ ತೀರ್ಮಾನಿಸಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶಾಸಕರಾದ ಡಾ.ಮಂತರ್ ಗೌಡ, ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಜಿಲ್ಲಾಧಿಕಾರಿ ವೆಂಕಟ್ ರಾಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಉಪ ಪೊಲೀಸ್ ವರಿಷ್ಠಾಧಿಕಾರಿ ದಿನೇಶ್ ಕುಮಾರ್, ದಸರಾ ಸಮಿತಿ ಕಾರ್ಯಾಧ್ಯಕ್ಷರಾದ ಅರುಣ್ ಕುಮಾರ್ ಇತರರ ಉಪಸ್ಥಿತಿಯಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಮಾತನಾಡಿದ ಶಾಸಕ ಡಾ.ಮಂತರ್ ಗೌಡ ಸಂಪ್ರದಾಯದಂತೆ ಹಿಂದಿನಿಂದ ನಡೆದುಕೊಂಡು ಬಂದಿರುವ ಮಡಿಕೇರಿ ದಸರಾವನ್ನು ವ್ಯವಸ್ಥಿತವಾಗಿ ಆಚರಿಸುವಂತಾಗಬೇಕು. ಸುರಕ್ಷತೆಗೆ ಒತ್ತು ನೀಡಬೇಕು. ಪ್ರತೀ ಮಂಟಪದಲ್ಲಿ ಪೊಲೀಸರನ್ನು ನಿಯೋಜಿಸಬೇಕು. ಕರಗ ಹಾಗೂ ದಶಮಂಟಪಗಳು ಸಾಗುವ ಮಾರ್ಗದ ಗುಂಡಿ ಮುಚ್ಚುವ ಕಾರ್ಯವಾಗಬೇಕು ಎಂದರು.

ಹಾಗೆ ಜಿಲ್ಲೆಗೆ ಸಂಬಂಧ ಮುಖ್ಯಮಂತ್ರಿ, ಕನ್ನಡ ಮತ್ತು ಸಂಸ್ಕೃತಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಸೆಪ್ಟೆಂಬರ್ ಮೊದಲ ವಾರದಲ್ಲಿ ಭೇಟಿ ಮಾಡಲು ನಿಯೋಗ ತೆರಳಲಾಗುವುದು ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿದ್ಯುತ್ ಮಾರ್ಗ ಸರಿಪಡಿಸುವುದು ಹಾಗೂ ಬೀಳುವ ಮರಗಳಿದ್ದಲ್ಲಿ ತೆರವುಗೊಳಿಸುವುದು ಮತ್ತಿತರ ಸಂಬಂಧ ಅರಣ್ಯ ಮತ್ತು ಸೆಸ್ಕ್ ಇಲಾಖೆಯವರು ಅಗತ್ಯ ಕ್ರಮಕೈಗೊಳ್ಳುವಂತೆ ಶಾಸಕರು ಸೂಚಿಸಿದರು. ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಹಾಗೂ ಅಧಿಕಾರಿಗಳ ಉಪಸ್ಥಿತಿಯಲ್ಲಿ ಮತ್ತೊಂದು ಸಭೆ ನಡೆಸಲಾಗುವುದು ಎಂದು ಅವರು ಹೇಳಿದರು.

ಮಡಿಕೇರಿ ದಸರಾವು ವಿಶಿಷ್ಟ ಹಾಗೂ ವಿಭಿನ್ನವಾಗಿದ್ದು, ಜನರ ಸುರಕ್ಷತೆ, ವಾಹನ ನಿಲುಗಡೆ ಮತ್ತಿತರ ಸಂಬಂಧ ಅಗತ್ಯ ಕ್ರಮಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಎಲ್ಲರೂ ಸಹಕರಿಸಬೇಕು ಎಂದು ಡಾ.ಮಂತರ್ ಗೌಡ ನುಡಿದರು.

ಉದ್ಯೋಗ ಸಮಸ್ಯೆ ನಿವಾರಣೆಗೆ ಆಗ್ರಹಿಸಿ ಮಡಿಕೇರಿಯಲ್ಲಿ ಪ್ರತಿಭಟನೆ

ಮಡಿಕೇರಿ,ಆ.29– ಕೊಡಗು ಜಿಲ್ಲೆಯ ಸರಕಾರಿ ಕಚೇರಿಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಮೂಲಕ ಯುವ ಸಮೂಹವನ್ನು ನಿರುದ್ಯೋಗ ಸಮಸ್ಯೆಯಿಂದ ಮುಕ್ತಿ ಕಾಣಿಸುವಂತೆ ಆಗ್ರಹಿಸಿ ಭಾರತ ಪ್ರಜಾಸತ್ತಾತ್ಮಕ ಯುವ ಫೆಡರೇಷನ್‌ನ ಕೊಡಗು ಜಿಲ್ಲಾ ಸಮಿತಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿದ ಸಮಿತಿಯ ಪ್ರಮುಖರು ಹಾಗೂ ಸದಸ್ಯರು ಉದ್ಯೋಗ ಬೇಕೆಂದು ಘೋಷಣೆಗಳನ್ನು ಕೂಗಿ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದರು.

ಸಮಿತಿಯ ಜಿಲ್ಲಾಧ್ಯಕ್ಷ ಹೆಚ್.ಆರ್.ರಾಜಪ್ಪಾಜಿ ಮಾತನಾಡಿ, ಶಿಕ್ಷಣ ಮುಗಿಸಿರುವ ಯುವ ಸಮೂಹ ಉದ್ಯೋಗಕ್ಕಾಗಿ ಪರಿತಪಿಸುತ್ತಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿಕೊಂಡವರು ಸರಕಾರಿ ಉದ್ಯೋಗಕ್ಕಾಗಿ ಕಾಯುತ್ತಿದ್ದಾರೆ. ವರ್ಷಕ್ಕೆ ಸುಮಾರು 2 ಕೋಟಿಯಷ್ಟು ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಭರವಸೆ ನೀಡಿದ್ದ ಸರಕಾರ ವರ್ಷಕ್ಕೆ 1 ಲಕ್ಷ ಉದ್ಯೋಗವನ್ನು ಕೂಡ ನೀಡುತ್ತಿಲ್ಲ ಎಂದು ಟೀಕಿಸಿದರು. ಉದ್ಯೋಗ ಸೃಷ್ಟಿ ಮಾಡುವ ಯಾವುದೇ ಹೊಸ ಯೋಜನೆಗಳನ್ನು ಸರಕಾರ ಯುವ ಜನರಿಗಾಗಿ ರೂಪಿಸಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಿ ಕಚೇರಿಗಳಲ್ಲಿ ಗುತ್ತಿಗೆ ಆಧಾರದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿ ಯುವ ನಿರುದ್ಯೋಗಿಗಳನ್ನು ವಂಚಿಸಲಾಗುತ್ತಿದೆ ಎಂದು ಆರೋಪಿಸಿದರು.

ಸರಕಾರಿ ಕಚೇರಿಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಡಿವೈಎಫ್‌ಐ ಸಂಘಟನೆ ಜಿಲ್ಲೆಯಲ್ಲಿ ಅನೇಕ ಹೋರಾಟಗಳನ್ನು ನಡೆಸಿದೆ. ಇದ್ಯಾವುದಕ್ಕೂ ಯಾವುದೇ ಸ್ಪಂದನೆ ದೊರೆತ್ತಿಲ್ಲ. ಇನ್ನು ಮುಂದಾದರೂ ಸರಕಾರ ಎಚ್ಚೆತ್ತುಕೊಂಡು ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ನೇಮಕಾತಿಗಳನ್ನು ನಿಲ್ಲಿಸಿ ಜಿಲ್ಲೆಯ ನಿರುದ್ಯೋಗಿ ಯುವಕ ಯುವತಿಯರಿಗೆ ಖಾಯಂ ಸರಕಾರಿ ಹುದ್ದೆ ನೀಡಲು ಕ್ರಮ ಕೈಗೊಳ್ಳಲಿ ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಡಿವೈಎಫ್‌ಐ ಕಾರ್ಯದರ್ಶಿ ವೈ.ಆರ್.ಜ್ಯೋತಿ ಕೃಷ್ಣ, ಖಜಾಂಚಿ ಎ.ಹೆಚ್.ಸಾದಿಕ್, ಪದಾಧಿಕಾರಿಗಳಾದ ಅನುಷ್, ಮಣಿ, ರಮೇಶ್ ಮತ್ತಿತರರು ಪಾಲ್ಗೊಂಡಿದ್ದರು.



ಭಾರತ ಪ್ರಜಾಸತ್ತಾತ್ಮಕ ಯುವ ಫೆಡರೇಷನ್‌ನ ಕೊಡಗು ಜಿಲ್ಲಾ ಸಮಿತಿ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ಎಚ್‌ಐವಿ, ಏಡ್ಸ್ ಅರಿವು ಆಂದೋಲನ ಮ್ಯಾರಥಾನ್



2025–26ನೇ ಸಾಲಿನ ಯುವಜನೋತ್ಸವ ಎಚ್.ಐ.ವಿ ಏಡ್ಸ್ ಅರಿವು ಆಂದೋಲನ–ಕಾರ್ಯಕ್ರಮದ ಅಂಗವಾಗಿ (ರೆಡ್ ರಿಬ್ಬನ್ ಓಟ, ಎಚ್.ಐ.ವಿ/ಏಡ್ಸ್ ನಿಯಂತ್ರಣಕ್ಕಾಗಿ ಯುವಜನತೆ) ಎಚ್‌ಐವಿ/ಏಡ್ಸ್ ಜಾಗೃತಿಗಾಗಿ ಮ್ಯಾರಾಥಾನ್ ಸ್ಪರ್ಧೆ ನಡೆಯಿತು. ಈ ಸ್ಪರ್ಧೆಯ ಮುಖ್ಯ ಉದ್ದೇಶ ಎಚ್‌ಐವಿ/ಏಡ್ಸ್ ಬಗ್ಗೆ ಅರಿವು, ಸೇವಾ ಸೌಲಭ್ಯಗಳ ಮಾಹಿತಿ, ಕಳಂಕ ಮತ್ತು ತಾರತಮ್ಯವನ್ನು ತಡೆಗಟ್ಟುವುದು, ಉಚಿತ ರಾಷ್ಟ್ರೀಯ ಸಹಾಯವಾಣಿ 1097, ಎಚ್.ಐ.ವಿ/ಏಡ್ಸ್ (ತಡೆಗಟ್ಟುವಿಕೆ ಹಾಗೂ ನಿಯಂತ್ರಣ) ಕಾಯಿದೆ 2017 ಇತ್ಯಾದಿ ಕುರಿತು ಅರಿವು ಮೂಡಿಸಲಾಗಿತ್ತು.

ಮಾದಕ ವಸ್ತು ಸೇವನೆಯಿಂದ ಅಪರಾಧ ಪ್ರಕರಣ ಹೆಚ್ಚಳ



ಪಿ.ಇ.ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಷಣ್ಮುಗಂ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು

ಮಂಡ್ಯ, ಆ.29–ಮಾದಕ ವಸ್ತುಗಳ ಸೇವನೆಯಿಂದ ದೇಶದಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ ಎಂದು ರಾಜ್ಯ ಎನ್‌ಎಸ್‌ಎಸ್ ಘಟಕದ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ ಅಭಿಪ್ರಾಯಪಟ್ಟಿದ್ದಾರೆ.

ನಗರದ ಪಿ.ಇ.ಎಸ್ ಇಂಜಿನಿಯರ್ ಕಾಲೇಜಿನ ಕೆ.ವಿ.ಶಂಕರೆಗೌಡ ಸಭಾಂಗಣದಲ್ಲಿ ಪಿ.ಇ.ಎಸ್ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ ಘಟಕ, ರಾಷ್ಟ್ರೀಯ ಸೇವಾ ಯೋಜನಾ ರಾಜ್ಯ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಆರೋಗ್ಯ ಇಲಾಖೆಯ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ನಶಾ ಮುಕ್ತ ಭಾರತ ಅಭಿಯಾನ ಬೈಕ್ ಜಾಥಾ ಹಾಗೂ ಉಪನ್ಯಾಸವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿ ಸುಮಾರು 25 ಕೋಟಿಗೂ ಹೆಚ್ಚಿನ ಜನರು ಮಾದಕ ವಸ್ತುಗಳ ವ್ಯಸನಿಗಳಿದ್ದು, ಅದರಲ್ಲಿ ಯುವ ಜನತೆಯ ಪ್ರಮಾಣವೇ ಹೆಚ್ಚು ಎಂದು ಹೇಳಿದರು.

ಬೈಕ್ ಜಾಥಾ ಸಾಗುವ ದಾರಿಯುದ್ದಕ್ಕೂ ಆಯ್ದ ಶಾಲಾ ಕಾಲೇಜುಗಳಲ್ಲಿ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಜಗತ್ತಿನಲ್ಲಿ ಅತಿ ಹೆಚ್ಚು ಯುವ ಸಮೂಹ ಹೊಂದಿರುವ ದೇಶ ನಮ್ಮ ಭಾರತ. ಆದರೆ ಇಲ್ಲಿ ಯುವಕರೇ ಹೆಚ್ಚು ಮಾದಕ ವ್ಯಸನಿಗಳಾಗಿರುವುದು ದುಃಖದ ಸಂಗತಿ. ನಮ್ಮ ದೇಶದಲ್ಲಿ 3.1 ಕೋಟಿಗೂ ಅಧಿಕ ಜನರು ಗಾಂಜಾ ವ್ಯಸನಿಗಳಾಗಿದ್ದಾರೆ ಇದರಿಂದ ಅವರ ಆರೋಗ್ಯದ ಮೇಲೆ ಗಂಭೀರವಾದ ಪರಿಣಾಮ ಉಂಟಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆಯ ವಿಶ್ವಜಿತ್ ನಾಯಕ್ ಕರ್ನಲ್ ಜಗದೀಪ್ ಸಿಂಗ್, ಗೃಹ ಇಲಾಖೆಯ ಅಭಿಷೇಕ್, ಮೈ ಭಾರತ್ ಪೋರ್ಟಲ್ ಮುಸ್ತಫಾ, ಮಾಜಿ ಮಿಸಸ್ ಇಂಡಿಯಾ ರೇಣುಕಾ, ಬೈಕ್ ರೈಡರ್ ಡಾ.ಜಾಫರ್ ಮೊದಲಾದವರು ಮಾತನಾಡಿದರು.

ಪಿಇಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಷಣ್ಮುಗಂ ಮಾತನಾಡಿ, ಪ್ರಸ್ತುತ ಸಮಾಜದಲ್ಲಿ ಮಾದಕ ವ್ಯಸನ ಹಾಗೂ ದುಶ್ಚಟಗಳಿಂದ ಅನೇಕ ಮಕ್ಕಳು ಸಾಯುತ್ತಿದ್ದಾರೆ. ನಾವೆಲ್ಲರೂ ನಮಗೆ ಸಾಧ್ಯವಾದಷ್ಟು ಮಾದಕ ವಸ್ತುಗಳ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕು. ಎಲ್ಲರೂ ಮಾದಕ ವಸ್ತುಗಳಿಂದ ದೂರವಿರಬೇಕು ಎಂದು ಹೇಳಿದರು. ನಂತರ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳಿಂದ ದೂರವಿರುವಂತೆ ಪ್ರತಿಜ್ಞಾ ವಿಧಿ ಬೋಧಿಸಿದರು

ಕ್ರೀಡಾ ಮತ್ತು ಯುವ ಸಬಲೀಕರಣ ಇಲಾಖೆ ಸಹಾಯಕ ನಿರ್ದೇಶಕ ಓಂ ಪ್ರಕಾಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಎಸ್.ಎಚ್ ನಿರ್ಮಲ, ಬೈಕ್ ರೈಡರ್ಸ್ ಮತ್ತಿತರರು ಉಪಸ್ಥಿತರಿದ್ದರು.

ಗುತ್ತಲು ವ್ಯಾಪ್ತಿಯಲ್ಲಿ ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ: ಗುತ್ತಲು ಶಾಖಾ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಆ.31 ರ ಬೆಳಿಗ್ಗೆ 10ರಿಂದ ಸಂಜೆ 5 ರವರೆಗೆ ಅಸಿಟೇಟ್ ಟೌನ್, ಉಮ್ಮಡಹಳ್ಳಿ ಗೇಟ್, ಹೆಬ್ಬಾಳ, ಕೆಹೆಚ್‌ಬಿ ಕ್ವಾಟ್ರಸ್, ಹನಕೆರೆ, ಉಮ್ಮಡಹಳ್ಳಿ ಗೇಟ್, ಮರಕಾಡು ದೊಡ್ಡಿ, ಹೊಸ ಬೂದನೂರು, ಹಳೆ ಬೂದನೂರು, ಕಟ್ಟೆದೊಡ್ಡಿ, ಬಿ.ಗೌಡಗೆರೆ, ಹಲಸಗೆರೆ, ಮಲ್ಲಯ್ಯನ ದೊಡ್ಡಿ, ಸಾತನೂರು ಬೆಟ್ಟ, ಕೊಮ್ಮೆರಹಳ್ಳಿ, ಕಿಲಾರ, ಹುಲಿ ವಾನ, ಉಮ್ಮಡ ಹಳ್ಳಿ, ದೊಡ್ಡಬಾಣಸವಾಡಿ ಬಸವನಪುರ, ಚಾಮಲಾಪುರ, ಅಮರಾವತಿ ಹೋಟೆಲ್ ಸ್ಯಾಂಜೋ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಎಇಇ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆತ್ಮಸ್ಥೈರ್ಯ ತುಂಬಿದ ಪೊಲೀಸರ ಪಥಸಂಚಲನ

ನಾಗಮಂಗಲ, ಆ.29–ಗೌರಿ–ಗಣೇಶ ಹಬ್ಬವನ್ನು ಶಾಂತಿ, ಸೌಹಾರ್ದತೆ ಮತ್ತು ಶ್ರದ್ಧಾಭಕ್ತಿಯಿಂದ ಆಚರಿಸುವ ಮೂಲಕ ಸಾರ್ವಜನಿಕರು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಂತೆ ಜಿಲ್ಲಾ ಪೋಲಿಸ್ ಅಧೀಕ್ಷಕ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ.

ಪಟ್ಟಣದ ಸೌಮ್ಯ ಕೇಶವ ದೇವಾಲಯದಿಂದ ಹೊರಟ ಪೊಲೀಸರ ಪಥಸಂಚಲನ ಮಂಡ್ಯ ರಸ್ತೆ ಮುಸ್ಲಿಂ ಬ್ಲಾಕ್, ಎ.ಡಿ ಕಾಲೋನಿ, ಮೈಸೂರು ರಸ್ತೆ, ಕನ್ನಿಕಾ ಪರಮೇಶ್ವರಿ ರಸ್ತೆ, ಕುಂಬಾರ ಬೀದಿ, ಬಡಗೂಡಮ್ಮ ದೇವಸ್ಥಾನ, ಬ್ರಾಹ್ಮಣರ ಬೀದಿ ಮೂಲಕ ಹಾಗೂ ಸೂಕ್ಷ್ಮ ಪ್ರದೇಶದ ವೃತ್ತಗಳಲ್ಲಿ ಸುಮಾರು 250ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಪಥ ಸಂಚಲನ ನಡೆಸಿ ಸಾರ್ವಜನಿರ ರಕ್ಷಣೆ ಮತ್ತು ಸೇವೆಗಾಗಿ ಪೋಲಿಸ್ ಇಲಾಖೆ ಸದಾ ಸಿದ್ಧವಾಗಿದೆ ಎಂಬ ಸಂದೇಶ ನೀಡುವ ಮೂಲಕ ನಗರದ ಸಾರ್ವಜನಿಕರಲ್ಲಿ ಆತ್ಮಸ್ಥೈರ್ಯ ತುಂಬಿದರು.



ಜಿಲ್ಲಾ ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ ನೇತೃತ್ವದಲ್ಲಿ ಪಟ್ಟಣದಲ್ಲಿ ಪೊಲೀಸ್ ಸಿಬ್ಬಂದಿ ಪಥ ಸಂಚಲನ ನಡೆಸಿದರು.

ಹಬ್ಬಗಳನ್ನು ಶ್ರದ್ಧಾ ಮತ್ತು ಭಕ್ತಿ ಹಾಗೂ ಶಾಂತಿಯುತವಾಗಿ ಆಚರಿಸಬೇಕು. ಗಣೇಶ ವಿಸರ್ಜನೆ ಸಮಯದಲ್ಲಿ ಯಾವುದೇ ರೀತಿಯ ಗಲಾಟೆ ಗದ್ದಲಕ್ಕೆ ಅವಕಾಶ ನೀಡಬಾರದು. ಗೌರಿ ಗಣೇಶ ಮೂರ್ತಿ ಪ್ರತಿಷ್ಠಾಪನೆ ಸ್ಥಳದ ಸುತ್ತಮುತ್ತಲೂ ಯಾವುದೇ ರೀತಿಯ ಅಹಿತಕರ ಘಟನೆಗಳು ನಡೆಯದಂತೆ ಆಯೋಜಕರು ಎಚ್ಚರಿಕೆ ವಹಿಸಬೇಕು ಎಂದು ಕರೆ ನೀಡಿದರು

ಅಡಿಷನಲ್ ಎಸ್.ಪಿ ತಿಮ್ಮಯ್ಯ, ಡಿವೈಎಸ್‌ಪಿ ಚೆಲುವರಾಜು, ಸಿಪಿಐ ನಿರಂಜನ್, ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಶಿವಕುಮಾರ್, ಗ್ರಾಮಾಂತರ ಠಾಣೆ ಪಿಎಸ್‌ಐ ರಾಜೇಂದ್ರ, ಬೆಳ್ಳೂರು ಪಿಎಸ್‌ಐ ರವಿಕುಮಾರ್, ಬಿಂಡಿಗನವಿಲೆ ಪಿಎಸ್‌ಐ ಮಾರುತಿ, ಪೋಲಿಸ್ ಸಿಬ್ಬಂದಿಗಳು, ಹೋಂ ಗಾರ್ಡ್, ಅರೆ ಮಿಲಿಟರಿ ಪಡೆ ಸೇರಿದಂತೆ ಹಾಜರಿದ್ದರು.

ಬನ್ನಂಗಾಡಿ ಡೇರಿಗೆ ಅಧ್ಯಕ್ಷರಾಗಿ ಧನಂಜಯ್ ಆಯ್ಕೆ



ಬನ್ನಂಗಾಡಿ ಡೇರಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಧನಂಜಯ್‌ರನ್ನು ನಿರ್ದೇಶಕರು ಅಭಿನಂದಿಸಿದರು

ಪಾಂಡವಪುರ: ತಾಲೂಕಿನ ಬನ್ನಂಗಾಡಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಧನಂಜಯ್ ಅವಿರೋಧವಾಗಿ ಆಯ್ಕೆಯಾದರು.

ಸಂಘದ ಅಧ್ಯಕ್ಷರಾಗಿದ್ದ ಚಂದ್ರಶೇಖರ್ ಅವರ ಅಕಾಲಿಕ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಧನಂಜಯ್‌ರನ್ನು ಹೊರತು ಪಡಿಸಿ ಉಳಿದವರಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಇವರನ್ನೇ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಆನಂದ್‌ನಾಯಕ್ ಘೋಷಿಸಿದರು.

ಸಂಘದ ನೂತನ ಅಧ್ಯಕ್ಷರಾಗಿ ಧನಂಜಯ್ ಆಯ್ಕೆಯಾಗುತ್ತಿದ್ದಂತೆಯೆ ಬೆಂಬಲಿಗರು ಸಿಹಿಹಂಚಿ ಸಂಭ್ರಮಿಸಿ ಅಭಿನಂದಿಸಿದರು. ಬನ್ನಂಗಾಡಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಅವಿರೋಧವಾಗಿ ಆಯ್ಕೆಯಾಗಲು ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಮುಂದಿನ ದಿನಗಳಲ್ಲಿ ಎಲ್ಲರ ಜೊತೆಗೂಡಿ ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಉಪಾಧ್ಯಕ್ಷ ಕರೀಗೌಡ, ನಿರ್ದೇಶಕರಾದ ನಾಗೇಗೌಡ, ಸ್ವಾಮೀಗೌಡ, ಬಿ.ಆರ್. ನಾಗೇಶ್, ರವಿಕಿರಣ್, ಮಂಜುನಾಥ್, ಸುರೇಶ್, ರೇಖಾ, ಸೌಮ್ಯ, ರವಿ, ಕಾರ್ಯದರ್ಶಿ ಪ್ರಸನ್ನ, ಮುಖಂಡರಾದ ತಾಲೂಕು ಮಾಜಿ ಅಧ್ಯಕ್ಷ ಬಿ.ಡಿ.ಹುಚ್ಚೇಗೌಡ, ಮಾಜಿ ಸದಸ್ಯ ಬಿ.ಪಿ. ಶ್ರೀನಿವಾಸ್, ಬಿ.ಜಿ.ಪ್ರಕಾಶ್, ಬಿ.ಕೆ. ರೇವಣ್ಣ, ಬಿ.ಜಿ.ಪ್ರಭಾಕರ್, ವೆಂಕಟೇಶ್, ಬಿ.ಟಿ.ಮನೋಹರ್, ಬಿ.ಎಚ್. ಪ್ರಸನ್ನ, ಬಿ.ಆರ್.ಪ್ರಸನ್ನ, ಗಾಡಿ ಯೋಗೀಶ್, ನಾಗೇಶ್, ಚಂದನ್ ಅವರುಗಳು ಉಪಸ್ಥಿತರಿದ್ದರು

ನಶಾ ಮುಕ್ತ ಭಾರತ ಅಭಿಯಾನ

ಮಾದಕ ವಸ್ತು ವಿರುದ್ಧ ಜಾಗೃತಿಗಾಗಿ ಬೈಕ್ ಜಾಥಾಗೆ ಬಂಡೀಪುರದಲ್ಲಿ ಚಾಲನೆ



ನಶಾ ಮುಕ್ತ ಭಾರತ ಅಭಿಯಾನದ ಬೈಕ್ ಜಾಥಾಗೆ ಚಾಲನೆ ನೀಡಲಾಯಿತು.

ಚಾಮರಾಜನಗರ, ಆ.29– ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯವು ನಶಾ ಮುಕ್ತ ಭಾರತ ಅಭಿಯಾನದ ಅಂಗವಾಗಿ ಇಂದಿನಿಂದ ಆಗಸ್ಟ್ 31ರವರೆಗೆ ಬಂಡೀಪುರದಿಂದ ಬೀದರ್‌ವರಗೆ ಹಮ್ಮಿಕೊಂಡಿರುವ ಮೂರು ದಿನಗಳ ಬೈಕ್ ಜಾಥಾಗೆ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಕೇಂದ್ರದ ಬಳಿ ಇಂದು ಚಾಲನೆ ದೊರೆಯಿತು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರಾದ ಎಸ್.ಪ್ರಭಾಕರನ್ ಹಸಿರು ನಿಶಾನೆ ತೋರುವ ಮೂಲಕ ಬೈಕ್ ಜಾಥಾಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್. ಪ್ರಭಾಕರನ್ ಅವರು ಇಂದಿನಿಂದ ಮೂರು ದಿನಗಳವರೆಗೆ ಹಮ್ಮಿಕೊಳ್ಳಲಾಗಿರುವ ಬೈಕ್ ಜಾಥಾದಲ್ಲಿ 20 ಬೈಕ್ ಸವಾರರು ಪಾಲ್ಗೊಳ್ಳುತ್ತಿದ್ದು, ಸಾರ್ವಜನಿಕರಿಗೆ ಯುವಜನರಿಗೆ ಮದ್ಯ ಮಾದಕ ವಸ್ತುಗಳಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಲಿದ್ದಾರೆ. ಮಹತ್ವದ ಉದ್ದೇಶ ಹೊಂದಿರುವ ಬೈಕ್ ಜಾಗೃತಿ ಜಾಥಾ ಯಶಸ್ವಿಯಾಗಲಿ ಎಂದು ಹಾರೈಸಿದರು.

ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಡಾ. ಪ್ರತಾಪ್ ಲಿಂಗಯ್ಯ ಮಾತನಾಡಿ ನಶಾ ಮುಕ್ತ ಭಾರತ ಅಭಿಯಾನದ ಹಿನ್ನೆಲೆಯಲ್ಲಿ ಜಾಗೃತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅರಣ್ಯ ಇಲಾಖೆ, ಗೃಹ ಇಲಾಖೆ ಪ್ರವಾಸೋದ್ಯಮ ಇಲಾಖೆ ಎನ್‌ಎಸ್‌ಎಸ್, ಎನ್‌ಸಿಸಿ. ಅವರ ಸಹಕಾರ ಸಹಭಾಗಿತ್ವದೊಂದಿಗೆ ಮೂರು ದಿನಗಳ ಕಾಲ ಬೈಕ್ ಜಾಥಾವನ್ನು ನಡೆಸಲಾಗುತ್ತಿದೆ ಎಂದರು.

ಬಂಡೀಪುರದಿಂದ ಆರಂಭಿಸಿ ಬೀದರ್‌ವರೆಗೆ ಬೈಕ್ ಜಾಥಾ ಮಾಡಲಾಗುತ್ತಿದೆ. ಹೋಗುವ ದಾರಿಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ. ಶಾಲಾ ಕಾಲೇಜುಗಳು, ಪ್ರಮುಖ ವೃತ್ತಗಳಲ್ಲಿ ಪ್ರತಿಜ್ಞಾವಿಧಿ ಬೋಧಿಸಲಾಗುತ್ತಿದೆ. ವಿಶೇಷವಾಗಿ ಯುವಜನರಿಗೆ ಮದ್ಯ ಮಾದಕ ವಸ್ತುಗಳ ವಿರುದ್ಧ ಅರಿವು ಮೂಡಿಸುವ ಉದ್ದೇಶ ಹೊಂದಲಾಗಿದೆ ಎಂದು ಡಾ. ಪ್ರತಾಪ್ ಲಿಂಗಯ್ಯ ತಿಳಿಸಿದರು. ಈ ಸಂದರ್ಭದಲ್ಲಿ ಇತರೆ ಇಲಾಖೆಗಳ ಅಧಿಕಾರಿಗಳು ಇದ್ದರು.

ಉಪನ್ಯಾಸಕರ ನೇಮಿಸಲು ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ: ಪದವಿ ಕಾಲೇಜುಗಳಿಗೆ ಅಗತ್ಯ ಉಪನ್ಯಾಸಕರನ್ನು ನೇಮಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲವನ್ನು ಪರಿಹರಿಸಬೇಕು ಎಂದು ಆಗ್ರಹಿಸಿ ನಗರದಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್‌ನಿಂದ ಪ್ರತಿಭಟನೆ ನಡೆಯಿತು. ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಕೆಲಕಾಲ ಪ್ರತಿಭಟನೆ ನಡೆಸಿದರು.

ಬಳಿಕ ಸಂಘಟನೆಯ ಜಿಲ್ಲಾ ಸಹ ಸಂಚಾಲಕರಾದ ಹೇಮಲತಾ ಮಾತನಾಡಿ, ರಾಜ್ಯಾದ್ಯಂತ ಪದವಿ ತರಗತಿಗಳು ಪ್ರಾರಂಭವಾಗಿ ತಿಂಗಳು ಕಳೆದರೂ ಇಲ್ಲಿಯವರೆಗೂ ಕಾಲೇಜುಗಳಲ್ಲಿ ಉಪನ್ಯಾಸಕರಿಲ್ಲ. ರಾಜ್ಯದ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳು ಉಪನ್ಯಾಸಕರ ಮೇಲೆ ಅವಲಂಬಿತವಾಗಿದ್ದು ತರಗತಿಗಳು ಸರಿಯಾಗಿ ನಡೆಯದೆ ಇರುವುದರಿಂದ ವಿದ್ಯಾರ್ಥಿಗಳು ಸಾಕಷ್ಟು ಆತಂಕದಲ್ಲಿದ್ದಾರೆ. ಇದು ಅವರ ಶೈಕ್ಷಣಿಕ ಭವಿಷ್ಯವನ್ನು ಅತಂತ್ರವನ್ನಾಗಿಸಿದೆ ಎಂದರು.

ಮುಂದಿನ ತಿಂಗಳು ಪದವಿ ವಿದ್ಯಾರ್ಥಿಗಳ ಮೊದಲ ಆಂತರಿಕ ಪರೀಕ್ಷೆಗಳು ನಡೆಯಬೇಕಿದ್ದು ಪಾಠಗಳು ಇನ್ನೂ ಆರಂಭವಾಗಿಲ್ಲ. ರಾಜ್ಯ ಸರ್ಕಾರವು ಶೈಕ್ಷಣಿಕ ಚಟುವಟಿಕೆಗಳು ಸರಾಗವಾಗಿ ನಡೆಯುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ತುರ್ತಾಗಿ ಕೈಗೊಂಡು ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಗೊಂದಲವನ್ನು ಕೂಡಲೇ ಪರಿಹರಿಸಬೇಕು ಎಂದು ಆಗ್ರಹಿಸಿದರು. ಈ ವೇಳೆ ಸಂಘಟನೆಯ ಪದಾಧಿಕಾರಿಗಳು ಇತರರು ಇದ್ದರು.

ಮಹರ್ಷಿ ವಾಲ್ಮೀಕಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಚಾಮರಾಜನಗರ: ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗದ (ಎಸ್‌ಟಿ) ಜನಾಂಗದ ಏಳಿಗೆಗಾಗಿ ಶ್ರಮಿಸಿದ ಅರ್ಹ ವ್ಯಕ್ತಿಗಳಿಂದ ಮಹರ್ಷಿ ವಾಲ್ಮೀಕಿ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರತಿ ವರ್ಷದಂತೆ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯಂದು ಪರಿಶಿಷ್ಟ ವರ್ಗದ ಜನಾಂಗದ ಏಳಿಗೆಗಾಗಿ ಶ್ರಮಿಸಿದ ವ್ಯಕ್ತಿಗಳಿಗೆ ಶ್ರೀ ಮಹರ್ಷಿ ವಾಲ್ಮೀಕಿ ಪ್ರಶಸ್ತಿ ನೀಡಿ ಗೌರವಿಸಲು ಸರ್ಕಾರ ನಿರ್ಧರಿಸಿದ್ದು, ಅಕ್ಟೋಬರ್ 7ರಂದು ನಡೆಯುವ ರಾಜ್ಯಮಟ್ಟದ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ದಿನದಂದು ಪ್ರಶಸ್ತಿಯನ್ನು ನೀಡಲಾಗುವುದು. ಅರ್ಜಿ ಸಲ್ಲಿಸಲು ಸೆಪ್ಟಂಬರ್ 10ರಂದು ಕಡೆಯ ದಿನವಾಗಿದೆ.

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾಮಟ್ಟದ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಹಾಗೂ ಆಯಾ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ರಾಷ್ಟ್ರೀಯ ಕ್ರೀಡಾ ದಿನಾಚರಣೆ: ಗಮನ ಸೆಳೆದ ರಸ್ತೆ ಓಟ, ಹಗ್ಗ–ಜಗ್ಗಾಟ

ಚಾಮರಾಜನಗರ: ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಜನ್ಮದಿನ ಹಾಗೂ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ನಗರದಲ್ಲಿ ಆಯೋಜಿಸಲಾಗಿದ್ದ 5 ಕಿ.ಮೀ ರಸ್ತೆ ಓಟ (ಮ್ಯಾರಥಾನ್) ಹಾಗೂ ಹಗ್ಗ–ಜಗ್ಗಾಟ ಸ್ಪರ್ಧಾ ಕಾರ್ಯಕ್ರಮ ಎಲ್ಲರ ಗಮನ ಸೆಳೆಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ವಿವಿಧ ಸಂಘಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಎಂಎಸ್‌ಐಎಲ್ ಅಧ್ಯಕ್ಷರು ಹಾಗೂ ಶಾಸಕ ಸಿ. ಪುಟ್ಟರಂಗಶೆಟ್ಟಿ ಗಾಳಿಯಲ್ಲಿ ಗುಂಡು ಹಾರಿಸುವ ಮೂಲಕ 5 ಕಿ.ಮೀ ರಸ್ತೆಓಟ ಹಾಗೂ ಹಗ್ಗ–ಜಗ್ಗಾಟಕ್ಕೆ ಹಸಿರು ನಿಶಾನೆ ತೋರಿದರು.

ಶಾಸಕರ ಜೊತೆಗೆ ಪಾಲ್ಗೊಂಡಿದ್ದ ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚೂಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಎಸ್‌ಪಿ ಡಾ.ಬಿ.ಟಿ. ಕವಿತಾ, ಇತರೆ ಗಣ್ಯರು ಆರಂಭದಲ್ಲಿ ವಾರ್ಮ್ ಅಪ್ (ನೃತ್ಯ–ವ್ಯಾಯಾಮ) ಮಾಡುವ ಮೂಲಕ ಕಾರ್ಯಕ್ರಮದಲ್ಲಿ ಸಮಾವೇಶಗೊಂಡಿದ್ದ ಸಾರ್ವಜನಿಕರು, ಮಕ್ಕಳು, ವಿದ್ಯಾರ್ಥಿಗಳು, ಅಧಿಕಾರಿಗಳು, ಸಂಘಸಂಸ್ಥೆಗಳ ಪದಾಧಿಕಾರಿಗಳು ಎಲ್ಲರಲ್ಲೂ ಕ್ರೀಡಾ ದಿನಾಚರಣೆಯ ಉತ್ಸಾಹ, ಹುರುಪು ತುಂಬಿದರು.



ಚಾಮರಾಜೇಶ್ವರ ದೇವಸ್ಥಾನದಿಂದ ಆರಂಭಗೊಂಡ ರಸ್ತೆ ಓಟವು ಪಚ್ಚಪ್ಪ ವೃತ್ತ, ಬಿ.ರಾಚಯ್ಯ ಜೋಡಿ ರಸ್ತೆ ರಾಮಸಮುದ್ರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತ ತಲುಪಿ, ವಾಪಸ್ಸು ತಿರುಗಿ ಜೋಡಿ ರಸ್ತೆ ಮೂಲಕ ಚಾಮರಾಜೇಶ್ವರ ದೇವಸ್ಥಾನದಲ್ಲಿ ಅಂತಿಮವಾಗಿ ಮುಕ್ತಾಯಗೊಂಡಿತು. ಬಳಿಕ ಪುರುಷ ಹಾಗೂ ಮಹಿಳೆಯರಿಗಾಗಿ ಹಗ್ಗ–ಜಗ್ಗಾಟ ಸ್ಪರ್ಧೆ ನಡೆಯಿತು. ಈ ಎರಡು ಸ್ಪರ್ಧೆಗಳು ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕವಾಗಿ ಏರ್ಪಡಿಸಲಾಗಿತ್ತು. ಕ್ರೀಡಾಪಟುಗಳು, ಸಾರ್ವಜನಿಕರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಕೈಗಾರಿಕೋದ್ಯಮಿಗಳು, ಸಂಘ–ಸಂಸ್ಥೆಯ ಪದಾಧಿಕಾರಿಗಳು ಸ್ಪರ್ಧೆಯಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಳ್ಳುವಿಕೆ ಕಂಡುಬಂತು.

ರಸ್ತೆ ಓಟ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಗುಂಡ್ಲುಪೇಟೆಯ ಮಣಿಕಂಠ ಪ್ರಥಮ, ಚಾಮರಾಜನಗರದ ಯೋಗೇಶ್ ದ್ವಿತೀಯ, ಚಂದು ತೃತೀಯ, ನವೀನ್ ಕುಮಾರ್ 4ನೇ, ಕೃಷ್ಣಪ್ಪ 5ನೇ ಹಾಗೂ ಬಿ. ಅಭಿಷೇಕ್ 6ನೇ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಕೊಳ್ಳೇಗಾಲ ತಾಲೂಕು ತೆಳ್ಳನೂರಿನ ನದಿಯಾ ಪ್ರಥಮ, ಪ್ರಭಾವತಿ ದ್ವಿತೀಯ, ಕೀರ್ತನಾ ನಾಲ್ಕನೇ, ರಂಜಿತಾ 5ನೇ ಹಾಗೂ ಮೇಘನಾ 6ನೇ ಮತ್ತು ಚಾ.ನಗರ ರಾಮಸಮುದ್ರದ ಸರಸ್ವತಿ ತೃತೀಯ ಬಹುಮಾನ ಪಡೆದರು.

ಹಗ್ಗ ಜಗ್ಗಾಟ ಸ್ಪರ್ಧೆಯ ಪುರುಷರ ವಿಭಾಗದಲ್ಲಿ ಪೊಲೀಸ್ ಇಲಾಖೆಯ ಸುರೇಶ್ ನೇತೃತ್ವದ ತಂಡ ಪ್ರಥಮ ಹಾಗೂ ವಿ.ಎಚ್.ಪಿ ಕಾಲೇಜಿನ ವೇದಾಂತ್ ತಂಡ ದ್ವಿತೀಯ ಸ್ಥಾನ ಪಡೆದರು.

ಹೆಚ್‌ಐವಿ ಏಡ್ಸ್ ಜನಜಾಗೃತಿ: ಸೆ.2ಕ್ಕೆ ಬೈಕ್‌ರ್‍ಯಾಲಿ, 4ರಂದು ಮ್ಯಾರಥಾನ್, ರೆಡ್ ರಿಬ್ಬನ್ ಓಟ

ಚಾಮರಾಜನಗರ: ಯುವಜನೋತ್ಸವ–2025 ಕಾರ್ಯಕ್ರಮದ ಅಂಗವಾಗಿ ಹೆಚ್‌ಐವಿ ಏಡ್ಸ್ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಉಪಸ್ಥಿತಿಯಲ್ಲಿ ಸೆ.2ರಂದು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಿಂದ ಬೈಕ್ ರ್‍ಯಾಲಿ ಮತ್ತು ಸೆ.4ರಂದು ಪದವಿ ಕಾಲೇಜಿನ ವಿದ್ಯಾರ್ಥಿಗಳಿಂದ ಮ್ಯಾರಥಾನ್ ಹಾಗೂ ರೆಡ್ ರಿಬ್ಬನ್ ಓಟ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ಬೈಕ್ ರ್‍ಯಾಲಿಯು ಸೆ.2ರಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಡಳಿತ ಭವನದ ಮುಂಭಾಗದಿಂದ ಪಚ್ಚಪ್ಪ ಸರ್ಕಲ್, ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್, ಅರಣ್ಯ ಇಲಾಖೆಯ ಸರ್ಕಲ್, ಗುಂಡ್ಲುಪೇಟೆ ಸರ್ಕಲ್ ಮೂಲಕ ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಅವರಣದಲ್ಲಿ ಅಂತ್ಯಗೊಳ್ಳಲಿದೆ.

ಮ್ಯಾರಥಾನ್ ಹಾಗೂ ರೆಡ್ ರಿಬ್ಬನ್ ಓಟ ಸ್ಪರ್ಧೆಯು ಸೆ.2ರಂದು ಬೆಳಿಗ್ಗೆ 8 ಗಂಟೆಗೆ ಜಿಲ್ಲಾಡಳಿತ ಭವನದ ಮುಂಭಾಗದಿಂದ ಹೊರಡಲಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ತಕ್ಷಣ ಬೇಕಾಗಿದ್ದಾರೆ
ಅನುಭವಸ್ಥ ಅಕೌಂಟ್, ಕಂಪ್ಯೂಟರ್ ಬಗ್ಗೆ ತಿಳಿದ ಮಹಿಳಾ ಬಿಕಾಂ ಪದವೀಧರರು ಕೂಡಲೇ ದಾಖಲೆಗಳನ್ನು ಕಳುಹಿಸಿರಿ.
Email: globalagribiotech2014@gmail.com
7996035215

WANTED
1) Accountant - Male / Female Atleast 2 years of experience in Tally and Basic Computer, Any Degree.
2) Office Assistant - Male PUC / Degree - Pass / Fail.
6366006603

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

Walk in interview
in a reputed school
Post 1 : Teaching staff (high school)
* English Teacher
* Social Teacher
Post 2 : office staff, personal car driver and security family
7204284724 / 8722963130

ರವಿ ಮೆಲೊಡೀಸ್ ಆರ್ಕೆಸ್ಟ್ರಾ
ಗೌರಿ–ಗಣೇಶ ಹಬ್ಬದ ಅಂಗವಾಗಿ ಆರ್ಕೆಸ್ಟ್ರಾ ಕಾರ್ಯಕ್ರಮಗಳನ್ನು ಬುಕ್ಕಿಂಗ್ ಮಾಡಲು ಸಂಪರ್ಕಿಸಿ.
ಮೊ: 9964587655, 8553602626

MUDA SITE FOR SALE
ಇನ್ಫೋಸಿಸ್ ಪಕ್ಕ "KBL ಸಿಲಿಕಾನ್ ಸಿಟಿ" ಸೈಟುಗಳು ಲಭ್ಯ
Call : 9886048471

ಬೇಕಾಗಿದ್ದಾರೆ
ಮೊಬೈಲ್ ಫೋನ್ ಶೋರೂಮ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ. ಪಾರ್ಟ್ ಟೈಂ/ ಫುಲ್ ಟೈಂ ಸಂಪರ್ಕಿಸಿ
9886409722

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ ಲಿಂಗಾಯತ/ನಾಯಕ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

WANTED
Electrical Engineer
Qualification: Diploma / BE in Electrical Engineering (02 Male & 01 Female) (2 years+ experience in Handling ESCOM, GK,WS and Linkline works) Driver (M) (Min 2-3yrs Exp. As Driver)
Contact: 6366366388 / 9620624999
Call between: 10AM to 5PM
Mail your C.V to: acpltd123@gmail.com

KHB Alloted SITE FOR SALE
ಇಲವಾಲ ಹತ್ತಿರದ KHB ನಿಸರ್ಗ ಬಡಾವಣೆಯಲ್ಲಿ 30x40 ಅಳತೆ ಸೈಟ್.
Mob: 9886048471

ಕೆಲಸಕ್ಕೆ ಬೇಕಾಗಿದ್ದಾರೆ
ವಿಜಯನಗರ 4ನೇ ಹಂತ ಮೈಸೂರಿನಲ್ಲಿ ಪ್ರಾರಂಭವಾಗಿರುವ ವೆಜ್ ಅಂಡ್ ನಾನ್ ವೆಜ್ ರೆಸ್ಟೋರೆಂಟ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ
ಕುಕ್ (North Indian Style)–1
ಸರ್ವರ್–1, ಕ್ಯಾಪ್ಟನ್–1
ಚೆಫ್–1, ಹೆಲ್ಪರ್ (ಮಹಿಳೆಯರು)–2
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9353263974

30x40 ಅಳತೆಯ ನಿವೇಶನಗಳು ದೊರೆಯುತ್ತವೆ
ರಮಣಶ್ರೀ ಸೆರೇನ್ ವಸತಿ ಬಡಾವಣೆ (ವರುಣ)
ಟಿ.ನರಸೀಪುರ ರಸ್ತೆ, ಸುತ್ತೂರು ರಾಜ್ಯ ಹೆದ್ದಾರಿಯಲ್ಲಿ ನೋಂದಾವಣೆಗೆ ಮತ್ತು ಮನೆ ನಿರ್ಮಿಸಲು ಸಿದ್ಧವಿರುತ್ತದೆ, ಬ್ಯಾಂಕ್ ಸಾಲ ಸೌಲಭ್ಯವಿರುತ್ತದೆ.
ಶ್ರೀ ರಮಣಶ್ರೀ ಡೆವಲಪರ್ಸ್
7411914135

RAI ESTATES (RERA APPROVED, MUDA APPROVED, E-KHATA)
ಮೈಸೂರಿನ ಸುತ್ತ ರೈ ಎಸ್ಟೇಟ್ ನಿರ್ಮಿಸಿರುವ ಲೇಔಟ್‌ಗಳಲ್ಲಿ ಸೈಟ್ ಕೊಳ್ಳಲು ಸಂಪರ್ಕಿಸಿ
- King City
- Golden Palms
- Green Park
- Vardaman Nagar
- Paradise Enclave
- Green Acres
- Spring Meadows
- Dream City
- Dream Valley
- Eastern Hills

9448181488, 9945061604
#10, 1st Floor New Sayyaji Rao Road, Bamboo Bazar, Mysuru - 570 001

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
8197383645
9008711654

ನಿವೇಶನ ಮಾರಾಟಕ್ಕಿವೆ
* 30x40 ಪೂರ್ವ, MUDA, ಯು.ಬಿ. ಸಿಟಿ, ವಿಜಯನಗರ 4ನೇ ಹಂತ.
* ಮೂಲೆ ನಿವೇಶನ KNS Calisto ಹತ್ತಿರ, ಕೇರ್ಗಳ್ಳಿ, ದಟ್ಟಗಳ್ಳಿ.
8660726140

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

BHADRAKALI GIFTS N PRINTS
Shivrampete, Mysuru
ಹಬ್ಬ, ಕಾರ್ಯಕ್ರಮಗಳು ಮತ್ತು ತಂಡಗಳ ಕಸ್ಟಮೈಸ್ ಟೀ–ಶರ್ಟ್‌ಗಳಿಗಾಗಿ ಸಂಪರ್ಕಿಸಿ!
Contact for Customized T-Shirts for Events, Festivals & Teams



☎ 0821 4535303 7996487655

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

SBIT ಟ್ರಾವೆಲ್ಸ್
ಥೈಲ್ಯಾಂಡ್
4N-5D 2025
ಸೆಪ್ಟೆಂಬರ್: 05,ಅಕ್ಟೋಬರ್:09,16
ವಿಮಾನ ಟಿಕೆಟ್‌ಗಳು | ಹೋಟೆಲ್ ವೀಸಾ | ಊಟ | ಪ್ರವೇಶ ಟಿಕೆಟ್‌ಗಳು | ಎಲ್ಲಾ ಪ್ರವಾಸಗಳು
Mob: 9343524127
(ಸರಸ್ವತಿಪುರಂ, ಮೈಸೂರು)

ಬಸವ ಮಾರ್ಗ ವ್ಯಸನಮುಕ್ತ ಕೇಂದ್ರ (ರಿ)
54ನೇ ಉಚಿತ ಕುಡಿತ ಬಿಡಿಸುವ ಶಿಬಿರ.
ಸೆಪ್ಟೆಂಬರ್ 7 ರಿಂದ 16ರ ವರೆಗೆ.
8803344999
9742559999

HOUSE FOR SALE
MUDA, 30x40 South Facing, Near Triveni Circle, Dr. Rajkumar Road, Triplex Home, "Own Construction House". Brokers Excuse.
8095583671, 8497049555

HOUSE FOR SALE (USED HOUSE)
20x30 East face, Ground floor, 1st floor, both 2 Bedrooms House 10x20 Terese hall, Washroom House, All Facilities in HPO & RMC Layout, Sathagalli Layout, Near Dr. Rajkumar Road, Mysore-29.
9845116744

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಶ್ರೀ ಸಂಜೀವಿನಿ ಗೋಲ್ಡ್
ನೀವು ಗಿರಿವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ಬಿಡಿಸಿ ಉಳಿದ ಹಣವನ್ನು ತಕ್ಷಣ, ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ. ಒಂದು ಗ್ರಾಂ ಚಿನ್ನಕ್ಕೆ : 9400(24CT)
9108146123

ಸೈಟು ಮಾರಾಟಕ್ಕೆ ಇದೆ
30x40 ಸೈಟ್ ನಂ. 618, ಆತ್ಮನಂದಾಸಾಗರ ಲೇಔಟ್ ಫೇಸ್ –1, ನಾಗವಾಲ ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು.
9900024119

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 50 ವರ್ಷದೊಳಗಿನ ಪುರುಷರು ಬೇಕಾಗಿದ್ದಾರೆ.
SSLC, PUC ವಿದ್ಯಾರ್ಹತೆ ಇರಬೇಕು. ಪಡುವಾರಹಳ್ಳಿ, ಒಂಟಿಕೊಪ್ಪಲ್, ಗೋಕುಲಂ, ಮೇಟಗಳ್ಳಿ, ಹೆಬ್ಬಾಳು ವಿಜಯನಗರ, ಮಂಟಿ ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ
7259598615

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ನಗರದ ಉನ್ನತ ಕಂಪನಿಗಳು, ಕಾರ್ಖಾನೆಗಳು, ಹೋಟೆಲ್‌ಗಳು, ಸ್ಕೂಲ್‌ಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿಗಳು, ಹೌಸ್‌ಕೀಪಿಂಗ್‌ಗಳು, ಲೇಬರ್‌ಗಳು (Helpers) ಕೆಲಸಕ್ಕೆ ಬೇಕಾಗಿದ್ದಾರೆ. ಹೂಟಗಳ್ಳಿ, ಹೆಬ್ಬಾಳ್, ಮೇಟಗಳ್ಳಿ, ಹಿನಕಲ್, ಜೆ.ಪಿ. ನಗರ. ಉನ್ನತ ಸಂಬಳ: 12,000 ರಿಂದ 15,000 ರವರೆಗೆ. ESI, PF ಸೌಲಭ್ಯವಿದೆ.
9611208553, 9036461347

ಡ್ರೈವರ್ ಬೇಕಾಗಿದ್ದಾರೆ
ನಾಲ್ಕು ಚಕ್ರದ ಗೂಡ್ಸ್ ವಾಹನ ಚಲಾಯಿಸಲು DL ಹೊಂದಿರುವ ಅಭ್ಯರ್ಥಿಗಳು (ಫರ್ನಿಚರ್ಸ್ ಮತ್ತು ಮ್ಯಾಟ್ರೆಸ್ ಡೆಲಿವರಿಗೆ). ವಯೋಮಿತಿ: 18 ರಿಂದ 40 ವರ್ಷ. ಸಂಬಳ: 18,000.
ESI & PF ಸೌಲಭ್ಯವಿರುತ್ತದೆ.
Mob: 9611417014

ಬೇಕಾಗಿದ್ದಾರೆ
ವಾಷಿಂಗ್ & ಕ್ಲೀನಿಂಗ್ – 2nd Shift ಆನ್‌ಲೈನ್ (Online) - Food ಪಾರ್ಸೆಲ್ ಪ್ಯಾಕಿಂಗ್, ಜೋಳದ ರೊಟ್ಟಿ ಮಾಡುವವರು. ಮೈಸೂರಿನಲ್ಲಿ ಕಾಳಿದಾಸ ರೋಡ್ – ಜಯಲಕ್ಷ್ಮೀಪುರಂನಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಉತ್ತಮ ಕೆಲಸಗಾರರಿಗೆ ಅತ್ಯುತ್ತಮ ಸಂಬಳ, ವಸತಿ ಮತ್ತು ESI ಕೊಡಲಾಗುವುದು. ಸಂಪರ್ಕಿಸಿ:
Mob: 7899028086

ಸೈಟುಗಳು ಮಾರಾಟಕ್ಕಿದೆ
40x60 N/F 65 Lakhs.
30x50 E/F 55 Lakhs, ರಿಂಗ್ ರಸ್ತೆ ಹತ್ತಿರ ಹೆಚ್.ಡಿ. ಕೋಟೆ ರೋಡ್,
40x60 E/F 68 Lakhs.
30x40 E/F 36 Lakhs
SKL ಪ್ರಾಪರ್ಟೀಸ್.
Mob: 9341624462

SITE FOR SALE
Site for sale Mysuru Uttanahalli near Heritage Layout, Mysuru.
Mob: 9845376860

Site for sale
East facing corner site, Jnanabharathi Layout, 30x40, Dadada Halli Highway Road, Behind Airport, MUDA khata and E-khata done. Clear records, direct owner.
Mob: 9342123373

ಸಾಲ/LOANS
- House/Site Purchase
- Construction Loan
- Mortgage Loan

(Muda Corporation & Revenue)
9880718980

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ನೈಟ್ ಶಿಫ್ಟ್ ಕೆಲಸಕ್ಕಾಗಿ ಪುರುಷರು ಬೇಕಾಗಿದ್ದಾರೆ.
ಸಂಬಳ : 15,000/–
9902754149

For Rent
10x12 Shop, ground floor, single room with attach b/r @ Snake Shyam Road, 16th Main, 2nd Stage, Vijayanagar, Mysore.
Mob: 9916820426

ಬೇಕಾಗಿದ್ದಾರೆ
1) ಮ್ಯಾನೇಜರ್ (Manager)
2) ಕ್ಯಾಷಿಯರ್ (Cashier)
3) ವೈಟರ್ (Waiter)
4) ಕ್ಲೀನರ್ (Cleaner)
5) ಕುಕ್ (Cook)
7795011124

MUDA APPROVED SITE'S FOR SALE @ S.S. LAYOUT
30X40, EAST FACING @ 25 LAKH'S, 40X27, NORTH FACING @ 26.5 LAKHS NEXT TO LALBAHADUR SHASTHRI NAGAR OFF T-NARSIPURA MAIN ROAD
7795609173

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗರು– ಕೆಲಸದ ಸ್ಥಳ : ಬೆಳವಾಡಿ
ತಿಂಗಳಿಗೆ 35 ಸಾವಿರ ರೂ.ಗಳು
9964575071

WANTED
ಫರ್ನಿಶಿಂಗ್ ಅಂಗಡಿಯಲ್ಲಿ Telecaller Work ಕನ್ನಡ, ಹಿಂದಿ, ಇಂಗ್ಲಿಷ್ ಭಾಷೆ ಮಾತಾಡಬೇಕು 1 Year Experience ಇರುವವರು ಬೇಕಾಗಿದ್ದಾರೆ. Near Ashoka Road
Phone Number
9916514950

SHOPS FOR RENT
Suitable for Hotel & Bar at Shop No. 1 & 2 at Calinga Market, Santhepet, behind Lansdowne Building.
8123124551

READY TO REGISTRATION
ಮೈಸೂರು ಮತ್ತು ಹುಣಸೂರು ಮುಖ್ಯ ರಸ್ತೆಯಲ್ಲಿ ಮನುಗನಹಳ್ಳಿ ಮತ್ತು ಇಲವಾಲ ಹತ್ತಿರ ನಿವೇಶನಗಳು ಮಾರಾಟಕ್ಕಿವೆ. (DTCP Approved)
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
8050009696

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಎಸ್‌ಎಸ್‌ಎಲ್‌ಸಿ ಮತ್ತು ಮೇಲ್ಪಟ್ಟು
ಸಂಬಳ : 18000 +W/o (8hrs)
ವಯೋಮಿತಿ 50 ವರ್ಷದ ಒಳಗಿರಬೇಕು
ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819, 9620667819

ತಕ್ಷಣ ಬೇಕಾಗಿದ್ದಾರೆ
RBI ಮತ್ತು ಮೇಟಗಳ್ಳಿ ಸುತ್ತಮುತ್ತಾ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 20,000 + W/o (8hrs)
ಊಟ ತಿಂಡಿ ವ್ಯವಸ್ಥೆ ಇರುತ್ತದೆ.
ಸಂಪರ್ಕಿಸಿ
9880727819, 9620667819

ಬೇಕಾಗಿದ್ದಾರೆ
ತೋಟದ ಮನೆಯಲ್ಲಿ ಅಡುಗೆ ಕೆಲಸಕ್ಕೆ ಬೇಕಾಗಿದ್ದಾರೆ.
9845920613

HOUSE FOR SALE
EWS North Face 6 Rooms with Attached Bath Rooms for PG Purpose- Vijayanagar 2nd Stage Near K.D. Circle, 75 Lakhs- Negotiable
9164041999

HOUSE FOR RENT & LEASE
30x40 1st Floor, Full Furnished (T.V., Sofa, Fridge, Washing Machine, Cot Bed) Students are allowed Vijaynagar 4th Stage Near S.V.I School
9591847851, 9916089395

SITE FOR SALE
30x40, Tranquil Layout, R.T. Nagar, No. 348, Opp. Park, W/F, E-khata.
9742782931

ಸೈಟು ಬೇಕಾಗಿದೆ
30x40 ಉತ್ತರ ದಿಕ್ಕು ಹಾಗೂ ಪೂರ್ವ ದಿಕ್ಕು, ನೇತಾಜಿ ಗೃಹ ನಿರ್ಮಾಣ ಸಹಕಾರ ಸಂಘ, ಪೊಲೀಸ್ ಲೇಔಟ್, ತಳೂರು.
9448601655

ನಿಮ್ಮ ಕನಸಿನ ಮನೆಯನ್ನು ನಿರ್ಮಿಸಿ ಕೊಡಲಾಗುತ್ತದೆ. ನಿಮ್ಮ ಇಚ್ಛೆಯಂತೆ ಸಿವಿಲ್ ಕಂಟ್ರಾಕ್ಟರ್ ಮೈಸೂರು, ಸಂಪರ್ಕಿಸಿ
9036751306

CHANGE OF NAME
I, HECHIMANE MANDAMAIAH SUBBAMAIAH residing at #4305, 6th Cross, 17th Main, 2nd Stage, Vijayanagar, Mysuru - 570017 have changed my name from HECHIMANE MANDAMAIAH SUBBAMAIAH to HEMACHIMANE MANDAMAIAH SUBBAMAIAH vide affidavit sworn before Notary Geetha R. Mysore dated 25-03-2025

ಬೇಕಾಗಿದ್ದಾರೆ
50 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ಸ್ ಪುರುಷರು, ಭಾರತೀಯ ವಿದ್ಯಾಭವನ, ವಿಜಯನಗರ, ಜಯಲಕ್ಷ್ಮೀಪುರಂ, ಒಂಟಿಕೊಪ್ಪಲ್, ದೇವೇಗೌಡ ವೃತ್ತ, ರೇಸ್‌ಕೋರ್ಸ್ ಪಕ್ಕ ಹಾಗೂ ಬನ್ನಿಮಂಟಪ, ಸಂಪರ್ಕಿಸಿ
9900481819, 9972945905

Wanted
Part time Lecturer
English, Accountancy, History, Political Science, Office Assistant, Attender.
Mob: 9448601454

ಬೇಕಾಗಿದ್ದಾರೆ
ಸಪ್ಲೆಯರ್ ಹಾಗೂ ಕುಕ್ ಅಸಿಸ್ಟೆಂಟ್ ಬೇಕಾಗಿದ್ದಾರೆ. (ನಾನ್ ವೆಜ್ ಹೋಟೆಲ್, ಸರಸ್ವತಿಪುರಂ, ಮೈಸೂರು)
Mob: 9738405038

ಸೈಟುಗಳು ಮಾರಾಟಕ್ಕಿವೆ
ಮುಡಾದಿಂದ ಅನುಮೋದನೆಗೊಂಡ ದಡದಹಳ್ಳಿ ಗ್ರಾಮಕ್ಕೆ ಹೊಂದಿಕೊಂಡಂತೆ 40x60 ಸೈಟುಗಳು ಮಾರಾಟಕ್ಕಿವೆ.
7019781596

MUDA APPROVED SITES FOR SALE
Anandasagara, Nityanandasagara, Kuberananda Sagara. 30x40, 60x40 All facing available. 1st Stage.
JK: 8951144240



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ದಸರಾ ಹಬ್ಬದ ಪ್ರಯುಕ್ತ ಎಲ್ಲ ಪ್ರವಾಸಗಳು ಎಸಿ ಬಸ್ಸಿನಲ್ಲಿ ಇರುತ್ತದೆ
6 ದಿನಗಳ ಶಿರಡಿ ಪ್ರವಾಸ ಪಂಢರಪುರ, ತ್ರಯಂಬಕೇಶ್ವರ, ಗೃಷ್ಣೇಶ್ವರ, ಭೀಮಾಶಂಕರ, ಮಿನಿ ಬಾಲಾಜಿ, ಕೊಲ್ಲಾಪುರ, ಸವದತ್ತಿ 3/10/25 7 ದಿನಗಳ ಕೇರಳ ಪ್ರವಾಸ ಗುರುವಾಯೂರ್, ಮುನ್ನಾರ್, ಕಾಲಡಿ, ತೇಕಾಡಿ, ಅಲೆಪ್ಪಿ 3/10/25, 6 ದಿನಗಳ ಗೋವಾ ಮತ್ತು ಗೋಕರ್ಣ ಪ್ರವಾಸ, ದಾಂಡೇಲಿ, ದೂದ್ ಸಾಗರ್, ಸಹಸ್ರಲಿಂಗ 3/10/25, 5 ದಿನಗಳ ಆಂಧ್ರ ಪ್ರದೇಶ ಪ್ರವಾಸ ಮಂತ್ರಾಲಯ, ಹೈದರಾಬಾದ್, ಶ್ರೀ ಶೈಲಂ, ಅಹೋಬಲಂ, ಮಹಾ ನಂದಿ 3/10/25 ಸುವರ್ಣ ಯಾತ್ರಾ
9480843945 / 9019462508

ಸೈಟು ಮಾರಾಟಕ್ಕಿದೆ
20x30 ಪೂರ್ವ ದಿಕ್ಕು, ಡಿಸಿ ಕನ್‌ವರ್ಷನ್, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ, ದಟ್ಟಗಳ್ಳಿ 45 ಲಕ್ಷ ಅಥವಾ ಮನೆ ಕಟ್ಟಿಕೊಡುತ್ತೇವೆ 92 ಲಕ್ಷ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ.
Mob: 9663663373

House & site SALE
40x60 house sale at Ramakrishna nagar, Kuvempunagar & Saraswathi puram, 30x40, house at Ramakrishna nagar. 40x60 site sale Saraswathi puram.30x40 site sale at Rajeev Nagar (Tippu Town)
Mob: 7353430309

ಮನೆ ಮಾರಾಟಕ್ಕಿದೆ
20X30 ಮನೆ 57 ಲಕ್ಷ, ದಟ್ಟಗಳ್ಳಿ. 30X50 ಮನೆ ಡ್ಯೂಪ್ಲೆಕ್ಸ್, ದಟ್ಟಗಳ್ಳಿ. 30X40 ಸೈಟು ರಿಂಗ್ ರೋಡ್ ಹತ್ತಿರ 55 ಲಕ್ಷ.
Mob: 9945042875

ಸೈಟುಗಳು ಮಾರಾಟಕ್ಕಿವೆ
ಹೆಚ್.ಡಿ. ಕೋಟೆ ರಸ್ತೆಗೆ ಹೊಂದಿಕೊಂಡಂತೆ ಮುಳ್ಳೂರು ಗ್ರಾಮದ ಸರ್ವೆ ನಂಬರ್‌ನಲ್ಲಿ ಬರುವ ಡಿಟಿಸಿಪಿ ಯಿಂದ ಅನುಮೋದನೆಗೊಂಡ ಸೈಟುಗಳು ಮಾರಾಟಕ್ಕಿವೆ.
9606981204

ನಿಮ್ಮ ವಯಸ್ಸಾದ ವೃದ್ಧರನ್ನು ಇರಿಸಲು ಸುಸಜ್ಜಿತವಾದ, ಮೆಡಿಕಲ್ ಸೌಲಭ್ಯವಿರುವ, ಶುದ್ಧ ಸಸ್ಯಾಹಾರಿ ಆಹಾರ, 24/7 ಬಿಸಿ ನೀರು, ಯೋಗ, ಮನರಂಜನೆ ಎಲ್ಲವೂ ಉಳ್ಳ ಒಂದು ಸುಂದರ ವೃದ್ಧಾಶ್ರಮಕ್ಕಾಗಿ ಇಂದೇ ಒಮ್ಮೆ ಭೇಟಿ ಕೊಡಿ. ಸ್ಥಳ: ನಾಯ್ಡುನಗರ, ಮೈಸೂರು. ಸಂಪರ್ಕಿಸಿ
9916905188

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Residential & Commercial Plots in & around Mysore
Apartments @ Ramakrishna Nagar
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

ಕೆಲಸಕ್ಕೆ ಬೇಕಾಗಿದ್ದಾರೆ
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್ ಮಾಡುವ ಓಮ್ನಿ ಕಾರಿಗೆ ಡ್ರೈವರ್ ಬೇಕಾಗಿದ್ದಾರೆ ಮತ್ತು ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸ್ಥಳ: ಡಾ॥ ರಾಜ್‌ಕುಮಾರ್ ರಸ್ತೆ, ತ್ರಿವೇಣಿ ಸರ್ಕಲ್ ಹತ್ತಿರ.
Mob: 8861221755

ಸೈಟು ಮಾರಾಟಕ್ಕಿದೆ
1) DTCP APPROVED KRS back water, 30x40 1700 Rs./sft. (2) Chamundi hill back side 30x40 MDA APPROVED 5600 Rs/sft. (3) Attached Vijayanagar 4th Stage 30x50 and odd dimension, MUDA APPROVED 3800 Rs/SFT. (4) BHOGADI Brigade Apartment back side flats for sale 7000 Rs/sft.
Contact - LISHA PROPERTIES
Mob: 8151035074, 9164573142,9035012579

ಸೈಟು ಮಾರಾಟಕ್ಕಿದೆ
50x80 ಸೈಟು ಸುವರ್ಣ ನಗರದಲ್ಲಿ ಮಾರಾಟಕ್ಕಿದೆ ದಕ್ಷಿಣ ದಿಕ್ಕು 60 ಅಡಿ ರಸ್ತೆ ಬೆಲೆ 1 ಕೋಟಿ 10 ಲಕ್ಷ ಫೈನಲ್
Mob: 9886387272

House for Sale
New 3 BHK independent house, East face @ Lalithadri Nagar (South) near Ring Road, Behind Indian Oil Petrol Bunk.
9110696752, 9663452259

ಸೈಟು ಬೇಕಾಗಿದೆ
ಚಿಕ್ಕಹಳ್ಳಿ / ವಾಜಮಂಗಲ / ವರುಣ / ಜೆಎಸ್‌ಎಸ್ 2ನೇ ಹಂತ / ವರುಣ ಬಸವೇಶ್ವರ / ನಿರ್ಮಾಣ್‌ನಗರ / ಲಲಿತಾದ್ರಿನಗರ / ಪೊಲೀಸ್ ಲೇಔಟ್ ಹಾಗೂ ಅಕ್ಕಪಕ್ಕದ ಬಡಾವಣೆಗಳಲ್ಲಿ. ಟಿ.ನರಸೀಪುರ ರಸ್ತೆ / ಬನ್ನೂರು ರಸ್ತೆ.
9686071750

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ 50 ವರ್ಷದೊಳಗಿನ ಪುರುಷರು ಬೈಕ್ ಇರುವಂತಹವರು ಬೇಕಾಗಿದ್ದಾರೆ. SSLC, PUC ವಿದ್ಯಾರ್ಹತೆ ಇರಬೇಕು. ಸಾತಗಳ್ಳಿ ಹಂಚ್ಯಾ, ಮಹದೇವಪುರ, ಹಂಪಾಪುರ, ದಾರಿಪುರ, ಭುಗತಗಳ್ಳಿ, ರಾಜೀವ್‌ನಗರ, ಹಾಗೂ ಸುತ್ತಮುತ್ತಲಿನವರು ಸಂಪರ್ಕಿಸಿ
7259598615

ನಿಮ್ಮ ಮನೆಯಲ್ಲಿ ನಲ್ಲಿ ಮತ್ತು ಸ್ಯಾನಿಟರಿ ಕೆಲಸ, ಟೈಲ್ಸ್ ಕೆಲಸ, ತಾರಸಿ ಸೋರಿಕೆ, ಬಣ್ಣದ ಕೆಲಸ, ಎಲೆಕ್ಟ್ರಿಕಲ್ ಕೆಲಸ, ಇಂಟೀರಿಯರ್ ಕೆಲಸ, ಹಾಗೂ ಸಿವಿಲ್ ಅಲ್ಟ್ರೇಷನ್ ಕೆಲಸದ ತೊಂದರೆ ಇದ್ದರೆ... ಕರೆ ಮಾಡಿ:
VASANTHA BUILDERS
Mob: 8151035074, 9035012579, 91645731421

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಸೇಂಟ್ ಜೋಸೆಫ್ ಸ್ಕೂಲ್, ಆಚಾರ್ಯ ವಿದ್ಯಾಕುಲ ಶಾಲೆಯ ಹತ್ತಿರ 20x30 ಅಳತೆಯ 3 ಬಿಹೆಚ್‌ಕೆ, ಡ್ಯೂಪ್ಲೆಕ್ಸ್, ಫುಲ್ ಫರ್ನಿಷ್ಡ್, ಓನ್ ಬೋರ್‌ವೆಲ್, MUDA Approved ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050, 960625801

ITIಗೆ ಪ್ರವೇಶಾವಕಾಶ
ITI (Fitter-NSQF) ವೃತ್ತಿಗೆ SSLC / PUC, Pass / Fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶ ವಿರುತ್ತದೆ. N.C.V.T ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
WANTED: Junior Training Officer - Preferable : Girl Candidates
Eligiblity: Diploma / Degree Machanical Engg. (Freshers can also apply)
BENAKA ITI COLLEGE
Near Cauvery Circle, Dr. Rajkumar Road, Raghavendra Nagar, Mysore.
9342123467 / 9141756695

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮಾದೇಗೌಡನಹುಂಡಿ ಪಿಎಸಿಎಸ್‌ಗೆ ಅಂಬರೀಷ ಅಧ್ಯಕ್ಷ



ಮಾದೇಗೌಡನಹುಂಡಿ ಪಿಎಸಿಎಸ್ ಅಧ್ಯಕ್ಷರಾಗಿ ಅಂಬರೀಷ ಅವಿರೋಧವಾಗಿ ಆಯ್ಕೆಯಾದರು.

ತಿ.ನರಸೀಪುರ, ಆ.29– ತಾಲೂಕಿನ ಮಾದೇಗೌಡನಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಅಂಬರೀಷ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ರಾಜೇಶ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಶುಕ್ರವಾರ ಸಂಘದ ಆವರಣದಲ್ಲಿ ಚುನಾವಣೆ ನಡೆಯಿತು. ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಅಂಬರೀಷ ಅವರನ್ನು ಹೊರತು ಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಹಸೀನಾ ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಸಹಕಾರ ಸಂಘದ ಮುಂದೆ ಜಮಾಯಿಸಿದ್ದ ಬೆಂಬಲಿಗರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಿಸಿದರು.

ಚುನಾವಣಾ ವಿಶೇಷ ಸಭೆಯಲ್ಲಿ ಉಪಾಧ್ಯಕ್ಷೆ ನಾಗಮ್ಮ, ನಿಕಟಪೂರ್ವ ಅಧ್ಯಕ್ಷ ರಾಜೇಶ್, ನಿರ್ದೇಶಕರಾದ ಹೆಚ್.ಎನ್.ದೇವರಾಜು, ಸಿ.ನಾಗರಾಜು, ವೆಂಕಟೇಶ, ನಾಗೇಂದ್ರ, ಶ್ರೀನಿವಾಸ, ಎನ್.ಅನಿಲ್ ಕುಮಾರ್, ಗುರು, ನಾಗಮ್ಮ ಹಾಜರಿದ್ದು ನೂತನ ಅಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಎಪಿಎಂಸಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಸಂಘದ ಅಧ್ಯಕ್ಷರನ್ನು ಒಮ್ಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಸರ್ಕಾರದಿಂದ ಯಾವುದೇ ಸೌಲಭ್ಯ ಬಂದರೂ ಷೇರುದಾರರಿಗೆ ತಲುಪಿಸುವ ಕೆಲಸವನ್ನು ಅಧ್ಯಕ್ಷರು ಮಾಡಬೇಕು. ಸಂಘದಿಂದ ನೀಡುವ ಸಾಲವನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವಂತೆ ನೂತನ ಅಧ್ಯಕ್ಷರಿಗೆ ಸಲಹೆ ನೀಡಿದರು. ನಮ್ಮ ಕ್ಷೇತ್ರದ ಶಾಸಕರೇ ರಾಜ್ಯದ ಮುಖ್ಯಮಂತ್ರಿಯಾಗಿರುವುದರಿಂದ ಅವರೊಂದಿಗೆ ಸಂಪರ್ಕ ಸಾಧಿಸಿ ಹೆಚ್ಚಿನ ಅನುದಾನ ತರುವ ಮೂಲಕ ಗ್ರಾಮದ ಸಹಕಾರ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡಲು ಶ್ರಮವಹಿಸುವಂತೆ ತಿಳಿಸಿದರು.

ನೂತನ ಅಧ್ಯಕ್ಷ ಅಂಬರೀಷ ಮಾತನಾಡಿ, ನನ್ನ ಅವಿರೋಧ ಆಯ್ಕೆಗೆ ಕಾರಣರಾದ ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡರಿಗೆ ಆಭಾರಿಯಾಗಿರುತ್ತೇನೆ. ಅವರ ಮಾರ್ಗದರ್ಶನದಲ್ಲಿ ಮಾದೇಗೌಡನಹುಂಡಿ ಕೃಷಿ ಪತ್ತಿನ ಸಹಕಾರ ಸಂಘವನ್ನು ಮಾದರಿ ಸಂಘವಾಗಿ ರೂಪಿಸಲು ಶ್ರಮಿಸಲಾಗುವುದು. ಸಹಕಾರ ಸಂಘದಲ್ಲಿ ಷೇರುದಾರರು ಉಳಿದರೆ ನಾವೆಲ್ಲರೂ ಉಳಿದಂತೆ. ಹಾಗಾಗಿ ನನ್ನ ಅಧಿಕಾರವಧಿಯಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಸಂಘದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಈ ವೇಳೆ ಗ್ರಾಪಂ ಮಾಜಿ ಸದಸ್ಯರಾದ ಮಲ್ಲೇಗೌಡ, ಹೊಂಬೇಗೌಡ, ಪ್ರೇಮಕುಮಾರ್, ಸುಧಾ ರಾಜು, ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯ ನಾಗರಾಜು, ಶಿವು, ರಾಮಕೃಷ್ಣ, ಮಾದೇಗೌಡ, ಹೆಚ್.ಸಿ.ಚಂದ್ರ ವಿಶ್ವನಾಥ್, ಸಂಘದ ಇಓ ಸಿ.ರಾಜೇಶ್, ಮೇಲ್ವಿಚಾರಕ ಮಂಜುನಾಥ್ ಸೇರಿದಂತೆ ಗ್ರಾಮಸ್ಥರು ಮುಖಂಡರು ಹಾಜರಿದ್ದರು.

ಧರ್ಮಸ್ಥಳ ವಿರುದ್ಧ ಅಪಪ್ರಚಾರ ಖಂಡಿಸಿ ಪ್ರತಿಭಟನೆ



ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಹುಣಸೂರು, ಆ.29– ಶ್ರೀಕ್ಷೇತ್ರ ಧರ್ಮಸ್ಥಳ ವಿರುದ್ಧ ಅಪಪ್ರಚಾರ ಖಂಡಿಸಿ ನಗರದ ಸಂವಿಧಾನ ವೃತ್ತದಲ್ಲಿ ಧರ್ಮದ ಉಳಿವಿಗಾಗಿ ಧರ್ಮಯುದ್ಧ ಘೋಷವಾಕ್ಯದೊಂದಿಗೆ ಶುಕ್ರವಾರ ತಾಲೂಕು ಬಿಜೆಪಿ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ನಗರಸಭಾಧ್ಯಕ್ಷ ಗಣೇಶ್ ಕುಮಾರ ಸ್ವಾಮಿ ಮಾತನಾಡಿ, ಧರ್ಮಸ್ಥಳದ ಬಗ್ಗೆ ಅಪಪ್ರಚಾರ ಮಾಡುತ್ತಿರುವ ಕಿಡಿಗೇಡಿಗಳನ್ನು ಬಂಧಿಸಲು ಸರ್ಕಾರ ಕ್ರಮ ಕೈಗೊಂಡು ಕ್ಷೇತ್ರದ ಪಾವಿತ್ರ್ಯತೆ ಉಳಿಸಬೇಕು. ಆ ಮೂಲಕ ಶ್ರದ್ಧಾ ಕೇಂದ್ರಗಳ ಮೇಲಿನ ಆಕ್ರಮಣ ತಡೆಯಬೇಕು ಎಂದು ಆಗ್ರಹಿಸಿದರು.

ನಾಗರಾಜ್ ಮಲ್ಲಾಡಿ, ಹನಗೋಡು ಮಂಜುನಾಥ್, ಮಹಿಳಾ ಮುಖಂಡರು ಮಾತನಾಡಿದರು. ಬಳಿಕ ಕಲ್ಪತರು ಸರ್ಕಲ್ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ, ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಭಾಗವಹಿಸಿದ್ದರು.

ಕ್ರೀಡೆಯಿಂದ ದೈಹಿಕ, ಮಾನಸಿಕ ಆರೋಗ್ಯ

ಮಲ್ಕುಂಡಿ, ಆ.29– ಕ್ರೀಡೆಯಲ್ಲಿ ಭಾಗವಹಿಸುವುದರಿಂದ ದೈಹಿಕ, ಮಾನಸಿಕವಾಗಿ ಸಧೃಡರಾಗಬಹುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ತಿಳಿಸಿದರು.

ಇಲ್ಲಿಗೆ ಸಮೀಪದ ಹಗಿನವಾಳು ಶ್ರೀಗುರು ಮಲ್ಲೇಶ್ವರ ಪ್ರೌಢಶಾಲಾ ವತಿಯಿಂದ ಆಯೋಜಿಸಿದ್ದ ಹುಲ್ಲಹಳ್ಳಿ ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡಾಕೂಟದಲ್ಲಿ ಭಾಗವಹಿಸುವುದರಿಂದ ಸ್ನೇಹ, ಪ್ರೀತಿ ಬೆಳೆಯುತ್ತದೆ. ವಿದ್ಯಾರ್ಥಿಗಳು ಪಠ್ಯದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು. ಗ್ರಾಮೀಣ ಭಾಗದಲ್ಲಿ ಇಂತಹ ಕ್ರೀಡಾಕೂಟವನ್ನು ಮತ್ತಷ್ಟು ಆಯೋಜಿಸುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಕ್ರೀಡೆಯ ಮಹತ್ವ ತಿಳಿಯುತ್ತದೆ ಎಂದರು.

ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ರಂಗನಾಥ್ ಮಾತನಾಡಿ, ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಭಾಗವಹಿಸುವುದು ಮುಖ್ಯ. ಅದು ಮುಂದಿನ ದಿನಗಳಲ್ಲಿ ಗೆಲುವಿಗೆ ಕಾರಣವಾಗುತ್ತದೆ. ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಗೆದ್ದು ಹೆಸರು ಮಾಡಿ ತಮ್ಮ ಜೀವನವನ್ನು ರೂಪಿಸಿಕೊಂಡಿರುವ ಅನೇಕರು ನಮ್ಮ ನಡುವೆ ಇದ್ದಾರೆ. ಗ್ರಾಮೀಣ ವಿದ್ಯಾರ್ಥಿಗಳು ತಮಗೆ ಆಸಕ್ತಿ ಇರುವ ಕ್ರೀಡೆಯಲ್ಲಿ ಭಾಗವಹಿಸಿ ಎಂದರು.

ಗ್ರಾಪಂ ಅಧ್ಯಕ್ಷೆ ಜಯಮ್ಮ, ಗ್ರಾಪಂ ಮಾಜಿ ಅಧ್ಯಕ್ಷ ಕುಮಾರ್, ರಂಗರಾಮು, ಧರ್ಮ ರತ್ನಾಕರ, ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ರಾಜಕುಮಾರ್, ರಾಜೇಂದ್ರ, ಬಿಆರ್‌ಸಿ ಬಾಲರಾಜ್, ಸಿಆರ್‌ಪಿ ಶಿವಕುಮಾರ್, ಸಂಘಟಕರು ಮಹೇಶ್ ಕುಮಾರ್, ಮುಖಂಡ ವೀರಭದ್ರಪ್ಪ, ಸೋಮಶೇಖರ್, ಚಿಕ್ಕಣ್ಣ, ವರದರಾಜು ಸೇರಿದಂತೆ ಇತರರಿದ್ದರು.



ಕ್ರೀಡಾಕೂಟದಲ್ಲಿ ಬಿಇಓ ಮಹೇಶ್ ಕ್ರೀಡಾ ಜ್ಯೋತಿ ಸ್ವೀಕರಿಸಿದರು.

ನಾಳೆ ನಂಜನಗೂಡಲ್ಲಿ ಅದ್ದೂರಿ ಭಗೀರಥ ಜಯಂತಿ

ಉಪ್ಪಾರ ಸಮುದಾಯ ಭವನಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ



ಸುದ್ದಿಗೋಷ್ಠಿಯಲ್ಲಿ ಉಪ್ಪಾರ ಸಮುದಾಯ ಜಿಲ್ಲಾಧ್ಯಕ್ಷ ನಾಗರಾಜು ಮಾತನಾಡಿದರು.

ನಂಜನಗೂಡು, ಆ.29– ನಗರದಲ್ಲಿ ಜಿಲ್ಲಾಡಳಿತದ ವತಿಯಿಂದ ಆ.31ರಂದು ಭಗೀರಥ ಜಯಂತಿ ಹಾಗೂ ಉಪ್ಪಾರ ಸಮುದಾಯ ಭವನದ ಶಂಕುಸ್ಥಾಪನೆ ಕಾರ್ಯಕ್ರಮ ಆಯೋಜಿಸಲಾಗಿದ್ದು, ಸಮುದಾಯದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಉಪ್ಪಾರ ಸಮುದಾಯ ಜಿಲ್ಲಾಧ್ಯಕ್ಷ ಕರಳಾಪುರ ನಾಗರಾಜು ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೊದಲಿಗೆ ಬೈಪಾಸ್ ರಸ್ತೆಯಲ್ಲಿ ಉಪ್ಪಾರ ಸಮುದಾಯ ಭವನಕ್ಕೆ ನಿಗದಿಯಾದ 20 ಗುಂಟೆ ಜಾಗದಲ್ಲಿ ಸಿಎಂ ಸಿದ್ದರಾಮಯ್ಯ ಬೆಳಗ್ಗೆ 10.30ಕ್ಕೆ ಉಪ್ಪಾರ ಸಮುದಾಯ ಭವನಕ್ಕೆ ಗುದ್ದಲಿ ಪೂಜೆ ನೆರವೇರಿಸುವರು. ನಂತರ ಬೆಳಗ್ಗೆ 11.30ಕ್ಕೆ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಭಗೀರಥ ಮಹರ್ಷಿ ಭಾವಚಿತ್ರವನ್ನು ಮೆರವಣಿಗೆ ಮಾಡಲಾಗುವುದು. ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಬೃಹತ್ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಕಾರ್ಯಕ್ರಮವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಶಾಸಕ ಪುಟ್ಟರಂಗಶೆಟ್ಟಿ, ಸಂಸದ ಸುನಿಲ್ ಬೋಸ್, ವಿಧಾನ ಪರಿಷತ್ ಸದಸ್ಯರಾದ ಯತೀಂದ್ರ, ಡಿ.ತಿಮ್ಮಯ್ಯ ಭಾಗವಹಿಸುವರು. ಶಾಸಕ ದರ್ಶನ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖಂಡ ಹೆಚ್.ಎಸ್.ಮೂಗಶೆಟ್ಟಿ ಮಾತನಾಡಿ, ಕಳೆದ 8 ವರ್ಷಗಳ ಹಿಂದೆ ಸಂಸದ ಆರ್.ಧ್ರುವನಾರಾಯಣ್ ಅದ್ದೂರಿ ಭಗೀರಥ ಜಯಂತಿ ನಡೆಸಿದ್ದರು. ಇದೀಗ ಅವರ ಪುತ್ರ ಶಾಸಕ ದರ್ಶನ್ ಭಗೀರಥ ಜಯಂತಿ ನಡೆಸುತ್ತಿದ್ದಾರೆ. ಸಮುದಾಯದ ಎಲ್ಲಾ ಬಾಂಧವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಮುಖಂಡ ಮಹದೇವು ಮಾತನಾಡಿ, ಕಾರ್ಯಕ್ರಮದಲ್ಲಿ 10 ಸಾವಿರ ಮಂದಿ ಭಾಗವಹಿಸುವ ನಿರೀಕ್ಷೆ ಹೊಂದಲಾಗಿದ್ದು, ಎಲ್ಲರಿಗೂ ಭೋಜನದ ವ್ಯವಸ್ಥೆ ಮಾಡಲಾಗಿದೆ ಎಂದರು.

ಮುಖಂಡ ಸೋಮಣ್ಣ ಮಾತನಾಡಿ, ಸಮುದಾಯದ ಜಿಲ್ಲಾಧ್ಯಕ್ಷ ಸ್ಥಾನ ಸಂಬಂಧ ಉಂಟಾಗಿರುವ ಗೊಂದಲಕ್ಕೆ ಜಯಂತಿ ಮುಗಿದ ನಂತರ ತೆರೆ ಬೀಳಲಿದೆ. ಸಮುದಾಯದ ರಾಜ್ಯಾಧ್ಯಕ್ಷ ಪುಟ್ಟರಂಗಶೆಟ್ಟಿ ಅವರು ಜಿಲ್ಲಾಧ್ಯಕ್ಷರ ಆಯ್ಕೆಯನ್ನು ಅಧಿಕೃತವಾಗಿ ಪ್ರಕಟಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ಮುಖಂಡರಾದ ಬಾಲಚಂದ್ರ, ಸೋಮಣ್ಣ, ಸಿದ್ಧಶೆಟ್ಟಿ, ಎಪಿಎಂಸಿ ಮಾಜಿ ಸದಸ್ಯ ಮುದ್ದುಮಾದಶೆಟ್ಟಿ, ಅಣ್ಣಯ್ಯಶೆಟ್ಟಿ, ಗೋವಿಂದರಾಜು, ಶ್ರೀನಿವಾಸ್, ಚಿಕ್ಕಣ್ಣ, ಶಂಕರಪ್ಪ, ಗ್ರಾಪಂ ಸದಸ್ಯ ಗೂಳೂರು ಮುದ್ದುಮಾದಶೆಟ್ಟಿ ಉಪ್ಪಾರ ಸಮುದಾಯದ ಕಾರ್ಯದರ್ಶಿ ನಾಗರಾಜು, ಸಂಚಾಲಕ ಯೋಗೀಶ್ ಸೇರಿದಂತೆ ಹಲವರಿದ್ದರು.

ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ

ತಿ.ನರಸೀಪುರ, ಆ.29– ನಂಜನಗೂಡಿನಲ್ಲಿ ನಡೆಯುವ ಶ್ರೀಭಗೀರಥ ಜಯಂತಿ ಕಾರ್ಯಕ್ರಮಕ್ಕೆ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಮುಖಂಡರು ಭಾಗವಹಿಸುವಂತೆ ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಸೋಮಣ್ಣ ಮನವಿ ಮಾಡಿದರು.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ನಡೆಯುವ ಭಗೀರಥ ಜಯಂತೋತ್ಸವವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು. ಅಲ್ಲದೇ ಬೆಳಗ್ಗೆ 10.30ಕ್ಕೆ ಉಪ್ಪಾರ ಸಮುದಾಯ ಭವನಕ್ಕೆ ಸಿಎಂ ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಹೀಗಾಗಿ ತಾಲೂಕಿನ ಸಮುದಾಯದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು. ಭಗೀರಥ ಉಪ್ಪಾರ ಸಮಾಜದ ಮುಖಂಡ ಕೇತಹಳ್ಳಿ ಸಿದ್ದಶೆಟ್ಟಿ ಮಾತನಾಡಿದರು. ಗೋಷ್ಠಿಯಲ್ಲಿ ಉಪಾಧ್ಯಕ್ಷ ಹೊಸಹಳ್ಳಿ ಮೋಳೆ ಹರೀಶ್, ಪ್ರಧಾನ ಕಾರ್ಯದರ್ಶಿ ಎಂ.ಸಿ.ರಾಜಣ್ಣ, ಕೇತಹಳ್ಳಿ ಸಿದ್ದಶೆಟ್ಟಿ ಇದ್ದರು.

ತಾಲೂಕು ಉಪ್ಪಾರ ಸಂಘದ ಅಧ್ಯಕ್ಷ ಸೋಮಣ್ಣ ಪೋಸ್ಟರ್ ಬಿಡುಗಡೆ ಮಾಡಿದರು.



ಮೂರನೇ ಪುಟದಿಂದ

ಮುಸ್ಲಿಮರು ದಸರಾ ಅವಿಭಾಜ್ಯ ಅಂಗ

ಈ ರಾಜ್ಯ ಸರ್ವಜನಾಂಗದ ಶಾಂತಿಯ ತೋಟ. ರಾಜರ ಕಾಲದಲ್ಲಿ ಯುದ್ಧಕ್ಕೆ ಹೋಗುವ ಮೊದಲು ಇಮಾಮ್ ದರ್ಗಾಕ್ಕೆ ಬಂದು ಹೋಗುತ್ತಿದ್ದರು. ಇದು ಹೇಗೆ ಧಾರ್ಮಿಕ ಹಬ್ಬ ಆಗುತ್ತೆ ಇದು ನಾಡಹಬ್ಬ. ಈ ತೋಟವನ್ನು ಸ್ಮಶಾನ ಮಾಡಲು ಹೊರಟಿರುವುದು ಪ್ರತಾಪ್ ಸಿಂಹ ಎಂದು ಕಿಡಿಕಾರಿದರು.

ಈ ವಿಚಾರಕ್ಕೆ ಫತ್ವಾ ಹೊರಡಿಸಬೇಕಾಗಿಲ್ಲ: ಹಜರತ್ ಮೌಲಾನಾ ಡಾ.ಮಕ್ಸೂದ್ ಇಮ್ರಾನ್ ಮಾತನಾಡಿ, ಬಾನು ಮುಷ್ತಾಕ್ ದಸರಾ ಉದ್ಘಾಟನೆಗೆ ಹೋಗಬಾರದು ಎನ್ನುವುದು ತಪ್ಪು. ಈ ವಿಚಾರಕ್ಕೆ ಫತ್ವಾ ಹೊರಡಿಸಬೇಕಾಗಿಲ್ಲ. ಭಾರತದಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತರು ಸೇರಿ ಎಲ್ಲರೂ ಒಗ್ಗಟ್ಟಾಗಿದ್ದಾರೆ. ಇಲ್ಲಿ ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರ ಎಲ್ಲವೂ ಇದೆ ನಮ್ಮಲ್ಲಿ ಯಾವುದೇ ಭೇದ-ಭಾವ ಇಲ್ಲ. ಮಸೀದಿಗೆ ಶಾಸಕ ಉದಯ್ ಗರುಡಾ ಚಾರ್ ನಮಾಜ್ ಮಾಡ್ತಾರೆ. ಹಾಗಂತ ಶಾಸಕ ಉದಯ್ ಗರುಡಾಚಾರ್ ಮುಸ್ಲಿಮರಾಗುತ್ತಾರಾ ಅನೇಕ ಮುಸ್ಲಿಮರು ದೇಗುಲಕ್ಕೆ ಹೋಗುತ್ತಾರೆ, ಅವರು ಹಿಂದೂಗಳಾಗ್ತಾರಾ ದರ್ಗಾಕ್ಕೆ ಪ್ರಧಾನಿ ಮೋದಿ ಚಾದರ ಕಳಿಸುತ್ತಾರೆ ಅವರು ಮುಸ್ಲಿಂ ಆಗುತ್ತಾರಾ ದರ್ಗಾಗೆ ಬರಬೇಕಾದ್ರೆ ಮುಸ್ಲಿಂ ಆಗಲೇಬೇಕು ಅಂತ ಇಲ್ಲ. ಹಿಂದೂ ಆದ್ರೆ ಮಾತ್ರ ದೇವಸ್ಥಾನಕ್ಕೆ ಹೋಗಬೇಕೆಂದಿಲ್ಲ. ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರನ್ನು ಕರೆದಿದ್ದಾರೆ. ಹೋಗುವುದು ಬಿಡುವುದು ಅವರ ಇಷ್ಟ ಆದರೆ ಸಾಹಿತಿ ಬಾನು ಮುಷ್ತಾಕ್ ಅವರನ್ನ ಹೋಗಬಾರದು ಎನ್ನುವುದು ತಪ್ಪು ಎಂದು ಹೇಳಿದರು.

ಸಂವಿಧಾನ ಬದ್ಧವಾಗಿದ್ದರೆ ಯಾರು ಬೇಕಾದರೂ ದಸರಾ ಉದ್ಘಾಟನೆ ಮಾಡಬಹುದು



ಬೆಂಗಳೂರು: ಸಂವಿಧಾನದ ಪ್ರಕಾರವಾಗಿ ದಸರಾ ಉದ್ಘಾಟನೆ ಬಗ್ಗೆ ಸರ್ಕಾರ ನಿರ್ಧಾರ ಮಾಡಿದರೆ ನಾವು ಅದನ್ನು ಒಪ್ಪಬೇಕು ಎಂದು ಸ್ಪೀಕರ್ ಯು.ಟಿ.ಖಾದರ್ ತಿಳಿಸಿದ್ದಾರೆ. ಬಾನು ಮುಷ್ತಾಕ್ ದಸರಾ ಉದ್ಘಾಟನೆಗೆ ಬಿಜೆಪಿ ವಿರೋಧ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ದಸರಾ ಉದ್ಘಾಟನೆ ವಿಚಾರದಲ್ಲಿ ಆಡಳಿತ ಹಾಗೂ ವಿಪಕ್ಷಗಳು ಮಾತಾಡಲಿ. ಸಂವಿಧಾನ ಬದ್ಧವಾಗಿ ಇದೆಯಾ, ಇಲ್ವಾ ಎಂದು ಮಾತ್ರ ನಾವು ನೋಡ್ತೀವಿ ಎಂದಿದ್ದಾರೆ.

ಸ್ಪೀಕರ್ ವಾರ್ನಿಂಗ್: ಇದೇ ವೇಳೆ ಧರ್ಮಸ್ಥಳ ಕೇಸ್ ವಿಚಾರದ ಬಗ್ಗೆ ಮಾತನಾಡಿ, ಧರ್ಮಸ್ಥಳ ಕೇಸ್‌ನಲ್ಲಿ ಎಸ್‌ಐಟಿ ತನಿಖಾ ವರದಿ ಬರೋವರೆಗೂ ಯಾರು ಕೂಡ ನ್ಯಾಯಾಧೀಶರು ಆಗಬಾರದು. ಸರ್ಕಾರ ಎಸ್‌ಐಟಿ ರಚನೆ ಮಾಡಿದೆ, ತನಿಖೆ ಆಗುತ್ತಿದೆ. ಕ್ಷೇತ್ರದ ಪಾವಿತ್ರ್ಯತೆ ನಮಗೆ ಮುಖ್ಯ ಎಂದರು. ಒಂದು ಶಿಕ್ಷಣ ಸಂಸ್ಥೆಯ ಗೌರವ ಉಳಿಯೋದು ಮುಖ್ಯ. ಒಂದು ಸಂಸ್ಥೆಯನ್ನ ಕಟ್ಟೋದು ತುಂಬಾ ಕಷ್ಟ, ಕಪ್ಪು ಚುಕ್ಕೆ ಇಡೋದು ಸುಲಭ. ಎಸ್‌ಐಟಿ ತನಿಖೆ ವರದಿ ಬರಲಿ. ಅಲ್ಲಿಯವರೆಗೆ ಎಲ್ಲರೂ ಕಾಯಬೇಕು. ವರದಿ ಬಂದ ಮೇಲೆ ಎಲ್ಲರೂ ಮಾತಾಡಿ ಎಂದು ತಿಳಿಸಿದರು.

ಉದ್ಘಾಟನೆಗೆ ನನ್ನ ವಿರೋಧವಿದೆ

ನಾಡ ಹಬ್ಬ, ಚಾಮುಂಡೇಶ್ವರಿಗಾಗಲಿ ಯಾವುದೇ ಅಪಚಾರ ಬಾರದಂತೆ ನೋಡಿಕೊಳ್ಳುವುದು ಸರ್ಕಾರದ ಕರ್ತವ್ಯ ಎಂದಿದ್ದರು. ಈಗ ಕನ್ನಡಾಂಬೆ ಕುರಿತು ಸಮರ್ಥನೆ ಕೊಟ್ಟರೆ ಮಾತ್ರ ದಸರಾ ಉದ್ಘಾಟಿಸಲಿ ಎಂದು ಯೂಟರ್ನ್ ಹೊಡೆದಿದ್ದಾರೆ.

ದಸರಾ ಉದ್ಘಾಟನೆಗೆ ಸರ್ಕಾರ ಅವರನ್ನು ಆಯ್ಕೆ ಮಾಡಿದಾಗ ನಾನು ಆ ನಿರ್ಧಾರವನ್ನು ಸ್ವಾಗತಿಸಿದ್ದೆ. ಆದರೆ, ಈಗ ಅವರ ಹಳೆಯ ಭಾಷಣದ ತುಣುಕನ್ನು ನೋಡಿದೆ. ಆ ಭಾಷಣಕ್ಕೆ ಅವರು ಸ್ಪಷ್ಟೀಕರಣ ಕೊಡಲಿ ಅಥವಾ ಆ ಹೇಳಿಕೆಯನ್ನು ವಾಪಸ್ ಪಡೆಯಲಿ ಎಂದ ಅವರು, ಸ್ಪಷ್ಟೀಕರಣ ನೀಡದಿದ್ದರೆ, ದಸರಾ ಉದ್ಘಾಟನೆಗೆ ನನ್ನ ವಿರೋಧವಿದೆ. ಪಕ್ಷದ ನಿರ್ಧಾರವೇ ನನ್ನ ನಿರ್ಧಾರ. ಪಕ್ಷದ ವಿರುದ್ಧದ ನಿಲುವಿಗೆ ಸಮ್ಮತಿಯಿಲ್ಲ ಎಂದು ಅವರು ಹೇಳಿದ್ದಾರೆ. ಚಾಮುಂಡಿ ಬೆಟ್ಟವು ಧಾರ್ಮಿಕ ಸ್ಥಳವಾಗಿದೆ ಮತ್ತು ಪ್ರತಿಯೊಬ್ಬರೂ ದೇವಿಯನ್ನು ಪೂಜಿಸುತ್ತಾರೆ. ಅವರ ಧರ್ಮದ ಆಚರಣೆ ಬಗ್ಗೆ ನಾನು ಮಾತನಾಡುವುದಿಲ್ಲ. ಆದರೆ, ನಮ್ಮ ಧರ್ಮದಲ್ಲಿ ಮೂರ್ತಿ ಪೂಜೆಯೇ ಶ್ರೇಷ್ಠ. ಅವರು ಮೊದಲು (2023 ರಲ್ಲಿ) ಏಕೆ ಹಾಗೆ ಹೇಳಿದರು ಎಂಬುದನ್ನು ಸ್ಪಷ್ಟಪಡಿಸಬೇಕು. ಅವರು ತಮ್ಮ ಹೇಳಿಕೆಯನ್ನು ಹಿಂತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ, ಅದು ಹಿಂದೂ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ವಿಷಯವಾಗಿದೆ ಎಂದು ಅವರು ಹೇಳಿದರು.

ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮದ ಸಮಯದಲ್ಲಿ ಅವರ ಹೇಳಿಕೆಯು ಹಿಂದೂ ಭಾವನೆಗಳಿಗೆ ಧಕ್ಕೆ ತರುವುದಿಲ್ಲ ಎಂಬುದನ್ನು ಅವರು ವಿವರಿಸಬೇಕಾಗಿದೆ. ಇದು ಧರ್ಮ ಮತ್ತು ಕನ್ನಡ ಭಾಷೆಗೆ ಸಂಬಂಧಿಸಿದ ವಿಷಯವಾಗಿರುವುದರಿಂದ ಅವರು ವಿವರಣೆಯನ್ನು ನೀಡಬೇಕಾಗಿದೆ. ಕರ್ನಾಟಕ ಮತ್ತು ಕನ್ನಡ ಭಾಷೆ ಭುವನೇಶ್ವರಿ ದೇವಿಯೊಂದಿಗೆ ಸಂಬಂಧ ಹೊಂದಿದೆ ಎಂದು ಯದುವೀರ್ ಹೇಳಿದರು.

ಅನುಮತಿ ಪಡೆಯಬೇಕು

ಕೈಂಕರ್ಯದಲ್ಲಿ ತಾವೇ ಸ್ವಂತ ಭಾಗಿಯಾದರೆ ಭಾನು ಮುಷ್ತಾಕ್ ಫತ್ವಾ ಇನ್‌ಸ್ಟಿಟ್ಯೂಷನ್‌ನಿಂದ ಅನುಮತಿ ತೆಗೆದುಕೊಳ್ಳಬೇಕು. ಇದಕ್ಕೆ ಫತ್ವಾ ಇನ್‌ಸ್ಟಿಟ್ಯೂಷನ್ ಅವರು ಏನು ಹೇಳುತ್ತಾರೋ ನೋಡಬೇಕು. ಅದು ಅವರಿಗೆ ಬಿಟ್ಟ ವಿಚಾರ. ನಾನು ಬಾನು ಮುಷ್ತಾಕ್ ಅವರಿಗೆ ಸಲಹೆ ಮಾತ್ರ ಕೊಡಬಹುದು ಎಂದು ಹೇಳಿದರು.

ಉದ್ಘಾಟನೆ ಮಾಡೋದಾದ್ರೆ ಬನ್ನಿ...

ನಿಮಗೆ ಆತ್ಮಸಾಕ್ಷಿ ಇಲ್ವಾ? ಅದ್ಹೇಗೆ ನೀವು ಉದ್ಘಾಟನೆಗೆ ಒಪ್ಪಿಕೊಂಡ್ರಿ? ಬಾನು ಮೇಡಂ ನಿಮ್ಮ ಅಲ್ಲಾನೇ ನಿಮ್ಮನ್ನು ಮಸೀದಿ ಒಳಗೆ ಬಿಟ್ಟಿಲ್ಲ. ಇನ್ನು ನಮ್ಮ ಅರಿಶಿಣ ಕುಂಕುಮವಿಟ್ಟ ಚಾಮುಂಡಿ ನಿಮ್ಮನ್ನು ಬೆಟ್ಟಕ್ಕೆ ಕರೆಸಿಕೊಳ್ಳುತ್ತಾಳಾ? ನೀವು ಸೀರೆಯುಟ್ಟು, ಅರಿಶಿಣ, ಕುಂಕುಮ ಮತ್ತು ಹೂವಿಟ್ಟು ಬಂದು ದಸರಾ ಉದ್ಘಾಟನೆ ಮಾಡೋದಾದ್ರೆ ದಸರಾಗೆ ಬನ್ನಿ ಎಂದಿದ್ದಾರೆ.

ನನ್ನನ್ನು ಮತಾಂತರ ಮಾಡದೇ ಮೆಕ್ಕಾಗೆ ಕಳುಹಿಸ್ತೀರಾ?: ನಾವು ನೆಲ, ಜಲ, ಪರಿಸರದಲ್ಲಿ ದೇವರನ್ನು ಕಾಣುತ್ತೇವೆ. ಇದು ನಮ್ಮ ಧರ್ಮ. ಮರುಭೂಮಿಯ ಮರಳಿನಲ್ಲಿ ಹುಟ್ಟಿದ ಧರ್ಮ ನಮ್ಮದಲ್ಲ. ಬಾನು ಮುಷ್ತಾಕ್ ಅವರೇ ನಿಮಗೆ ನಮ್ಮ ಧರ್ಮದ ಹಬ್ಬವನ್ನು ಉದ್ಘಾಟನೆ ಮಾಡಲು ಮನಸ್ಸಾದ್ರೂ ಹೇಗೆ ಒಪ್ಪುತ್ತೆ? ವಿವಿಧತೆಯಲ್ಲಿ ಏಕತೆ ಬರೀ ಹಿಂದೂಗಳಲ್ಲಿ ಮಾತ್ರ. ಆದರೆ ಮುಸ್ಲಿಂ, ಕ್ರಿಶ್ಚಿಯನ್ನರಲ್ಲಿ ಇದು ಇಲ್ಲ. ನಾವು ಹೆಣ್ಣು ಮಕ್ಕಳಲ್ಲಿ ದೇವಿಯಲ್ಲಿ ಕಾಣುತ್ತೇವೆ. ನಿಮ್ಮ ಧರ್ಮದಲ್ಲಿ ಹೆಣ್ಣನ್ನು ಭೋಗದ ವಸ್ತುವಾಗಿ ಬಳಸಿಕೊಳ್ಳುತ್ತೀರಾ. ನನ್ನನ್ನು ಮತಾಂತರ ಮಾಡದೇ, ಸುನ್ನತ್ ಮಾಡಿಕೊಳ್ಳದೆ ಬರೀ ಪ್ರವಾಸಿಗನಾಗಿ ಮೆಕ್ಕಾಗೆ ಕಳುಹಿಸಿಕೊಡ್ತೀರಾ? ಇಲ್ಲ ಎಂದಾದರೆ ನೀವು ಹೇಗೆ ನಮ್ಮ ಸಂಸ್ಕೃತಿಯನ್ನು ಪಾಲಿಸದೆ ದಸರಾ ಉದ್ಘಾಟನೆಗೆ ಬರ್ತೀರಾ ಎಂದು ಕೇಳಿದ್ದಾರೆ.

ಧರ್ಮಸ್ಥಳ ಕೇಸ್‌ನಲ್ಲಿ ಯಾರೆಲ್ಲ ಇದ್ದಾರೆಂದು ನಿಮಗೆ ಗೊತ್ತಾಗಿದೆ. ಯಾರೋ ಬುರುಡೆ ದಾಸ ಏನೋ ಹೇಳಿದ ಎಂದು ಕನ್ವರ್ಟ್ ಕ್ರಿಶ್ಚಿಯನ್ ಚಿನ್ನಯ್ಯ ಈಗ ಬಾಯಿಬಿಟ್ಟಿದ್ದಾನೆ. ಸಮೀರ್ ತನ್ನ ಧರ್ಮದ ಬಗ್ಗೆ ಮಾತಾಡ್ತಾನಾ? ತುಂಡಾಗಿ ಉಳಿದಿರುವ ಹಿಂದೂ ಧರ್ಮ ಭೂಮಿಯನ್ನು ನಾವು ರಕ್ಷಣೆ ಮಾಡಬೇಕಿದೆ. ಗೌಡ, ಲಿಂಗಾಯತ, ಬ್ರಾಹ್ಮಣ, ಮರಾಠ, ಎಸ್ಟಿ, ಎಸ್ಸಿ ಆಗಬೇಡಿ. ಎಲ್ಲರೂ ಜಾತಿ ಎನ್ನುವ ದರಿದ್ರ ಮನಸ್ಥಿತಿಯಿಂದ ಹೊರ ಬಂದು ಹಿಂದೂಗಳಾಗಿ. ಧರ್ಮಸ್ಥಳದ ಅಪಪ್ರಚಾರದ ವಿರುದ್ಧ ಹಿಂದೂಗಳೆಲ್ಲ ಒಂದಾಗಿ ಎಂದು ಕರೆ ನೀಡಿದ್ದಾರೆ.

ದಸರಾ ಮಹೋತ್ಸವ-2025

ಅರಮನೆ ಮುಂಭಾಗದ ವೇದಿಕೆಯಲ್ಲಿ ಖ್ಯಾತ ನಾಮರ ಸಂಗೀತ ಸುಧೆ

● ಗಣೇಶ್.ಎ

ಮೈಸೂರು, ಆ.29-ದಸರಾ ಮಹೋತ್ಸವದಲ್ಲಿ ಅರಮನೆ ಮುಂದೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಈ ಬಾರಿ ಪದ್ಮಶ್ರೀ ಪುರಸ್ಕೃತ ಖ್ಯಾತ ಗಾಯಕರಾದ ಹರಿಹರನ್ ಗಾನ ಮಾಧುರ್ಯ ಸೇರಿದಂತೆ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಲಾವಿದರಿಂದ ಗಾಯನ, ನೃತ್ಯದ ಮೂಲಕ ಸಾಂಸ್ಕೃತಿಕ ಹೆಗ್ಗುರುತು ಅನಾವರಣಗೊಳ್ಳಲಿದೆ.

ಮೈಸೂರಿನ ಅಂಬಾವಿಲಾಸ ಅರಮನೆ ಮುಂಭಾಗ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅಭಿಮಾನಿಗಳ ಬಳಗವು ಇದ್ದು, ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಲಾವಿದರ ಗಾಯನ, ನೃತ್ಯದ ಮೂಲಕ ಪ್ರವಾಸಿಗರನ್ನು ಸೆಳೆಯುತ್ತಾರೆ. ಈ ಬಾರಿಯೂ ಅಭಿಮಾನಿಗಳ ಸದಭಿರುಚಿಯಂತೆ ಕಲಾವಿದರ ಆಯ್ಕೆಯಾಗಿದೆ.

ಚಾಮುಂಡಿ ಬೆಟ್ಟದಲ್ಲಿ ನಿರ್ಮಿಸುವ ಭವ್ಯ ವೇದಿಕೆಯಲ್ಲಿ ಉದ್ಘಾಟಕರು ದಸರಾ ಮಹೋತ್ಸವಕ್ಕೆ ವಿದ್ಯುಕ್ತ ಚಾಲನೆ ನೀಡುತ್ತಿದ್ದಂತೆ ನಗರದಾದ್ಯಂತ ದಸರಾ ಮೆರಗು ಹೆಚ್ಚಳಗೊಂಡು ಸಾಂಸ್ಕೃತಿಕ, ಕ್ರೀಡೆ, ಪರಂಪರೆಯನ್ನು ಬಿಂಬಿಸುವ ನಾನಾ ಬಗೆಯ ಚಟುವಟಿಕೆಗಳು ಆರಂಭಗೊಳ್ಳುತ್ತವೆ. ಸಂಜೆ ಆಗುತ್ತಿದ್ದಂತೆ ಕರ್ನಾಟಕ, ಶಾಸ್ತ್ರೀಯ ಸಂಗೀತ, ಹಿಂದೂಸ್ತಾನಿ, ಜನಪದ, ಭರತ ನಾಟ್ಯ, ತಬಲ, ಸಿತಾರ್, ವೀಣೆ ವಾದನದ ಅಭಿಮಾನಿಗಳು ಅರಮನೆ ಮುಂಭಾಗದ ಭವ್ಯ ವೇದಿಕೆಯಲ್ಲಿ ನಡೆಯುವ ಖ್ಯಾತ ನಾಮರ ಕಾರ್ಯಕ್ರಮ ನೋಡಿ ತಲೆದೂಗುತ್ತಾರೆ.

ಈ ಬಾರಿಯೂ ದಸರಾ ಸಾಂಸ್ಕೃತಿಕ ಸಮಿತಿ ವತಿಯಿಂದ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಲಾವಿದರು ಸೇರಿದಂತೆ ಮಹಿಳೆಯರು, ವಿಶೇಷ ಚೇತನರು, ಎಲ್ಲಾ ವರ್ಗದ ಕಲಾವಿದರು, ಎಲ್ಲಾ ಕಲಾ ಪ್ರಕಾರಗಳಿಗೆ ಅವಕಾಶ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಲಾವಿದರ ಆಯ್ಕೆ ಮಾಡಿದ್ದು, ಈಗಾಗಲೇ ರಾಜ್ಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಲಾವಿದರನ್ನು ಆಯ್ಕೆ ಮಾಡಲಾಗಿದೆ.

ದಸರಾ ಸಾಂಸ್ಕೃತಿಕ ಸಮಿತಿ ವತಿಯಿಂದ ಅರಮನೆ ಮುಂಭಾಗದ ವೇದಿಕೆ, ನಾದ ಬ್ರಹ್ಮ ಸಂಗೀತ ಸಭಾ, ಚಿಕ್ಕಗಡಿಯಾರ, ವೀಣೆ ಶೇಷಣ್ಣ ಭವನ, ಕಲಾಮಂದಿರ, ಟೌನ್ ಹಾಲ್, ಜಗನ್ಮೋಹನ ಅರಮನೆ ಹಾಗೂ ನಂಜನಗೂಡಿನ ಅರಮನೆ ಮಾಳ ಸೇರಿದಂತೆ 10 ಸ್ಥಳದಲ್ಲಿ ಸೆ.22ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಲಿದೆ.



'ಥೈಕ್ಕುಡಂ ಬ್ರಿಡ್ಜ್' ಬ್ಯಾಂಡ್



ನೀಲಾದ್ರಿ ಕುಮಾರ್



ಹರಿಹರನ್



ವಿಜಯ್ ಪ್ರಕಾಶ್



ಗುರುರಾಜ್



ಮಂಜುನಾಥ್



ಮೌಸಿಂ ಖಾನ್



ಅಭಿಷೇಕ್



ಅನನ್ಯ ಭಟ್



ಇಂದು, ಲಕ್ಷ್ಮಿ

ಸೆ.22ರಂದು ಸಂಜೆ 5 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅರಮನೆ ಮುಂಭಾಗದ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ. ಈ ವೇಳೆ ರಾಜ್ಯ ವಿದ್ವಾನ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. (ಪ್ರಶಸ್ತಿ ಪುರಸ್ಕೃತರ ಆಯ್ಕೆ ಅಂತಿಮಗೊಂಡಿಲ್ಲ.) ವೇದಿಕೆ ಕಾರ್ಯಕ್ರಮದ ನಂತರ ಪದ್ಮಶ್ರೀ ಪುರಸ್ಕೃತ ಖ್ಯಾತ ಗಾಯಕರಾದ ಹರಿಹರನ್ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ಜಿಲ್ಲಾ ಪಂಚಾಯಿತ್ ಸಿಇಒ ಹಾಗೂ ದಸರಾ ಸಾಂಸ್ಕೃತಿಕ ಉಪಸಮಿತಿಯ ವಿಶೇಷಾಧಿಕಾರಿ ಎಸ್.ಯುಕೇಶ್ ಕುಮಾರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಂತರದ ದಿನಗಳಲ್ಲಿ ಬಹು ಪ್ರಕಾರದ ಭಾರತೀಯ ಸಂಗೀತವನ್ನು ಕೇರಳ ಮೂಲದ 'ಥೈಕ್ಕುಡಂ ಬ್ರಿಡ್ಜ್' ಬ್ಯಾಂಡ್ ಪ್ರಸ್ತುತ ಪಡಿಸಲಿದ್ದಾರೆ. ಅದೇ ದಿನ ಖ್ಯಾತ ಕರ್ನಾಟಕ ಸಂಗೀತ ಗಾಯಕ ಅಭಿಷೇಕ್ ರಘುರಾಮ್ ಸಂಗೀತ ಸುಧೆಹರಿಸಲಿದ್ದಾರೆ. ಸೀತಾರ್ ವಾದಕರಾದ ನೀಲಾದ್ರಿ ಕುಮಾರ್ ಮತ್ತು ಧಾರವಾಡದ ಡಾ.ಮೌಸಿಂ ಖಾನ್ ಅವರು ಸೀತಾರ್ ಮೂಲಕ ಮೂಕ ವಿಸ್ಮಿತರಾಗಿಸಲಿದ್ದಾರೆ. ಇವುಗಳ ನಡುವೇ ಮೈಸೂರು ಮಂಜುನಾಥ್ ಅವರ ವೈಲಿನ್ ಸ್ವರ ಹೊರಹೊಮ್ಮಲಿದೆ.

'ಮಾದೇವ ಮಾದೇವ' ಗೀತೆಯ ಮೂಲಕ ಖ್ಯಾತರಾದ ಗಾಯಕಿ ಅನನ್ಯ ಭಟ್, 'ಜಯ ಹೋ' ಖ್ಯಾತಿಯ ವಿಜಯ ಪ್ರಕಾಶ್, ಗಾಯಕಿಯರಾದ ಇಂದು ಮತ್ತು ಲಕ್ಷ್ಮಿ ನಾಗರಾಜ್, ಸುನೀತ ಚಂದ್ರಶೇಖರ್ ಹಿಂದೂಸ್ತಾನಿ, ಶಾಸ್ತ್ರೀಯ ಸಂಗೀತದ ಮೂಲಕ ರಸದೌತಣ ಉಣಬಡಿಸಿದರೆ, ಜಾನಪದ ದೈತ್ಯಾದ ಡಾ.ಮೈಸೂರು ಗುರುರಾಜ್ ಅವರು ಜಾನಪದ ಲೋಕವನ್ನು ಅನಾವರಣಗೊಳಿಸಲಿದ್ದಾರೆ. ಆಪ್ತಮಿತ್ರ ಖ್ಯಾತಿಯ ಶ್ರೀಧರ್ ಜೈನ್ ತಂಡದಿಂದ ಶಿವತಾಂಡವ ನೃತ್ಯ ರೂಪಕದ ವೈಭವ ಗಮನ ಸೆಳೆಯಲಿದೆ.

ಹೀಗೆ ನಾನಾ ವಿಭಾಗದಿಂದ ರಾಜ್ಯ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಲಾವಿದರನ್ನು ಆಯ್ಕೆ ಮಾಡಲಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಕಲಾವಿದರ ಸೇರ್ಪಡೆಯಾಗಲಿದೆ. ಈಗಾಗಲೇ ಕಲಾವಿದರಿಗಾಗಿ ಅರ್ಜಿ ಆಹ್ವಾನ ಮಾಡಿದ್ದು, 1,317 ಅರ್ಜಿಗಳು ತಲುಪಿವೆ. 500ಕ್ಕೂ ಹೆಚ್ಚು ತಂಡಗಳಿಗೆ ಅವಕಾಶ ನೀಡಲು ನಿರ್ಧರಿಸಿದ್ದು 10 ಸಾವಿರಕ್ಕೂ ಹೆಚ್ಚು ಕಲಾವಿದರು ಈ ಬಾರಿಯ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ನಾಡು, ನುಡಿ, ಸಂಸ್ಕೃತಿ, ಪರಂಪರೆಯನ್ನು ಸಾರಲಿದ್ದಾರೆ.

ಶೇಕಡವಾರು ಅವಕಾಶ

ಈ ಬಾರಿಯ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶೇಕಡವಾರು ಅವಕಾಶ ಕಲ್ಪಿಸುತ್ತಿದ್ದು, ಅದರಂತೆ ಶೇ.60ರಷ್ಟು ರಾಜ್ಯಮಟ್ಟದ ಕಲಾವಿದರು(ಸ್ಥಳೀಯ), ರಾಷ್ಟ್ರೀಯ ಶೇ.20, ಅಂತರರಾಷ್ಟ್ರೀಯ ಶೇ.20 ಸೇರಿದಂತೆ ವಿಶೇಷ ಚೇತನರು, ಮಹಿಳೆಯರು, ಎಲ್ಲಾ ವರ್ಗದ ಮತ್ತು ಎಲ್ಲಾ ಕಲಾ ಪ್ರಕಾರಗಳಿಗೆ ಅವಕಾಶ ನೀಡುವ ನಿಟ್ಟಿನಲ್ಲಿ ಆಯ್ಕೆ ಮಾಡಲಾಗುತ್ತದೆ.

-ಎಂ.ಡಿ.ಸುದರ್ಶನ್.
ಸಹಾಯಕ ನಿರ್ದೇಶಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮೈಸೂರಲ್ಲಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ



ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣ ಆವರಣದಲ್ಲಿ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರ ಜನ್ಮ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಆಚರಿಸಲಾಯಿತು.

ಮೈಸೂರು, ಆ.29(ಎಂಕೆ)- ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣ ಆವರಣದಲ್ಲಿ ಜಿಲ್ಲಾಡಳಿತ, ಜಿಪಂ, ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ, ಮೈಸೂರು ಜಿಲ್ಲೆ ಅಮೇಚ್ಯೂರ್ ಸೈಕ್ಲಿಂಗ್ ಅಸೋಸಿಯೇಷನ್ ವತಿಯಿಂದ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್‌ಚಂದ್ ಅವರ ಜನ್ಮ ದಿನಾಚರಣೆ ಅಂಗವಾಗಿ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಆಚರಿಸಲಾಯಿತು.

ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಯುವಕ-ಯುವತಿಯರು ಅಧ್ಯಯನದ ಜೊತೆಗೆ ಕ್ರೀಡೆಯಲ್ಲೂ ಸಾಧನೆ ಮಾಡಬೇಕಾದರೆ, ಶಿಸ್ತು ಅಳವಡಿಕೆ ಅವಶ್ಯವಾಗಿದೆ. ಆಯ್ಕೆ ಮಾಡಿಕೊಂಡ ಕ್ರೀಡೆಯಲ್ಲಿ ತೃಪ್ತಿಯಿದ್ದರೆ, ದೊಡ್ಡ ಮಟ್ಟದ ಸಾಧನೆ ಮಾಡುವವರೆಗೂ ಸತತ ಪ್ರಯತ್ನಗಳನ್ನು ಮಾಡುತ್ತಿರಬೇಕು. ಮುಖ್ಯವಾಗಿ ಯುವ ಜನತೆ ಕೆಟ್ಟ ಚಟಗಳಿಗೆ ದಾಸರಾಗಬಾರದು. ಕೆಟ್ಟ ಚಟದಿಂದ ವೈಯಕ್ತಿಕ ಹಾನಿಯ ಜೊತೆಗೆ ಕುಟುಂಬ ಮತ್ತು ಸಮಾಜಕ್ಕೆ ಹಾನಿಯಾಗಲಿದೆ ಎಂದು ಕಿವಿಮಾತು ಹೇಳಿದರು.

ದೇಶದಲ್ಲಿನ ಯುವ ಜನತೆಗೆ ಕ್ರೀಡೆ ಮತ್ತು ಇನ್ನಿತರೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ, ತೊಡಗಿಸಿಕೊಂಡರೆ ದೇಶದ ಅಭಿವೃದ್ಧಿಗೆ ಪೂರಕವಾಗಲಿದೆ. ಈ ಮೂಲಕ ಯುವ ಜನತೆಯನ್ನು ಸಶಕ್ತರನ್ನಾಗಿಸಬಹುದಾಗಿದೆ. ಹಾಗೆಯೇ ಕ್ರೀಡಾಕೂಟದಲ್ಲಿ ನೀಡುವ ಮೀಸಲಾತಿಯನ್ನು ಹೆಚ್ಚಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಯುವ ಜನತೆಯನ್ನು ಸೆಳೆಯುವ ಕೆಲಸವಾಗಬೇಕು ಎಂದು ಹೇಳಿದರು.

ಬಳಿಕ ಹಾಕಿ ಮೈದಾನಕ್ಕೆ ತೆರಳಿದ ಶಾಸಕರು, ಹಾಕಿ ಸ್ಟಿಕ್ ಹಿಡಿದು ಗೋಲ್ ಬಾರಿಸುವ ಮೂಲಕ ಹಾಕಿ ಪಟುಗಳಲ್ಲಿ ಉತ್ಸಾಹ ತುಂಬಿದರಲ್ಲದೆ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಗಳಿಸುವಂತೆ ಶುಭ ಕೋರಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಫುಟ್ಬಾಲ್ ಅಸೋಸಿಯೇಷನ್ ಜಿಲ್ಲಾ ಕಾರ್ಯದರ್ಶಿ ಮಂಜುನಾಥ್, ನಜರ್‌ಬಾದ್ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಮತ್ತಿತರರಿದ್ದರು.

ಮೈಸೂರು ದಸರಾ ಉತ್ಸವ-2025 ದಿನಗಣನೆ

ಉದಯೋನ್ಮುಖ ಕಲಾವಿದರನ್ನು ಆಹ್ವಾನಿಸಲು ಚಿಂತನೆ; ಕಾರ್ಯಕ್ರಮದ ಸ್ಥಳ ನಿಗದಿಯಾಗಿಲ್ಲ



ಮೈಸೂರಿನ ಹೊರ ವಲಯದ ಉತ್ತನಹಳ್ಳಿ ಬಳಿಯ ವಿಶಾಲ ಮೈದಾನದಲ್ಲಿ ಯುವ ದಸರಾ ಕಾರ್ಯಕ್ರಮ ಆಯೋಜಿಸುವ ಬಗ್ಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು ಸ್ಥಳ ಪರಿಶೀಲನೆ ನಡೆಸಿದರು. ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.29(ಬಿಎಲ್‌ಯು, ಆರ್‌ಕೆ, ವಿಎನ್‌ಎಸ್)- ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ಸಿದ್ಧತೆಗಳು ಭರದಿಂದ ಸಾಗಿವೆ. ಈ ಬಾರಿಯ ಯುವ ದಸರಾಗೆ ಜನ ಸಮೂಹವನ್ನು ಅತ್ಯಾಕರ್ಷಿಸುವ ಬಾಲಿವುಡ್ ಹಾಗೂ ಸ್ಯಾಂಡಲ್ ವುಡ್ ಗಾಯಕರನ್ನು ಆಹ್ವಾನಿಸಲು ತೀರ್ಮಾನಿಸಲಾಗಿದೆ.

ಮೈಸೂರು ದಸರಾ ಮಹೋತ್ಸವದ ಆರಂಭಕ್ಕೆ ಇನ್ನು 24 ದಿನ ಬಾಕಿ ಇದೆ. ಸೆಪ್ಟೆಂಬರ್ 22 ರಿಂದ ಆರಂಭವಾಗಿ ಅಕ್ಟೋಬರ್ 2 ರವರೆಗೆ ದಸರಾ ಮಹೋತ್ಸವ ನಡೆಯಲಿದೆ. ಆದರೆ ಜಿಲ್ಲಾಡಳಿತ ಈ ತನಕ ಯುವ ದಸರಾಗೆ ಕಲಾವಿದರನ್ನು ನಿರ್ಧರಿಸಿಲ್ಲ.

ಈ ಬಾರಿಯ ದಸರಾದಲ್ಲಿ ಬಾಲಿವುಡ್ ಗಾಯಕರಾದ ಸುನಿಧಿ ಚೌಹಾಣ್, ಅರಿಜಿತ್ ಸಿಂಗ್, ಚೆನ್ನೈನ ಅನಿರುದ್ಧ್ ಅವರನ್ನು ಆಹ್ವಾನಿಸಲು ಉತ್ಸುಕವಾಗಿದೆ ಎಂದು ತಿಳಿದು ಬಂದಿದೆ.

ಕಳೆದ ವರ್ಷ ಮೈಸೂರು ನಗರದ ಹೊರ ವಲಯದಲ್ಲಿರುವ ಉತ್ತನಹಳ್ಳಿಯ ಸುಮಾರು 100 ಎಕರೆ ಪ್ರದೇಶದಲ್ಲಿ ಯುವ ದಸರಾ ಆಯೋಜಿಸಿತ್ತು. ಆದರೆ ಆ ಸ್ಥಳದಲ್ಲಿ ಯುವ ದಸರಾ ಆಯೋಜನೆ ಮಾಡಿರುವುದಕ್ಕೆ ಕೆಲವರ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನೆಲೆ ಯುವ ದಸರಾ ಕಾರ್ಯಕ್ರಮದ ಸ್ಥಳ ಇನ್ನು ನಿರ್ಧರಿಸಿಲ್ಲ.

ಆದರೂ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ರಕ್ಷಿತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ ಅವರು ಉತ್ತನಹಳ್ಳಿ ಬಳಿಯ ಮೈದಾನದ ಸ್ಥಳ ಪರಿಶೀಲನೆ ನಡೆಸಿದರು.

ಬಾಲಿವುಡ್ ಹಾಗೂ ಸ್ಯಾಂಡಲ್ ವುಡ್‌ನ ಕೆಲವು ಕಲಾದವಿದರನ್ನು ಆಹ್ವಾನಿಸಲು ಜಿಲ್ಲಾಡಳಿತ ಕಲಾವಿದರ ಪಟ್ಟಿ ಸಿದ್ಧಪಡಿಸಿದೆ. ಆ ಕಲಾವಿದರ ಜೊತೆ ಸಮಾಲೋಚನೆ ಕೂಡ ಮಾಡಿದೆ. ಆದರೆ ಯುವ ದಸರಾದಲ್ಲಿ ಮನೋರಂಜನಾ ಕಾರ್ಯಕ್ರಮ ನೀಡುವ ಕಲಾವಿದರು ಬೇಡಿಕೆ ಇಟ್ಟಿರುವಷ್ಟು ಸಂಭಾವನೆ ನೀಡುವ ಬಗ್ಗೆ ಜಿಲ್ಲಾಡಳಿತ ಹಾಗೂ ಕಲಾ ವಿದರ ನಡುವೆ ಚೌಕಾಶಿ ನಡೆಯುತ್ತಿದೆ. ಇದು ಅಂತಿಮವಾದ ನಂತರ ಕಲಾವಿದರ ಪಟ್ಟಿಯನ್ನು ಅಂತಿಮಗೊಳಿಸಲಾಗುತ್ತದೆ ಎನ್ನಲಾಗಿದೆ.

ಮೈಸೂರಿನ ಯುವ ದಸರಾದಲ್ಲಿ ಬಹುತೇಕ ಕಲಾವಿದರು ಪ್ರದರ್ಶನ ನೀಡಿದ್ದಾರೆ. ಮತ್ತೆ ಅದೇ ಕಲಾವಿದರನ್ನು ಆಹ್ವಾನಿಸುವುದರ ಬದಲು ಸಂಗೀತ ಕ್ಷೇತ್ರದ ಇತ್ತೀಚಿನ ಆಕರ್ಷಕ ಕಲಾವಿದರನ್ನು ಆಯ್ಕೆ ಮಾಡಲು ಜಿಲ್ಲಾಡಳಿತ ಹುಡುಕಾಟ ನಡೆಸುತ್ತಿದೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯೂ ಆದ ಉಪ ವಿಶೇಷಾಧಿಕಾರಿ ವಿಷ್ಣುವರ್ಧನ್ ಅವರು, ಯುವ ದಸರಾದಲ್ಲಿ ಕಲಾವಿದರನ್ನು ಆಯ್ಕೆ ಮಾಡಿದ ನಂತರ ಕಾರ್ಯಕ್ರಮದ ಸ್ಥಳವನ್ನು ಅಂತಿಮಗೊಳಿಸಲಾಗುವುದು ಎಂದು ತಿಳಿಸಿದರು. ಹೆಚ್ಚಿನ ಪ್ರೇಕ್ಷಕರನ್ನು ಆಕರ್ಷಿಸಲು ಎ.ಆರ್.ರೆಹಮಾನ್, ಇಳಯರಾಜ, ಶ್ರೇಯಾ ಘೋಷಾಲ್ ಸೇರಿದಂತೆ ಕೆಲವು ಕಲಾವಿದರನ್ನು ಆಹ್ವಾನಿಸಲು ಜಿಲ್ಲಾಡಳಿತ ಚಿಂತನೆ ನಡೆಸುತ್ತಿದೆ ಎನ್ನಲಾಗಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕೂಲಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅಂದೊಂದಿತ್ತು ಕಾಲ(ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಕೂಲಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಉಸಿರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೂಲಿ (ಕ)	4 ಪ್ರದರ್ಶನಗಳು
ರಾಜಕಮಲ್	
ರಿಪ್ಪನ್ ಸ್ವಾಮಿ (ಕ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ವಿಷ್ಣುವರ್ಧನ(ಕ) + ಸಿಂಹರೂಪಿಣಿ (ಕ)	2+2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಉಸಿರು (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೂಲಿ (ತ): ಬೆ.7ಕ್ಕೆ, ಮ.3ಕ್ಕೆ, ರಾ.10.15ಕ್ಕೆ, ವಾರ್ -2 (ಹಿಂ): ಬೆ.10.45ಕ್ಕೆ, ಸಂ.6.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.7ಕ್ಕೆ, ಸು ಫ್ರಂ ಸೋ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ವಾರ್ -2 (ಹಿಂ): ರಾ.9.50ಕ್ಕೆ.
ಸ್ಕ್ರೀನ್ 3	ಕೂಲಿ (ತ): ಬೆ.7.05ಕ್ಕೆ, ರಾ.8.15ಕ್ಕೆ, ಕೂಲಿ (ಕ): ಬೆ.10.30ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಮ.1.50ಕ್ಕೆ, ವಾರ್ -2 (ಹಿಂ): ಸಂ.4.35ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಬೆ.11.55ಕ್ಕೆ, ಮ.3.25ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821-2973519

ಸ್ಕ್ರೀನ್ 1	ಸು ಫ್ರಂ ಸೋ (ಕ): ಬೆ.10ಕ್ಕೆ, ಮ.3.55ಕ್ಕೆ, ವಾರ್-2 (ಹಿಂ): ಮ.12.40ಕ್ಕೆ, ಕೂಲಿ (ಕ): ಸಂ.6.35ಕ್ಕೆ, ಕೂಲಿ (ತ): ರಾ.9.40ಕ್ಕೆ.
ಸ್ಕ್ರೀನ್ 2	ಕೂಲಿ (ತ): ಬೆ.6.45ಕ್ಕೆ, ಬೆ.10ಕ್ಕೆ, ಸಂ.4.35ಕ್ಕೆ, ರಾ.7.50ಕ್ಕೆ, ವಾರ್-2 (ಹಿಂ): ಮ.1.15ಕ್ಕೆ.
ಸ್ಕ್ರೀನ್ 3	ವಾರ್-2 (ಹಿಂ): ಬೆ.10.05ಕ್ಕೆ, ಸು ಫ್ರಂ ಸೋ (ಕ): ಮ.1.20ಕ್ಕೆ, ರಾ.7.10ಕ್ಕೆ, ಕೂಲಿ (ಕ): ಸಂ.4ಕ್ಕೆ, ಕೂಲಿ (ತ): ರಾ.9.50ಕ್ಕೆ.
ಸ್ಕ್ರೀನ್ 4	ಕೂಲಿ (ತ): ಬೆ.7ಕ್ಕೆ, ಮಹಾವತಾರ ನರಸಿಂಹ (3ಡಿ)(ಕ): ಬೆ.10.15ಕ್ಕೆ, ಸಂ.4ಕ್ಕೆ, ಕೂಲಿ (ಕ): ಮ.12.45ಕ್ಕೆ, ವಾರ್-2 (ಹಿಂ): ಸಂ.6.35ಕ್ಕೆ, ರಾ.9.55ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಾಧಕರಿಗೆ 'ಧ್ವನಿ ಕೊಟ್ಟ ಧಣಿ ಪ್ರಶಸ್ತಿ' ಪ್ರದಾನ



ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರಿಗೆ 'ಧ್ವನಿ ಕೊಟ್ಟ ಧಣಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಮೈಸೂರು, ಆ.29(ಎಂಕೆ)- ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಜನ್ಮದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರಿಗೆ 'ಧ್ವನಿ ಕೊಟ್ಟ ಧಣಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವಿಶ್ರಾಂತ ಪ್ರಾಧ್ಯಾಪಕಿ ಭ್ರಮರ ಬಹದ್ದೂರ್, ಕರ್ನಾಟಕ ಕರಾವಳಿ ಸಾಂಸ್ಕೃತಿಕ ಒಕ್ಕೂಟದ ಸ್ಥಾಪಕ ಡಾ.ಜಗನ್ನಾಥ ಶೆಣೈ, ಹಿರಿಯ ಯೋಗ ಶಿಕ್ಷಕ ಜಗದೀಶ್ ಶೆಟ್ಟರ್, 'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಪತ್ರಿಕಾ ಛಾಯಾಗ್ರಾಹಕ ಲಕ್ಷ್ಮಿನಾರಾಯಣ ಯಾದವ್, ಗೋವಾ ಚಳುವಳಿ ಹೋರಾಟಗಾರ ಗಿರಿಜಾ ಶಂಕರ್ ಪಾಟೀಲ್ ಹಾಗೂ ಅಸೋಸಿಯೇಟ್ ಪ್ರೊಫೆಸರ್ ಡಾ.ಆನಂದ್ ಅವರಿಗೆ 'ಧ್ವನಿ ಕೊಟ್ಟ ಧಣಿ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಸದಾ ಅಸಂಘಟಿತ ಸಮುದಾಯಗಳ ಪರವಾಗಿದ್ದ ದೇವರಾಜ ಅರಸು ಅವರು, ರಾಜ್ಯದ ಇತಿಹಾಸದಲ್ಲಿ ಯಾರೂ ಮಾಡಲಾಗದಷ್ಟು ಜನಪರ ಕಾರ್ಯಕ್ರಗಳನ್ನು ಜಾರಿಗೊಳಿಸುವ ಮೂಲಕ ಜನಮಾನಸದಲ್ಲಿ ನೆಲೆಸಿದ್ದಾರೆ. ರಾಜಕಾರಣಿಗಳಿಗೆ ಬೆಂಗಳೂರು, ಮೈಸೂರು ಎಲ್ಲೆಂದರಲ್ಲಿ ಮನೆ ಇರುತ್ತದೆ. ಆದರೆ, ಅರಸು ಅವರಿಗೆ ಬೆಂಗಳೂರು ಮತ್ತು ಮೈಸೂರಲ್ಲಿ ಮನೆಯಿಲ್ಲ. ಆದರೆ ಅವರು ಎಲ್ಲರ ಮನದಲ್ಲಿದ್ದಾರೆ ಎಂದು ಸ್ಮರಿಸಿದರು.

ಬಡವರ ಕಂಡರೆ ಮರುಗುತ್ತಿದ್ದ ಅವರು ಜೀತ ಪದ್ಧತಿ, ತಲೆ ಮೇಲೆ ಮಲ ಹೊರುವುದನ್ನು ನಿಷೇಧಿಸಿ, ಉಳುವವನೇ ಭೂಮಿಯ ಒಡೆಯ ಯೋಜನೆ ಜಾರಿಗೊಳಿಸುವ ಮೂಲಕ ಭೂ ರಹಿತರನ್ನು ಭೂ ಮಾಲೀಕರನ್ನಾಗಿ ಮಾಡಿದರು. ರಾಷ್ಟ್ರದ ಇತಿಹಾಸದಲ್ಲಿಯೇ ಡಿ.ದೇವರಾಜ ಅರಸು ಅವರ ಸಾಧನೆ, ಕೊಡುಗೆ ಅವಿಸ್ಮರಣೀಯ. ಅವರು, ನಿಜವಾಗಿಯೂ ಧ್ವನಿ ಇಲ್ಲದವರ ಪಾಲಿಗೆ ಧ್ವನಿ ಕೊಟ್ಟ ಧಣಿಯಾಗಿದ್ದಾರೆ ಎಂದರು.

ಅರಸು ಜಾಗೃತ ಅಕಾಡೆಮಿ ಚಾರಿಟಬಲ್ ಟ್ರಸ್ಟ್ ಉಪಾಧ್ಯಕ್ಷ ಹೆಚ್.ಎ.ವೆಂಕಟೇಶ್, ಗೌರವ ಕಾರ್ಯದರ್ಶಿ ಡಾ.ಎಂ.ಜಿ.ಆರ್.ಅರಸ್, ತುಮಕೂರು ವಿವಿ ವಿಶ್ರಾಂತ ಕುಲಪತಿ ಡಾ.ವೈ.ಎಸ್.ಸಿದ್ದೇಗೌಡ, ಅನ್ವೇಷಣಾ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಅಮರ್‌ನಾಥರಾಜೇ ಅರಸ್, ಕಂಠೀರವ ಸ್ಟುಡಿಯೋ ಮಾಜಿ ಅಧ್ಯಕ್ಷೆ ವಿಜಯಲಕ್ಷ್ಮಿ ಅರಸ್ ಮತ್ತಿತರರಿದ್ದರು.

ದಸರಾ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆಗೆ ವಿರೋಧ

ಕರ್ನಾಟಕ ಸೇನಾ ಪಡೆಯಿಂದ ಹಳೇ ಡಿಸಿ ಕಚೇರಿ ಬಳಿ ಪ್ರತಿಭಟನೆ

ಮೈಸೂರು, ಆ.29(ಜಿಎ)-ಕನ್ನಡ ಬಾವುಟ, ಭುವನೇಶ್ವರಿ, ಅರಿಶಿನ-ಕುಂಕುಮದ ವಿರೋಧಿ ಬಾನು ಮುಸ್ತಾಕ್ ಅವರನ್ನು ದಸರಾ ಉದ್ಘಾಟಿಸಲು ಆಹ್ವಾನಿಸಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ, ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ದಸರಾ ಉದ್ಘಾಟನೆಗೆ ಭಾನು ಮುಷ್ತಾಕ್ ಸೂಕ್ತ ಆಯ್ಕೆ ಅಲ್ಲ. ದಸರಾ ಧಾರ್ಮಿಕ ಆಚರಣೆ. ಮಹಾರಾಜರು ನೂರಾರು ವರ್ಷಗಳ ಹಿಂದೆ ಪ್ರಾರಂಭಿಸಿದ ಧಾರ್ಮಿಕ ಆಚರಣೆ ನಾಡಹಬ್ಬ ದಸರಾ. ಈ ಧಾರ್ಮಿಕ ಹಬ್ಬದ ಹಿಂದೆ ಶ್ರದ್ಧೆ ಭಕ್ತಿ, ಸಂಸ್ಕಾರ, ಹಿಂದೂ ಧರ್ಮದ ಸಂಸ್ಕೃತಿ, ಪದ್ಧತಿ ಇದೆ. ತಾಯಿ ಚಾಮುಂಡೇಶ್ವರಿಯ ಪೂಜಾ ಆಚರಣೆಯಾಗಿದೆ. ಧಾರ್ಮಿಕ ವಿಧಿ ವಿಧಾನಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಧಾರ್ಮಿಕತೆಯಲ್ಲಿ ನಂಬಿಕೆ ಇಲ್ಲದವರು, ಮೂರ್ತಿ ಪೂಜೆಯಲ್ಲಿ ನಂಬಿಕೆ ಇಲ್ಲದವರನ್ನು ಆಯ್ಕೆ ಮಾಡಿರುವುದು ಖಂಡನೀಯ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಕನ್ನಡವನ್ನು ಭುವನೇಶ್ವರಿ ಆಗಿ ಒಪ್ಪದ ಬಾನು ಮುಷ್ತಾಕ್ ತಾಯಿ ಚಾಮುಂಡೇಶ್ವರಿಯನ್ನು ನಾಡದೇವತೆಯಾಗಿ ಒಪ್ಪಿ, ಪುಷ್ಪಾರ್ಚನೆ ಮಾಡಿ, ಮಂಗಳಾರತಿ ತೆಗೆದುಕೊಳ್ಳುತ್ತಾರಾ? ಅರಿಶಿನ-ಕುಂಕುಮ, ಭುವನೇಶ್ವರಿಯ ಬಗ್ಗೆ ದ್ವೇಷದ ಭಾವನೆ ಹೊಂದಿರುವ, ಕನ್ನಡದಿಂದ ಮುಸಲ್ಮಾನರನ್ನು ಹೊರಗಿಟ್ಟಿದ್ದೀರಿ ಎಂದು ಹೇಳಿರುವುದು ಅತ್ಯಂತ ನೋವಿನ ಸಂಗತಿ. ಕರ್ನಾಟಕದ ನಮ್ಮೆಲ್ಲರಿಗೂ ಕನ್ನಡ ಮಾತೃ ಭಾಷೆಯಾಗಿದೆ. ಆದರೆ, ನಿಮ್ಮ ಧರ್ಮೀಯರಿಗೆ ಕನ್ನಡ ಮಾತೃ ಭಾಷೆಯಾಗಿದೆಯಾ? ನೀವು ಕನ್ನಡವನ್ನು ಮಾತೃ ಭಾಷೆಯಾಗಿ ಸ್ವೀಕರಿಸಿದ್ದೀರಾ ಎಂದು ಪ್ರಶ್ನಿಸಿದರು.

ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂದ ಡಿಕೆಶಿ ವಿರುದ್ಧ ಆಕ್ರೋಶ



ಬಾನು ಮುಸ್ತಾಕ್ ಅವರನ್ನು ದಸರಾ ಉದ್ಘಾಟಿಸಲು ಆಹ್ವಾನಿಸಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ, ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯದಲ್ಲಿ ಅನೇಕ ಹಿರಿಯ ಘಟಾನುಘಟಿ ಸಾಧಕರುಗಳಿದ್ದಾರೆ. ಅದರಲ್ಲಿ ವಿಶೇಷವಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್, ನಟ ಅನಂತನಾಗ್, ಸಾಲು ಮರದ ತಿಮ್ಮಕ್ಕ, ಬೂಕರ್ ಪ್ರಶಸ್ತಿ ಬರಲು ಕಾರಣಕರ್ತರಾಗಿರುವ ಅನುವಾದಕಿ ದೀಪಾ ಬಸ್ತಿ ಅವರನ್ನು ದಸರಾ ಉದ್ಘಾಟಕರನ್ನಾಗಿ ಆಯ್ಕೆ ಮಾಡಬೇಕು. ಡಿಸೆಂಬರ್‌ನಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬಾನು ಮುಷ್ತಾಕ್‌ರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದರಿಂದ ಮತ್ತೆ ಅವರ ಆಯ್ಕೆ ಬೇಡ ಎಂದು ಆಗ್ರಹಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಮುಂಡಿಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂದು ಹೇಳಿರುವುದು ಅತ್ಯಂತ ನೋವಿನ ಸಂಗತಿ. ಸರ್ಕಾರ ಹಿಂದೂ ದೇವಾಲಯಗಳನ್ನು ಮುಜರಾಯಿಗೆ ಸೇರಿಸಿರುವಂತೆ ರಾಜ್ಯದಲ್ಲಿರುವ ಮಸೀದಿ ಹಾಗೂ ಎಲ್ಲಾ ಚರ್ಚ್‌ಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿ. ಗೌರವದ ಸ್ಥಾನದಲ್ಲಿರುವವರು ಒಂದು ಸಮುದಾಯ ಓಲೈಸಲು ಈ ರೀತಿ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಹೇಳಿಕೆ ನೀಡಬಾರದು. ಕೂಡಲೇ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ, ಪ್ರಭುಶಂಕರ್, ಗೋಲ್ಡನ್ ಸುರೇಶ್, ಪ್ರಜೀಶ್, ಸಿಂದುವಳ್ಳಿ ಶಿವಕುಮಾರ್, ಮಧುವನ ಚಂದ್ರು, ಬೋಗಾದಿ ಸಿದ್ದೇಗೌಡ, ವರಕೂಡು ಕೃಷ್ಣೇಗೌಡ, ನೇಹ, ಭಾಗ್ಯಮ್ಮ, ಹೊನ್ನೇಗೌಡ, ಶಿವಲಿಂಗಯ್ಯ, ಮಹದೇವಸ್ವಾಮಿ, ಹನುಮಂತಯ್ಯ, ನಂದಕುಮಾರ್, ಡಾ.ನರಸಿಂಹೇಗೌಡ, ಡಾ.ಶಾಂತರಾಜೇಅರಸ್, ರಾಧಾಕೃಷ್ಣ, ನಾರಾಯಣ ಗೌಡ, ಕುಮಾರ್, ರಘು ಅರಸ್, ನಾಗರಾಜು, ಗೀತಾಗೌಡ, ಅಶೋಕ್, ಆನಂದ್ ಗೌಡ, ರಘು ಆಚಾರ್, ದರ್ಶನ್ ಗೌಡ, ಎಳನೀರು ರಾಮಣ್ಣ, ಪ್ರದೀಪ್, ರವಿ ಒಲಂಪಿಯಾ, ಮೂರ್ತಿಲಿಂಗಯ್ಯ, ಗಣೇಶ್ ಪ್ರಸಾದ್, ಬಸವರಾಜು, ರಾಮಕೃಷ್ಣೇಗೌಡ, ಹನುಮಂತೇಗೌಡ, ಚಂದ್ರಶೇಖರ್, ಸ್ವಾಮಿಗೌಡ, ತ್ಯಾಗರಾಜು, ಪ್ರಭಾಕರ್, ರವೀಶ್, ವಿಷ್ಣು ಸೇರಿದಂತೆ ಹಲವರು ಪಾಲ್ಗೊಂಡಿದರು.



ಶ್ರೀ ಸಂದೇಶ್ ನಾಗರಾಜ್‌ರವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶ್ರೀ ಸಿದ್ಧರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಸಂದೇಶ್ ನಾಗರಾಜ್
80ನೇ ವರ್ಷದ ಹುಟ್ಟುಹಬ್ಬ
ಸದ್ಸಪಚಂದ್ರ ದರ್ಶನ ಶಾಂತಿ (ಸಾತಾಭಿಷೇಕ) ಮಹೋತ್ಸವ ಕಾರ್ಯಕ್ರಮ
ಅಭಿಮಾನಿಗಳಿಗೂ, ಕಾರ್ಯಕರ್ತರಿಗೂ
ಹಾಗೂ ಸರ್ವರಿಗೂ ಸುಸ್ವಾಗತ
ಸ್ವಾಗತ ಕೋರುವವರು
ಓಂ ಶಕ್ತಿ ಗ್ರೂಪ್
ಅರ್ಜುನ್‌ಜನ್ಯ ರವರಿಂದ
ರಸಮಂಜರಿ ಕಾರ್ಯಕ್ರಮ.
ಸ್ಥಳ : ದಸರಾವಸ್ತು ಪ್ರದರ್ಶನ ಆವರಣ
ದಿನಾಂಕ : 31-08-2025
ಭಾನುವಾರ
ಸಮಯ: ಬೆಳಗ್ಗೆ 11 ಕ್ಕೆ
ಶ್ರೀ ಪ್ರವೀಣ್
ಓಂ
ಶಕ್ತಿ
ಪೈ. ಚಂದ್ರಶೇಖರ್
Design by SuprabhA Shades Mysuru - 98452 18266